PAPERS LAID ON THE TABLE

SECRETARY.—I beg to lay the following Bills as passed by the Legislative Council—

(i) The Karnataka Land Revenue (Amendment) Bill, 1975.
(ii) The Karnataka Rent Control (Amendment) Bill, 1975.

MADAM SPEAKER.—The Bills are laid*

Third Report of the Committee on privileges—presentation

SRI S. V. NAIK (Chairman).—I beg to present the Third Report of the Committee of Privileges on the question of privilege against the Nirmala Engineering Company.

MADAM SPEAKER.—Report is presented.

Discussion on the Supplementary Estimates for 1975-76 Demands for Grants.

SRI M. Y. GHORPADE (Minister for Finance and Housing).—Madam Speaker, on the recommendation of the Governor of Karnataka, I beg to move: "that a further sum not exceeding Rs 45 lakhs be granted to Government to defray the charges which will come in course of payment during the year ending 31st day of March 1976 in respect of, State Legislature and Election."

MADEM SPEAKER.—Motion moved :

"That a further sum not exceeding Rs 45 lakhs be granted to Government to defray the charges which will come in course of payment during the year ending 31st day of March 1976 in respect of State Legislature and Election "

The other demands listed are also deemed to have been moved.

All the demands are before the House. If any member wants to participate in the discussion, he can do so.

(Nobody stood up to speak)

† SRI M. Y. GHORPADE.— Madam Speaker, this is the first instalment of supplementary estimates for the year 1975-76 and as has been mentioned in the introductory note, this supplementary demands consist mainly of adjustment items. As the House is aware,

---

* Bills appended as Annexure

† Indicates that remarks or speeches have not been revised by the member concerned.

according to the Rules of Procedure, any new item of expenditure or even an adjustment which has not been specifically brought to the notice of this House has to form part of the supplementary estimates. And so during the course of the year from time to time we have to come before this House with supplementary estimates not only for approval of fresh expenditure but also of various adjustments items. In this supplementary estimates the total amount involved is Rs. 35·25 crores. However, it is difficult to note that the net outgo is only of the order of 2·38 crores of rupees and even out of this 2·38 crores of rupees, only Rs. 1·64 crores will fall during this year and Rs. 62·31 lakhs is mostly covered by savings.

Now out of the total amount of Rs. 35 25 crores included in the supplementary estimates, as much as Rs. 30·43 crores are accounting adjustments. Another Rs. 44 lakhs are covered by Central assistance, another Rs 2 crores are covered by other receipts. And therefore the net outgo is 'only of the order of Rs. 2·38 crores of the various demands listed here. I may point out that there are 3 main demands, *viz.*, Demand No. 49, Demand No. 52 and Demand No 54, which account for almost Rs. 34 crores. I think it is necessary for me to briefly explain these three major demands. Demand No. 52, pertain to major item which however does not involved any outgo. It pertains to anitem amounting to Rs. 22·42 crores which is shown as investment in the Mysore Power Corporation as a result of revaluation of assets. In other words, the assets before being handed over to Mysore Power Corporation were estimated at Rs. 125 crores. This was in 1972-73. However at that time only Rs. 102 crores has already been brought to the notice of this House since Rs 102 crores was the actual expenditure on this item as a result of revaluation. The balance amount also has to be brought to the notice of this House. The point here is that this is only as a result of revaluation of assets which were considered necessary at that time in order to ensure that the Mysore Power Corporation has realistic borrowing capacity. So, though this is in the nature of an adjustment item or item which does not involve a net outgo, this balance of Rs. 22 crores has to be brought to the notice of this House through this demand.

Then Demand No 54. This demand pertains to an amount of Rs. 4½ crores. As the House is aware, at the time of the budget we took certain decision to levy a 10 per cent surcharge on the Motor Vehicles Tax and also a one per cent market fee and this amount was to be utilised for roads, specially rural communications. So, this demand of Rs. 4½ crores consist of Rs. 2 crores as a result of the 10 per cent surcharge and roughly Rs 2½ crores as a result of the market fees. This has to be shown in the Supplementary Demands because this has been put in the fund created for this purpose. So far as market fees is concerned, only Rs. 2½ crores is included in this 4½ crores through in a full year this is capable of yielding Rs. 3½ to 4 crores.

Then there is Demand No. 49 which consists of two or three items The most important item is shown against the Mysore Iron and Steel Ltd., an item of Rs 2·13 crores is the result of the decision to convert the loan given to the MISL in to share capital and therefore this process of conversion of loan into share capital has to figure in the Supplementary Demands, though this also does not involve any net outgo. It may be recalled that this is in connection with the Forge Plant. The total cost of the Forge plant is of the order of Rs. 14 crores and when this matter was discussed with the Government of India, it was decided that in the share capital the State Government would retain 60 per cent and the Central Government 40 per cent. So, in pursuance of this decision, it was decided that the loan given by the State Government to the MISL should be converted into equity and it is in this connection that this demand figures in the Supplementary Demands. I may also point out that about Rs. 45 lakhs had been included in this year's budget towards the share capital and now by conversion of loan into equity of Rs. 2·93 crores, the total State Government share in this 14 crores would be Rs. 3·38 crores amounting to 80 per cent of the share capital. It may also be recalled that out of this 14 crores, Rs. 7 crores is roughly the equity and Rs. 7 crores the loan amount. The MISL is going ahead with the Forege Plant with the help of its own resources and also what it has planned to get by way of loans from the IDB and other financial institutions. The point here is that this particular item merely refers to the conversion of loan in to equity and there is no net outgo.

The other item in this demands is Rs. 1 crore which was given by way of loan in June 1975 to the Mysore Paper Mills which as a programme to expand its capacity from 24,000 tonnes to 70,000 tonnes and this was also considered necessary and it has to be included in the Supplementary Demands.

The other two items are Rs 20 lakhs shown against the Chitradurga Copper Co, and Rs. 56 lakhs in connection with the Karnataka Copper Consortium Ltd. Now these amounts also are considered necessary But here I may point out that most of these are adjustment items For instance, in this Rs. 56 lakhs only Rs. 10 lakhs are towards the share capital whereas the other 46 lakhs are adjustment items pertaining mainly to the Assets transferred to the Consortium.

As I mentioned, Madam Speaker, these three items take care of about Rs 31 crores. However, I think it is my duty to briefly refer to the other items of expenditure.

The first demand, *viz.*, State Legislature and Elections is a well-known item and Rs. 45 lakhs is the estimate This sort of a demand has figures several times before and this sort of expenditure has to be shared between the Government of India and the State Government for a purpose which is well known.

Demand No. 5 is Taxes on Vehicles. This, as I have mentioned, refers to the ten per cent surcharge. This figures in the Supplementary Demands merely because this amount has to be transferred to the funds set up for this purpose therefore this process of transfer to the fund constitutes a new item which has to be brought to the notice of the Legislature.

Demand No. 23 refers to the land which was given to the Indian Institute of Science, Bangalore. As you know, Madam, at the time of the Golden Jubilee Celebrations of the Indian Institute of Science, an extent of land measuring 49 acres and 39 gunthas was given to them and the estimate to acquire this land was Rs. 7·35 lakhs. Out of this, 2·65 lakhs is still to be deposited to finalise the acquisition of lands. This 2·65 lakhs given to the Indian Institute of Science for the acquisition of land some time ago has to figure in the Supplementary Demands. However, only a token amount of Rs. 1,000 is mentioned here as this amount can be found by reappropriation.

Then, Demand 24 refers to an amount of Rs. 15 lakhs given to the Karnataka State Football Association for the construction of a modern stadium at Bangalore, the need for which has universal support.

Demand No. 26 pertains to Public Health and Sanitation. Here we have advanced Rs. 75,000 apart from Rs. 25,000 advanced earlier for the initial expense connected with the formation of the State Board for prevention and control of water pollution in the State and this demand is also absolutely non-controversial.

As regards Demand No. 37, about Rs. 69 lakhs is shown under Co-operation. Here also there is no net outgo This is mostly expenditure incurred at the end of last year and found from the monies available in the budget. However, since these items took place after the last Supplementary Demands were presented to this House, it has to come before this House in this form.

About Demand No. 38, the main item is the loan to the Karnataka Agro-Industries Corporation. Last year, the Government of India gave a loan of Rs. 8 lakhs for this purpose and this process of passing on this Rs. 8 lakhs to the State Agro-Industries Corporation is reflected in this Demand.

Demand No. 45.—This refers to the Dairy Development. There are two items. One is a provision towards the share capital of Rs. 10 lakhs by the State Government to the Dairy Development Corporation. This is a matching contribution by the State Government. Because the Central Government gave Rs. 10 lakhs we have to give Rs. 10 lakhs. This is reflected in the first item. The second item pertains to the expenditure of 10 lakhs. This ten lakhs is meant for machinery and equipment for the Government Dairy. So far as the first item is concerned only a token amount of Rs. 1000 is shown because the amount can be found by reappropriation.

Demand No. 47—This is a token amount shown. This refers to the provision of Rs. 14 lakhs as loan. As has been explained in the explanatory note, five industries of the Forest Department were transferred to the Karnataka Forest Industries Corporation. The five industries transferred are :

1. Government Saw Mills and Work Shop, Murkal
2. Wood Preservation Plant, Shimoga
3. Government Integrated Wood Industries, Shimoga
4. Jai Hind Saw Mills, Dandeli
5. Wood Preservation Plant, Alpe.

For this purpose working capital had been provided. Now when these are handed over to the corporation, the moneys pertaining or provided for this purpose have to be handed over to the corporation. Therefore in addition to Rs. 5 lakhs already given another Rs. 9 lakhs, making a total of Rs. 14 lakhs, is given to the Corporation and this is mentioned in the Demand. There is no difficulty about it because money was provided and this demand arises out of the procedure of handing over this money to the corporation.

Demand No. 48—This refers to the share capital of Rs. 6.69 lakhs to the Land Army Corporation.

Demand No. 49—I have already explained.

Demands Nos 50, 51, 52 and 54 have already been explained.

Thus, Madam Speaker, in this Supplementary Demand I may reiterate that the main Demands are three which take care of Rs. 34 crores. But the significant thing is, out of total of 35.5 crores the net outgo of cash is only Rs. 2.83 crores, of which 1.64 crores pertains to items of expenditure in 1974-75 not covered by the final Supplementary Estimate last year and the balance is shown now. Thus this is really a simple Supplementary Demand wehre the net out-go is minimum and whatever the net out-go is fully covered by savings in various departments. I took sometime to explain this because it also reflects certain major developmental activities which are going on now in the State and for which funds have been provided in one form or the other.

MADAM SPEAKER.—Sri K. N. Veerappa Gowda will speak.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ೧೯೭೫-೭೬ನೇ ಇಸವಿಯ ಸಪ್ಲಿಮೆಂಟರಿ ಎಸ್ಟಿಮೇಟನ್ನು ಏನು ನಮ್ಮ ಮುಂದೆ ಇಟ್ಟಿದ್ದಾರೆ ಇದನ್ನು ಸಾಕಷ್ಟು ನೋಡಿದ್ದರಲ್ಲಿ ಬಹುಶಃ ಏನು ಈಗ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟನ್ನು ತಂದು ಎಮರ್ಜೆನ್ಸಿಯನ್ನು ದೇಶದಲ್ಲಿ ಇಟ್ಟುಕೊಂಡು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು, ಸಾಮಾನ್ಯ ಜನರಿಗೆ ಮತ್ತು ರೈತವರ್ಗಕ್ಕೆ ಅನುಕೂಲವಾಗಬೇಕು ಎನ್ನುವ ಪ್ರಯತ್ನಕ್ಕೆ ಹೊರಟಿದ್ದೇವೋ ಆ ಮಟ್ಟದಲ್ಲಿ ಬಹುಶಃ ಈ ಸಪ್ಲಿಮೆಂಟರಿ ಎಸ್ಟಿಮೇಟ್ ಕಾಣುವುದಿಲ್ಲ. ನಮ್ಮ ಹಣಕಾಸಿನ ಸಚಿವರು ಸ್ವಾಭಾವಿಕವಾಗಿ ಹಳ್ಳಿಯಿಂದಲೇ ಬಂದವರಾದರೂ ಕೂಡ ಹಳ್ಳಿಗಳಿಗೆ ಮತ್ತು ಸಾಮಾನ್ಯ ನೀರಾವರಿಗೆ ಆಗಬೇಕಾಗಿರತಕ್ಕಂಥ ಕೆಲಸಗಳಿಗೆ ಹಣ ಒದಗಿಸತಕ್ಕಂಥಾದ್ದು ಸಾಕಷ್ಟು ಕಡಿಮೆಯಾಗಿದೆ. ಅವರ

ಮನಸ್ಸಿನಲ್ಲಿ ಯಾವಾಗ ನೋಡಿದರೂ ಕೂಡ ಡಿ. ಎ. ಜಾಸ್ತಿ ಮಾಡತಕ್ಕಂಥ ವಿಷಯ. ಮತ್ತೆ ಅದಕ್ಕೆ ಸಂಬಂಧಪಟ್ಟಹಾಗೆ ಕಮಿಷನ್ ಅಪಾಯಿಂಟ್ ಮಾಡತಕ್ಕಂಥ ವಿಷಯ, ಮತ್ತು ಆಗಿಂದಾಗ್ಯೆ ನಾಲ್ಕಾರು ಸಾವಿರ ರೂಪಾಯಿಗಳನ್ನು ಪಡೆಯತಕ್ಕಂಥ ಛೇರ್ಮನ್‌ಗಳನ್ನು ಮಾಡಿ ಅವರು ಸ್ವಾಭಾವಿಕವಾಗಿ ತಮಗೆ ಬರತಕ್ಕಂಥ ಸಂಬಳದ ಅಂತಸ್ತನ್ನು ಇಟ್ಟುಕೊಂಡು ರಿಪೋರ್ಟ್ ಮಾಡಿ ಏನು ಕಳಿಸುತ್ತಾರೋ ಅದರ ಮೇಲೆ ಹೆಚ್ಚಾಗಿ ಮಾನ್ಯ ಹಣಕಾಸಿನ ಸಚಿವರ ಮನಸ್ಸು ಹೋಗುತ್ತಾ ಇರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಬಹುಶಃ ಎಮರ್ಜನ್ಸಿ ಬಂದಿದ್ದರಿಂದ ಸಾಕಷ್ಟು ಬೆಲೆಗಳು ಇಳಿದಿದೆ ಮತ್ತು ಎಲ್ಲಾ ಕೆಲಸ ಕಾರ್ಯಗಳನ್ನು ಸುಗಮವಾಗಿ ಮಾಡತಕ್ಕಂಥ ಅವಕಾಶ ಬಂದಿರುವುದು ನಮಗೆ ಬಹಳ ಸಂತೋಷವಾಗಿದೆ. ಯಾವ ತೊಂದರೆಗಳೂ ತಾಪತ್ರಯಗಳೂ ಇಲ್ಲದೇ ಇರುವ ಹಾಗೆ ನಮ್ಮ ಕ್ಷೇತ್ರದಲ್ಲಿ ಕೆಲಸಗಳನ್ನು ಸೂಕ್ತವಾಗಿ ಮಾಡಿಕೊಂಡು ಹೋಗತಕ್ಕಂಥ ಅವಕಾಶ ದೇಶದಲ್ಲಿ ಬಂದಿರುವುದು ನಿಜವಾಗಿಯೂ ಸಂತೋಷವಾಗಿದೆ. ರೇಟು ಜಾಸ್ತಿಯಾದಾಗ ಅಕಸ್ಮಾತ್ ಡಿ. ಎ. ಯನ್ನು ಜಾಸ್ತಿಮಾಡುತ್ತೀರಿ, ಆದರೆ ರೇಟು ಇಳಿದಾಗ ಡಿ. ಎ ಕಡಿಮೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ಈ ಬಗ್ಗೆ ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ ಡಿ.ಎ ಕೊಡುವ ಬದಲು ಅಗತ್ಯವಸ್ತುಗಳು ಏನು ಇವೆ ಅವುಗಳನ್ನು ಸರ್ಕಾರದವರು ಅಫಿಷಿಯಲ್ಸ್‌ಗೆ ಸಬ್ಸಿಡಿ (ರೇಟ್) ರೂಪದಲ್ಲಿ ಕೊಡತಕ್ಕಂಥ ಅವಕಾಶ ಮಾಡಿದರೆ ಬಹುಶಃ ಕೋಟ್ಯಾಂತರ ರೂಪಾಯಿ ಡಿ. ಎ. ಉಳಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ನಾನು ಅನೇಕ ಬಾರಿ ಹೇಳಿದ್ದುಂಟು. ಈಗ ಎಮರ್ಜನ್ಸಿ ಬಂದಿರುವುದರಿಂದ ಸದ್ಯಕ್ಕೆ ನಾವು ಯಾವ ಬ್ಯಾಡ್ಜ್‌ಗಳನ್ನೂ ಕಾಣುತ್ತಾ ಇಲ್ಲ. ಸಾಮಾನ್ಯವಾಗಿ ಅಸೆಂಬ್ಲಿ ನಡೆಯುವಾಗ ಮಾಮೂಲಾಗಿ ಡೇರಾಗಳು ಬ್ಯಾಡ್ಜ್‌ಗಳು ನಮ್ಮ ಕಣ್ಣಿಗೆ ಕಾಣತಕ್ಕಂಥಾದ್ದು, ನಾವು ಅದರ ಬಗ್ಗೆ ಮಾತನಾಡತಕ್ಕಂಥಾದ್ದು ಹಾಗೂ ಅದಕ್ಕೆ ಪ್ರಾಶಸ್ತ್ಯ ಕೊಡತಕ್ಕಂಥಾದ್ದು—ಇದು ನಮ್ಮಲ್ಲಿ ನಡೆದುಕೊಂಡು ಬಂದಿದೆ. ಇವತ್ತು ಎಮರ್ಜನ್ಸಿ ಬಂದಿದರಿಂದ ಬಹುಶಃ ನಾವೆಲ್ಲಾ ಸಲೀಸಾಗಿ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಕಡೆಗೆ ಗಮನಕೊಡುವುದಕ್ಕೆ ಅವಕಾಶವಾಗಿದೆ. ಇಲ್ಲದೇ ಹೋಗಿದ್ದರೆ ಕಾಲೇಜ್ ಲೆಕ್ಚರರ್ಸ್ ಸತ್ಯಾಗ್ರಹ, ಮುಷ್ಕರ ಹೂಡುತ್ತಿದ್ದರು. ಜಡ್ಜ್‌ಗಳೂ ಕೂಡ ಅಸೋಸಿಯೇಷನ್ ಮಾಡಿಕೊಂಡು ಸಭೆ ಸೇರಿದ ಹಾಗೆ ಕಂಡಿತು. ಎಲ್ಲಾ ಅಧಿಕಾರಿಗಳ ಮಟ್ಟದಲ್ಲೂ ಕೂಡ ಅಸೋಸಿಯೇಷನ್ಸ್ ಮಾಡಿಕೊಂಡು ಮುಷ್ಕರಗಳು, ಬ್ಯಾಡ್ಜ್‌ಗಳು ಮಾಮೂಲಾಗಿದೆ. ಈಗ ಅದಕ್ಕೆ ಸ್ವಲ್ಪ ವಿಶ್ರಾಂತಿ ಸಿಕ್ಕಿದೆ. ಆದರೂ ಕೂಡ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ಕಾನ್‌ಸ್ಟಿಟ್ಯೂಷನ್ "ಅಮೆಂಡ್‌ಮೆಂಟ್ ಆದರೂ ಕೂಡ, ದಿನಬೆಳಗಾದರೆ ಕೋರ್ಟಿಗೆ ಹೋಗುವುದು, ರಿಟ್ ಹಾಕುವುದು, ಮುಷ್ಕರ ಹೂಡುವ ರಾಜ್ಯಾಂಗದತ್ತವಾದ ಅವಕಾಶಗಳು ಅಧಿಕಾರಿಗಳಿಗೆ ಏನಿವೆ, ಅವುಗಳಿಗೆ ಮಾತ್ರ ಇನ್ನೂ ಅಮೆಂಡ್‌ಮೆಂಟ್ ಬಂದಿಲ್ಲ. ಅಧಿಕಾರಿಗಳು ೩-೪ ಪರ್ಸೆಂಟ್ ಏನಿದ್ದಾರೆ, ಅವರು ಇವತ್ತು ದೇಶವನ್ನು ಆಳತಕ್ಕಂಥಾವರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದೇ ಸೆಕ್ರೆಟೇರಿಯೇಟ್ ಒಳಗಡೆ ಹೋದಾಗ ೧೦ ಕುರ್ಚಿಗಳು ಇದ್ದರೆ, ೪ ಕುರ್ಚಿಗಳಲ್ಲಿ ಜನ ಇರುತ್ತಾರೆ. ಮಾನ್ಯ ಗುಂಡೂರಾವ್ ಅವರ ಸ್ಟೇಟ್‌ಮೆಂಟ್‌ನ್ನು ಮೊನ್ನೆ ನೋಡಿದೆ. ಅವರು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಅಧಿಕಾರಿಗಳ ಮೇಲೆ ಯಾವ ಮೀಸಾ ಆಗಲೀ, ಡಿ. ಐ. ಆರ್ ಆಗಲೀ ಯಾವುದೂ ಕಾಣುವುದಿಲ್ಲ. ಏಕೆಂದರೆ ಅವರು ಏನು ಬರೆಯುತ್ತಾರೋ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದುದರಿಂದ ಆರೀತಿ ವರ್ತನೆ ಮಾಡತಕ್ಕವರ ಮೇಲೆ ಯಾವ ಕ್ರಮವೂ ಇಲ್ಲ. ಇವತ್ತು ದೇಶದಲ್ಲಿ ಸಾಮಾನ್ಯ ಜನರಿಗೆ ಆಗತಕ್ಕಂಥ ಕಿರುಕುಳವನ್ನು ನೋಡುವುದಾದರೆ, ಅಧಿಕಾರಿಗಳು ದೊರೆಗಳು ಇದ್ದಹಾಗೆ, ರೈತರು ಏನಾದರೂ ಹೋದರೆ ಅವರು ಆಳುಗಳು ಇದ್ದಹಾಗೆ. ರೈತರು ಹೋದರೆ ಅವರನ್ನು ಹೊರಗಡೆ ನಿಲ್ಲಿಸತಕ್ಕ ಕ್ರಮ ಏನಾದರೂ ಬದಲಾವಣೆಯಾಗಿದೆಯೇ ಎಂದು ನೋಡುವುದಾದರೆ, ಏನೂ ಆಗಿಲ್ಲ.

9–30 A.M.

ಇವೊತ್ತಿನ ದಿವಸ ಈ ಸಪ್ಲಿಮೆಂಟರಿ ಎಸ್ಟಿಮೇಟ್ ಬಂದಾಗ ಇದಕ್ಕೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಕೊಟ್ಟಿಲ್ಲ ಎಂದು ಹೇಳುತ್ತೇನೆ. ಈಗ ರೋಡ್ಸ್ ಅಂಡ್ ಬ್ರಿಡ್ಜಸ್ ಬಗ್ಗೆ ಸರ್ಕಾರದವರು ಏನೋ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಇವರು ಯಾವರೀತಿ ಹಣವನ್ನು ರೋಡ್ಸ್ ಅಂಡ್ ಬ್ರಿಡ್ಜಸ್ ಕಾರ್ಯಗಳಿಗೆ ಕೊಟ್ಟಿದ್ದಾರೆ ಎಂದರೆ ನಮ್ಮ ಮೇಲೆ ಟ್ಯಾಕ್ಸ್ ಹಾಕಿ ಅದೇ ಹಣವನ್ನು ನಮಗೆ ಕೊಟ್ಟಿದ್ದಾರೆ. ಮಾನ್ಯ ಚನ್ನಬಸಪ್ಪನವರು ಬಡ್ಜೆಟ್ಟಿನಲ್ಲಿ ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಹಣ ಸಿಕ್ಕುವುದಿಲ್ಲ ಎಂದು ತಿಳಿದುಕೊಂಡು, ಇನ್ನು ಬೇರೆ ರೀತಿಯಲ್ಲಿ ಹೊಸ ಟ್ಯಾಕ್ಸ್ ಹಾಕಿ ಸಹಕಾರ ಕೊಡಬೇಕು ಎಂದು ಹೇಳಿ ಹಣ ತೆಗೆದುಕೊಂಡಿದ್ದಾರೆ. ಇವೊತ್ತಿನ ದಿವಸ ರೈತರು ಒಂದೊಂದೇ ಪರಸೆಂಟ್ ಟ್ಯಾಕ್ಸ್ ಕೊಟ್ಟುಕೊಂಡು ನಮ್ಮ ಮೇಲೆ ಎಷ್ಟು ಟ್ಯಾಕ್ಸ್ ಹಾಕುತ್ತೀರಾ ಹಾಕಿ ಅಷ್ಟು ಕೊಡಲೇ ಬೇಕಾದ ಕಾಲ ಬಂದಿದೆ ಎಂದು ಹೇಳುತ್ತಿದ್ದಾರೆ. ಅಲ್ಲದೇ ಸ್ವಲ್ಪ ಕಾಲ ಕಳೆದು ಹೋದರೆ

ಬಡ್ಜೆಟ್ಟಿನಲ್ಲಿ ಬರತಕ್ಕ ಹಣ ಏನು ಇದೆ ಅದನ್ನು ಎಲ್ಲಾ ಆಡಳಿತದ ಬಗ್ಗೆ ಖರ್ಚು ವೆಚ್ಚ ಮಾಡಿ ಮತ್ತೆ ಟ್ಯಾಕ್ಸ್ ಹಾಕಬೇಕು ಎಂದು ಹೇಳುವ ಕಾಲ ಬರುತ್ತದೆ. ಇವೊತ್ತಿನ ದಿವಸ ರೈತರ ವಿಷಯದಲ್ಲಿ ಹೇಳು ವುದಾದರೆ ಅವರು ಕಷ್ಟಪಟ್ಟು ಬೆಳೆದ ಭತ್ತದ ಬೆಳೆಯನ್ನು ಕಡಿಮೆ ಬೆಲೆಯಲ್ಲಿ ಕೊಡಬೇಕಾಗಿದೆ. ಅಲ್ಲದೇ ಈಗ ಅಧಿಕಾರಿಗಳು ಏನು ಹೇಳುತ್ತಾರೆ ಆ ರೀತಿಯಲ್ಲಿ ರೈತರು ಕೇಳಬೇಕಾದ ಪರಿಸ್ಥಿತಿ ಬಂದಿದೆ. ಮತ್ತೆ ಎಷ್ಟೋ ವೇಳೆಯಲ್ಲಿ ರೈತರು ಕಛೇರಿಗಳಿಗೆ ಹೋದಾಗ ಅವರನ್ನು ಅಧಿಕಾರಿಗಳು ಏಕ ವಚನದಲ್ಲಿ ಮಾತ ನಾಡುವುದು ಉಂಟು. ಈಗ ಸುಮಾರು ಎಂಭತ್ತು ಪರಸೆಂಟ್ ರೈತಾಪಿ ಜನರು ಇರುವುದರಿಂದ ಇವರು ನಾನಾ ರೀತಿಯಲ್ಲಿ ಕಛೇರಿಗಳಿಗೆ ಹೋಗಬೇಕಾದ ಸನ್ನಿವೇಶಗಳು ಇರುತ್ತವೆ. ಇವೊತ್ತು ನಮ್ಮ ಮಾನ್ಯ ಘೋರ್ಪಡೆಯವರು ಹಣಕಾಸಿನ ಮಂತ್ರಿಗಳಾಗಿ ಬಂದಮೇಲೆ ಅವರು ಅಧಿಕಾರಿಗಳ ಸಂಬಳವನ್ನು ಎಷ್ಟು ಜಾಸ್ತಿ ಮಾಡಿದರು ಎಂದು ಅವರೇ ಉತ್ತರ ಹೇಳಬೇಕಾಗಿದೆ. ಅದನ್ನು ನಾನು ಹೇಳುವುದಕ್ಕೆ ಹೋಗು ವುದಿಲ್ಲ. ಈಗ ನಾವು ಅನೇಕ ಸಂದರ್ಭಗಳಲ್ಲಿ ಯೋಚನೆ ಮಾಡುವುದಾದರೆ ಹತ್ತಿ ಬೆಳೆಯ ಬೆಲೆಗಳಲ್ಲಿ ಬಹಳ ಕಡಿಮೆಯಾಗಿ ಹೋಗಿದೆ ಎಂದ ಮಾನ್ಯ ಸಜ್ಜನ್‌ರವರು ಹೇಳಿದರು, ಅದರ ಬೆಲೆ ಎಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂದು ನೋಡುವುದಾದರೆ ಸುಮಾರು ಒಂಭೈನೂರು ರೂಪಾಯಿಗಳಿಗೆ ಮಾರಾಟವಾಗ ಬೇಕಾಗಿದ್ದಂಥ ಹತ್ತಿಯ ಬೆಲೆ ಇವೊತ್ತಿನ ದಿವಸ ಇನ್ನೂರ ಐವತ್ತು ರೂಪಾಯಿಗಳಿಗೆ ಮಾರಾಟ ಮಾಡ ಬೇಕಾಗಿದೆ. ಅಷ್ಟರಮಟ್ಟಿಗೆ ಈ ಹತ್ತಿ ಬೆಲೆ ಇಳಿದಿದೆ. ಇಷ್ಟಾದರೂ ಕೂಡ ಈ ಕಡೆಗೆ ಗಮನ ಹರಿಸಿದ್ದಾ ರೆಯೋ ಎಂದು ನೋಡಿದರೆ, ಸಾಮಾನ್ಯವಾಗಿ ಈ ಕಡೆಗೆ ಗಮನ ಹರಿಸುವುದಿಲ್ಲ. ಅದೇರೀತಿ ಇವೊತ್ತಿನ ದಿವಸ ಶಿವಮೊಗ್ಗ ಜಿಲ್ಲೆಯಲ್ಲಿ ಭತ್ತದ ರೇಟನ್ನು ತೆಗೆದುಕೊಂಡರೆ ಅದರ ಬೆಲೆ ಸುಮಾರು ಎಂಭತ್ತೈದು ರೂಪಾಯಿಗಳಿಂದ ತೊಂಭತ್ತು ರೂಪಾಯಿಗಳವರೆಗೆ ಇಳಿದಿದೆ, ಇದು ಕೂಡ ಸರ್ಕಾರದ ಗಮನಕ್ಕೆ ಬೇಗ ಬರುವುದಿಲ್ಲ ಎಂದು ಹೇಳುತ್ತೇನೆ, ಏತಕ್ಕೆಂದರೆ ಸಾಮಾನ್ಯವಾಗಿ ರೈತರು ಇಲ್ಲಿಗೆ ಬಂದು ಡೇರಿ ಹಾಕಿ ಕುಳಿತುಕೊಂಡು ಮಂಪ್ಕರ ಹೂಡುವ ಶಕ್ತಿ ಅವರಿಗೆ ಇಲ್ಲ. ತಾವು ಏನು ಆರ್ಡರ್ ಮಾಡುತ್ತೀರಾ ಅದನ್ನು ಸಹಿಸಿಕೊಂಡು ಅವರು ಪಾಲಿಸುವುದು ಅವರ ಕರ್ತವ್ಯವಾಗಿದೆ. ಈಗ ಅನೇಕ ರೈತರು ಈ ಲೆವಿ ವಿಷಯದ ಬಗ್ಗೆ ಕೋರ್ಟಿನ ಮುಂದೆ ಹೋಗಿರುವುದು ಉಂಟು ಅಲ್ಲದೇ ಅನೇಕರು ಲೆವಿ ವಿಚಾರದಲ್ಲಿ ಕಡಿಮೆ ಬೆಲೆಗೆ ಬೆಳೆದ ಭತ್ತದ ಧಾನ್ಯವನ್ನು ಕೊಡಲಿಲ್ಲ ಎಂದು ಕೋರ್ಟಿಗೆ ಹೋದಾಗ ಅವರು ಜಮೀನು ಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಇದು ಹೋಗಬೇಕು ಎಂದು ಹೇಳುತ್ತೇನೆ. ಇವೊತ್ತು ರೈತರನ್ನು ಕಡಿಮೆ ಬೆಲೆಗೆ ತಾನು ಬೆಳೆದ ಭತ್ತವನ್ನು ಕೊಡದೆ ಇದ್ದರೆ ಅದನ್ನು ಯಾವರೀತಿ ಕೇಳುತ್ತೀರಿ, ಅದೇರೀತಿ ಬಿಲ್ಲಿ ಸರ್ಕಾರಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ಅವರನ್ನು ಯಾರು ಸರಿಯಾಗಿ ಕೇಳು ವುದಕ್ಕೆ ಹೋಗುವುದಿಲ್ಲ ಈ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಈ ಸಭೆಯಲ್ಲಿ ತಿಳಿಸುವುದೇನೆಂದರೆ ತಮಗೆಲ್ಲರಿಗೂ ಕೂಡ ಈಗ ಬಹಳ ಒಳ್ಳೆಯ ಕಾಲ ಬಂದಿದೆ, ನಮಗೂ ಕೂಡ ಒಳ್ಳೆಯ ಕಾಲ ಬಂದಿದೆ, ಆದ್ದರಿಂದ ಈಗ ನಾನು ಹೇಳುವುದು, ಇದುವರೆಗೂ ನಾವು ಎಲ್ಲಿ ನೋಡಿದರು ಮುಷ್ಕರ, ಮುಂತಾದ ಗಲಭೆಗಳನ್ನು ನೋಡುತ್ತಿದ್ದೆವು, ಈಗ ಒಳ್ಳೆಯ ಸಮಯ ದೊರೆತಿರುವುದರಿಂದ ಕಾಮನ್ ಆಗಿ ಸರ್ಕಾರ ದಲ್ಲಿ ಕೆಲಸ ಮಾಡುವುದಕ್ಕೆ ಸ್ವಲ್ಪ ಆಡಳಿತ ಯಂತ್ರವನ್ನು ಚುರುಕುಗೊಳಿಸಿ, ಇವೊತ್ತಿನ ದಿವಸ ಈ ಆಡಳಿತದ ಬಗ್ಗೆ ಖರ್ಚು ವೆಚ್ಚ ಏನು ಇದೆ ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೇ ಇವೊತ್ತು ಕೋ ಆಪರೇಟೀವ್ ಸೊಸೈಟಿಗಳಲ್ಲಿ ಸಾಕಷ್ಟು ಹಣವನ್ನು ತೊಡಗಿಸಿದ್ದೀರಿ, ಈಗ ಈ ಕೋ ಆಪರೇಟೀವ್ ಸೊಸೈಟಿಗಳಲ್ಲಿ ತೊಡಗಿಸಿರತಕ್ಕ ಹಣ ವಾಪಸ್ಸು ಬರತಕ್ಕ ಮಟ್ಟದಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಅಲ್ಲದೇ ಇವೊತ್ತು ಟ್ಯಾಕ್ಸ್ ಹಾಕಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕಾದ್ದು ಇದೆ, ಆದ್ದರಿಂದ ಬೆಟರ್‌ಮೆಂಟ್ ಲೆವಿ, ಮತ್ತು ವಾಟರ್ ಸೆಸ್ ಇವುಗಳನ್ನು ವಸೂಲಿ ಮಾಡತಕ್ಕದ್ದು ಕೋಟ್ಯಾಂತರ ರೂಪಾಯಿ ಬಾಕಿ ಇದ್ದರೂ ಅದನ್ನು ಇವೊತ್ತು ವಸೂಲಿ ಯಾವರೀತಿ ಮಾಡಬೇಕು ಅವನ್ನು ಜಾಗ್ರತೆ ಮಾಡಬೇಕು, ಹಣ ಕಾಸಿನ ಪರಿಸ್ಥಿತಿಯಲ್ಲಿ ತುಂಬಾ ಕಷ್ಟದಲ್ಲಿದ್ದೇವೆ ಎನ್ನುವುದು ಇಲ್ಲ. ಹತ್ತು ಸಾವಿರ, ಐವತ್ತು ಸಾವಿರ ರೂಪಾಯಿಗಳ ಮೈನರ್ ಇರಿಗೇಷನ್ ವರ್ಕ್ಸ್ ವಿಷಯಗಳಲ್ಲಿ ಹೇಳುವುದಾದರೆ ಫೈನಾನ್ಸ್ ಡಿಪಾರ್ಟ್ ಮೆಂಟಿನಲ್ಲಿ ಇದಕ್ಕೆ ಹಣ ಪ್ರೊವೈಡ್ ಮಾಡಿಲ್ಲ ಎಕಾನಮಿ ಆರ್ಡರ್ಸ್ ಇದೆ. ತೀವ್ರವಾಗಿ ಕೆಲಸ ತೆಗೆದು ಕೊಳ್ಳುವುದಕ್ಕಾಗಲಿಲ್ಲ ಎಂದು ಉತ್ತರ ಬರುತ್ತದೆ. ಮಾನ್ಯ ಅರ್ಥಸಚಿವರು ಇದರ ಬಗ್ಗೆ ಗಮನ ಹರಿಸಿದಂತೆ ಕಾಣಲಿಲ್ಲ, ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇದ್ದಾಗ ಅನೇಕ ಪಟ್ಟಿಯನ್ನು ತರಿಸಿ ಕೊಂಡು ನೋಡಿದ್ದೇವೆ. ಎಷ್ಟೋ ನಿಮ್ಮ ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ಟ್ಯಾಕ್ಸ್ ವಸೂಲಿ ಮಾಡಿಲ್ಲ, ತಾವು ಮಲೆನಾಡು ಪ್ರದೇಶದಲ್ಲಿರತಕ್ಕ ಜನರುಗಳು ಏನು ಬೆಳೆ ಬೆಳೆದುಕೊಡುತ್ತಾರೆ ಅಂತಹ ವರಿಗೆ ತಾವು ಹಣ ಕೊಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಸಣ್ಣ ನೀರಾವರಿ ಬಗ್ಗೆ ಗಣಕಟನೇ ಇಸವಿ ಬಡ್ಜೆಟ್ ಕಾಲದಲ್ಲಿ ನಮ್ಮ ಮೈನರ್ ಇರಿಗೇಷನ್ ಮಂತ್ರಿಗಳಿಗೆ ಒಂದು ಪಟ್ಟಿಯನ್ನು ಕೊಟ್ಟಿದ್ದ, ಅದು ಸುಮಾರು ಹತ್ತು ಅಥವಾ ಹನ್ನೆರಡು ಲಕ್ಷ ರೂಪಾಯಿಗಳನ್ನು ಮಾತ್ರ. ಆ ಕೆಲಸಗಳು ಲೆಕ್ಕ ಹಾಕಿದರೆ ಅವು ಕೆಲವು ಇರಬಹುದು, ಆದರಲ್ಲಿ ಕಡೆಗೆ ಕೆಲವು ಮುಕ್ತಾಯವಾದವು. ಆದುದರಿಂದ ಇವೊತ್ತಿನ

ದಿವಸ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ನಾವೆಲ್ಲರೂ ಕೂಡ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಮತ್ತು ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಹಾಗೂ ಸಾಮಾನ್ಯ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದರಿಂದ ನಮಗೆ ಇನ್ನು ಮುಂದೆ ಯಾವ ಆತಂಕವೂ ಕೂಡ ಬರಬಾರದು ಎಂದು ಹೇಳುತ್ತೇನೆ. ಈಗ ನಮ್ಮ ಪ್ರಧಾನಿಯವರು ಏನು ಎಮರ್‌ಜೆನ್ಸಿ ಡಿಕ್ಲೇರ್ ಮಾಡಿದ್ದಾರೆ ಅದನ್ನು ನಾವು ಉಪಯೋಗಿಸಿಕೊಂಡು ಆ ಕಡೆಗೆ ಗಮನ ಕೊಡಬೇಕು, ಇನ್ನು ಕೆಲವು ಸಾರಿ ಪುರಸ್ಕಾರಗಳು ನಡೆದು ಅವರು ಕೋರ್ಟಿಗೆ ಹೋಗ ತಕ್ಕ ಅವಕಾಶ ಇರುತ್ತದೆ, ಅದಕ್ಕೆ ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡತಕ್ಕದ್ದಕ್ಕೆ ಸಲಹೆ ಮಾಡತಕ್ಕದ್ದು ಒಳ್ಳೆಯದು ಎಂದು ಹೇಳುತ್ತೇನೆ. ಏತಕ್ಕೆಂದರೆ ದೇಶದಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವು ದಕ್ಕೆ, ತಾವು ಏನೊಂದು ಆರ್ಡರ್ ಮಾಡಿದರೂ, ನಾಳೆ ಬೆಳಿಗ್ಗೆ ಹೈಕೋರ್ಟಿನಲ್ಲಿ ಹೋಗಿ ಸ್ಟೇ ಆರ್ಡರ್ ತಂದಿರತಕ್ಕದ್ದನ್ನು ನೋಡಿದ್ದೇವೆ. ಇವೊತ್ತು ಯಾವು ತೀರ್ಮಾನ ಮಾಡಿದರು ಕೂಡ ಹೈಕೋರ್ಟಿಗೆ ಹೋಗಿ ಅಲ್ಲಿಂದ ತಡೆ ಬರುತ್ತದೆ ಮತ್ತೆ ಒಂದು ನೋಟೀಸ್ ಕೊಟ್ಟಿರತಕ್ಕದ್ದು ಸರಿಯಿಲ್ಲ. ಈ ಕಾನೂನಿ ನಲ್ಲಿ ಮಾಡಿದ್ದು ಸರಿಯಿಲ್ಲ ಎಂದು ತೀರ್ಮಾನ ಕೊಟ್ಟಿರುವುದು ಉಂಟು. ಈಗ ಯಾವ ಕ್ರಮ ಜಾರಿಗೆ ತರಬೇಕು ಎಂದು ಹೊರಟರೆ ನಮಗೆ ಯಾವಯಾವ ರೀತಿ ತೊಂದರೆಯಾಗಬಹುದು ಎನ್ನುವುದನ್ನು ಮೊದಲೇ ಗಮನಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಹೇಳುತ್ತೇನೆ. ಇನ್ನು ನಮ್ಮ ರಾಜ್ಯಾಂಗದ ಒಂಭತ್ತನೇ ವಿಧಿಯ ಕೆಳಗೆ ಈ ಬಿಲ್ಲುಗಳನ್ನು ತಂದಿದ್ದಾರೆ, ಇದರಲ್ಲಿ ಕೋರ್ಟಿಗೆ ಅಧಿಕಾರ ಇಲ್ಲ ಎಂದು ನಾವು ಕೇಳಿದ್ದೇವೆ. ಬಹುಶಃ ಈಗ ನೋಡಿದರೆ ಕೋರ್ಟಿಗೂ ಸಹ ಇದು ಇಲ್ಲ. ಇವೊತ್ತು ರಿಟ್ ಹಾಕಿದರು ಕೂಡ ಅಲ್ಲಿ ಯಾವ ತರಹ ತೀರ್ಮಾನ ತೆಗೆದುಕೊಂಡಿರುತ್ತಾರೆ ಆ ರೀತಿ ಮಾಡುತ್ತಾರೆ, ಕಾನೂನಿನಲ್ಲಿ ಇರತಕ್ಕ ಸೆಕ್ಷನ್‌ಗೆ ವಿರುದ್ಧವಾಗಿ ಹಾಕಿದ್ದಾರೆ ಎಂದು ಹೇಳುವುದಿಲ್ಲ. ಆದುದರಿಂದ ಇವೊತ್ತು ದೇಶದಲ್ಲೆಲ್ಲಾ ಒಳ್ಳೆಯ ಒಂದು ಆಸಕ್ತಿ ಬರುವವರೆಗೆ ಯಾವುದೇ ಒಂದು ತಡೆ ಇಲ್ಲದಂತೆ ಮತ್ತು ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ನಾನಾ ರೀತಿಯಲ್ಲಿ ಕಾರ್ಯ ಮಾಡಬೇಕಾಗಿದೆ.

ಬಹುಶಃ ನನಗನ್ನಿಸುತ್ತದೆ ಈ ಲ್ಯಾಂಡ್ ಟ್ರಿಬ್ಯುನಲ್ ವರ್ಕ್ಸ್‌ಗೆ ಮತ್ತು ಅದನ್ನು ನೋಡಿ ಕೊಳ್ಳುವುದಕ್ಕೆ ಸೆಕ್ರೆಟೆರಿಯೇಟ್ ಲೆವೆಲ್‌ನಲ್ಲಿ ಒಂದು ಸೆಲ್ ರೂಪದಲ್ಲಿ ಮಾಡಿ ನಮ್ಮ ಲಾ ಸೆಕ್ರೆಟರಿಯವ ರನ್ನೋ ಅಥವಾ ಯಾರು ಬೇಕೋ ಅವರನ್ನು ಹಾಕಿ ಪ್ರತಿ ದಿವಸ ಕೂಡ ಕಾರ್ಯಕ್ರಮಗಳ ಮೇಲೆ ಏನೇನು ಹೈಕೋರ್ಟಿನಲ್ಲಿ ನಡೆದಿದೆ ಏನು ಆತಂಕಗಳು ಬರುತ್ತಿವೆ ಎಂದು ಪ್ರತಿ ದಿವಸ ನೋಡಿ ಅದಕ್ಕೆ ತಕ್ಕ ಅಮೆಂಡ್‌ಮೆಂಟ್‌ಗಳನ್ನಾಗಲೀ, ಅಥವಾ ಯಾವುದೇ ರೂಪದಲ್ಲಿ ಕಾನೂನು ತಿದ್ದುಪಡಿ ಮಾಡುವು ದಾಗಲೀ ಮಾಡಬೇಕು. ಮಾಡದೇ ಹೋದರೆ ಏನಿವತ್ತು ಪ್ರಧಾನಿಯವರು ೨೦ ಅಂಶಗಳ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದಾರೆ ಅದನ್ನು ಜಾರಿಗೆ ತರುವುದಕ್ಕೆ ಅವಕಾಶವಾಗುವುದಿಲ್ಲ ಎಂದು ನಾನಾ ದರೂ ಕೂಡ ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಹೆಚ್ಚಿಗೆ ಇದರಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಪಡದೆ ನಮ್ಮ ಆರ್ಥಿಕ ಸಚಿವರು ಸಣ್ಣ ನೀರಾವರಿ ಕಡೆಗೆ ಸ್ವಲ್ಪ ಗಮನವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಅರ್ಥಿಕ ಸ್ಥಿತಿ ಉತ್ತಮ ಆಗಬೇಕಾದರೆ ಕೇವಲ ಮೂರು ನಾಲ್ಕು ತಿಂಗಳಲ್ಲಿ ನಮಗೆ ರೈತರಿಂದ ಬರತಕ್ಕ ಕಾಮಗಾರಿಗಳು ಏನಿವೆ ಅದರ ಕಡೆ ಸ್ವಲ್ಪ ಗಮನ ಕೊಡುವುದು, ಅದಕ್ಕೆ ಹೆಚ್ಚು ಹಣ ಒದಗಿಸುವುದು ಬಹಳ ಪ್ರಾಮುಖ್ಯವಾದುದು. ಹೀಗೆ ಮಾಡುವುದರಿಂದ ಆಹಾರಧಾನ್ಯಗಳನ್ನು ಸಾಕಷ್ಟು ಬೆಳೆದು ಧಾರಣೆವಾಸಿಗಳು ಕಡಿಮೆಯಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಮನವಿ. ಇದರ ಬಗ್ಗೆ ಸರ್ಕಾರದವರು ಸಾಕಷ್ಟು ಗಮನ ಕೊಡುತ್ತಾರೆಂದು ನಂಬಿ, ಇಷ್ಟು ಮಾತನಾಡಲು ಅವ ಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ ಎಸ್. ಅಮ್ಮಣ್ಣನವರ್.—(ಸಡಲ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿ ವರು ಮಂಡಿಸಿರುವ ಹೆಚ್ಚುವರಿ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವೊಂದು ಸೂಚನೆಗಳನ್ನು ಮಾಡ ಬಯಸುತ್ತೇನೆ. ಈಗಾಗಲೇ ಸರ್ಕಾರ ಕೆಲವು ಕಡೆ ಇರಿಗೇಷನ್ ಸ್ಕೀಂಗಳನ್ನು ತೆಗೆದುಕೊಂಡಿದೆ. ಆ ಇರಿಗೇಷನ್ ಸ್ಕೀಂಗಳಲ್ಲಿ ಏನಾಗಿದೆ ಎಂದರೆ ಕೆಲವೊಂದು ಪ್ರಾರಂಭ ಮಾಡಿ ಅವು ೪-೪ ವರ್ಷಗಳವರೆಗೆ ನಡೆಯುತ್ತಿದೆ, ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಲಿಫ್ಟ್ ಇರಿಗೇಷನ್ ಸ್ಕೀಂ ಮಾಡುವುದಿದೆ. ಈ ವರ್ಷ ಅವರು ಪ್ರಾರಂಭ ಮಾಡುವುದು ಯಾವಾಗ? ಜೂನ್ ಜುಲೈನಲ್ಲಿ ಮಳೆ ಬರುತ್ತದೆ. ಇವರು ಮೇನಲ್ಲಿ ಪ್ರಾರಂಭ ಮಾಡುತ್ತಾರೆ. ಜುಲೈ ತಿಂಗಳಲ್ಲಿ ಮಳೆ ಬಂದು ಎಲ್ಲಾ ಕೊಚ್ಚಿಕೊಂಡು ಹೋಗು ತ್ತದೆ. ಈ ರೀತಿ ಮಾಡಿದರೆ ಸರ್ಕಾರದ ಹಣ ಅಪವ್ಯಯ ಆಗುತ್ತದೆ, ಸ್ಕೀಂ ಆಗುವುದಿಲ್ಲ. ನಾಲ್ಕು ವರ್ಷದವರೆಗೂ ಪೂರ್ತಿಯಾಗುವುದಿಲ್ಲ ಈ ತರಹ ಮಾಡದೆ ಕಡ್ಡಾಯವಾಗಿ ಕಾಲ ಮಿತಿ ಹಾಕಿ ಇಷ್ಟ ರಲ್ಲೇ ಪೂರ್ತಿಗೊಳಿಸಬೇಕು ಎಂದು ಮಾಡಿದರೆ ಹಣ ಖರ್ಚು ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ. ಇದನ್ನು ಆಲೋಚನೆ ಮಾಡಬೇಕು. ಲಿಫ್ಟ್ ಇರಿಗೇಷನ್ ಸ್ಕೀಂಗಳು ಏನಿವೆ ಅವನ್ನು ಒಂದು ಪರ್ಸೆಂಟ್ ಜನತೆಯಿಂದ ವಂತಿಕೆ ಬಂದರೆ ಮಿಕ್ಕದ್ದನ್ನು ಸರ್ಕಾರವೇ ಹಾಕಿಕೊಂಡು ಮಾಡುತ್ತಿದ್ದರು. ಈಗ ಕೋ

ಅಪರೇಟೀವ್‌ಸೆಕ್ಟಾರ್‌ನಲ್ಲಿ ಮಾಡಬೇಕು ಎಂದು ನಿಶ್ಚಯ ಮಾಡಿದ್ದಾರೆ. ಕೋ ಅಪರೇಟೀವ್ ಸೆಕ್ಟಾರ್ ಮಾಡಬೇಕಾದರೆ ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟು, ೩೦ ಪರ್ಸೆಂಟ್ ಸರ್ಕಾರದವರು ಕೊಟ್ಟರೆ ಇನ್ನು ೬೦ ಪರ್ಸೆಂಟ್ ಏನಿದೆ ಅದನ್ನು ಎಲ್ಲಿಂದ ಸಾಲದ ಯೋಚನೆ ಮಾಡುತ್ತಾರೆ. ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್‌ಗೆ ಹೋಗಿ ಅವರು ಕೊಡುತ್ತಾರೆ ಎಂದು ಅವರಿಂದ ಬರೆಸಿಕೊಂಡು ಬನ್ನಿ ಆಮೇಲೆ ಮಂಜೂರಾತಿ ಕೊಡುತ್ತೇವೆ ಎಂದು ಹೇಳುತ್ತಾರೆ. ಡಿ.ಸಿ.ಸಿ. ಬ್ಯಾಂಕ್ ಅವರ ಕಡೆ ೧೦೦ ಜನ ರೈತರು ಕೂಡಿ ಹೋದರೆ, ಡಿ.ಸಿ.ಸಿ. ಬ್ಯಾಂಕಿನಲ್ಲಿ ಕಾಮಗಾರಿ ಇರುತ್ತದೆ. ಆದ್ದರಿಂದ ಅವರು ೬೦ ಪರ್ಸೆಂಟ್ ಕೊಡಲಿಕ್ಕೆ ಮುಂದೆ ಬರುವುದಿಲ್ಲ. ಹೀಗಾಗಿ ವಯಬಲ್ ಲಿಫ್ಟ್ ಇರಿಗೇಷನ್ ಸ್ಕೀಂ ಮಾಡುವುದಕ್ಕೆ ಅಸಾಧ್ಯವಾಗುತ್ತದೆ. ಆದಕ್ಕೆ ಸರ್ಕಾರದವರು ಎಲ್ಲಿ ಸಾಧ್ಯವೋ ಅಲ್ಲಿ ತಾವೇ ಮುಂದಕ್ಕೆ ಮಾಡಬೇಕು. ಕೋ-ಆಪರೇಟೀವ್ ಸೆಕ್ಟಾರ್ ಮಾಡಿದರೂ ಪಿ.ಡಬ್ಲ್ಯು.ಡಿ. ನಲ್ಲಿ ಎಲ್ಲ ಕೆಲಸಕಾರ್ಯಗಳು ಕಾರ್ಯಗತವಾಗಬೇಕಾಗುತ್ತದೆ. ಆದ್ದರಿಂದ ಇವರೇ ಮಾಡಿ ಅವರ ಕಡೆಯಿಂದ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳಲಿ. ಕೂಡಲೇ ಒಂದೂವರೆ ವರ್ಷದೊಳಗೆ ಮಾಡಿ ಮುಗಿಸಿದರೆ ರಿಟರ್ನ್ ಬಂದೇ ಬರುತ್ತದೆ. ಶ್ರೀಮಾನ್ ವೀರಪ್ಪಗೌಡರು ನಾಲ್ಕು ತಿಂಗಳೊಳಗೆ ಟರ್ನ್ ಬರುತ್ತದೆ ಎಂದು ಹೇಳಿದರು ನಾಲ್ಕು ತಿಂಗಳಲ್ಲಿ ಬರುವುದಿಲ್ಲ ಎಂದು ನನ್ನ ಭಾವನೆ. ಲಿಫ್ಟ್ ಇರಿಗೇಷನ್ ಸ್ಕೀಂ ಆಗಲೀ, ನೀರಾವರಿ ಯೋಜನೆಗಳಾಗಲಿ ಎಲ್ಲಿ ಆಗಿವೆ ಅಲ್ಲಿ ನಾಲ್ಕಾರು ವರ್ಷಗಳಿಂದ ವಾಟರ್ ರೇಟನ್ನು ವಸೂಲ್ ಮಾಡಿಲ್ಲ. ಈಗ ೨-೩ ವರ್ಷದ್ದು ಒಮ್ಮೆಲೇ ಕೊಡಬೇಕು ಎಂದು ನೋಟೀಸ್ ಕೊಟ್ಟಿದ್ದಾರೆ. ರೈತರಿಗೆ ಬಂದಿರುವ ಹಣದಲ್ಲಿ ತೆಗೆದಿಡುವ ಅಭ್ಯಾಸ ಇರುವುದಿಲ್ಲ. ಇವರು ಒಮ್ಮೆಲೇ ಕೊಡಬೇಕು ಎಂದರೆ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನನ್ನ ಸಲಹೆ ಏನೆಂದರೆ ರೈತರಿಗೆ ಬೆಳೆ ಬಂದಾಗ ನೋಟೀಸ್ ಕೊಟ್ಟರೆ ಅವರು ಕೊಡಬೇಕಾದ ವಾಟರ್ ರೇಟನ್ನು ತುಂಬುತ್ತಾರೆ. ಬೇರೆ ಸಮಯದಲ್ಲಿ ವಾಟರ್ ರೇಟ್ ಕೊಡಿ ಎಂದರೆ ಸಾಧ್ಯವಾಗುವುದಿಲ್ಲ. ಬೆಳೆ, ಫಸಲು ಯಾವ ಸಮಯಕ್ಕೆ ಬರುತ್ತದೆ ಆ ಸಮಯಕ್ಕೆ ನೋಟೀಸ್ ಕೊಟ್ಟರೆ ಸರಿ ಹೋಗುತ್ತದೆ. ಎಂದು ನಾನು ಸಲಹೆ ಮಾಡಬಯಸುತ್ತೇನೆ. ಲಿಫ್ಟ್ ಇರಿಗೇಷನ್ ಸ್ಕೀಮನ್ನು ಸರ್ಕಾರದವರೇ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಅಡ್ಮಿನಿಸ್ಟ್ರೇಷನ್ ಸುಧಾರಣೆ ವಿಷಯದಲ್ಲಿ ನಾನು ಹಿಂದೆ ಹೇಳಿದ್ದೇನೆ. ಅದನ್ನು ಮತ್ತೆ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆಯಾ ಜಿಲ್ಲೆಯ, ತಾಲ್ಲೂಕು ಮಟ್ಟದ ಅಥವಾ ಇತರ ಮೇಲ್ಮಟ್ಟದ ಅಧಿಕಾರಿಗಳು ಯಾರೇ ಇರಲಿ ಆಯಾ ಜಿಲ್ಲೆಯಲ್ಲಿ ಹಾಕಬಾರದು. ಯಾವುದೇ ಅಧಿಕಾರಿಯಾಗಲೀ ಮೂರು ವರ್ಷಕ್ಕಿಂತ ಜಾಸ್ತಿ ಸಮಯ ಒಂದೇ ಸ್ಥಳದಲ್ಲಿ ಇರಕೂಡದು. ಇದನ್ನು ಸರ್ಕಾರ ಕಡ್ಡಾಯವಾಗಿ ಮಾಡಿದರೆ ಎಷ್ಟೋ ಇರೆಗ್ಯುಲಾರಿಟೀಸ್ ಹಾಗೂ ಜನಗಳಿಗೆ ಆಗುತ್ತಿರುವ ತೊಂದರೆಗಳು ನಿಲ್ಲುತ್ತವೆ. ರೆವಿನ್ಯೂ ಆಗಲೀ ಅಥವಾ ಇತರ ಯಾವುದೇ ಅಧಿಕಾರಿ ಇರಲಿ ಮೂರು ವರ್ಷಗಳಾದನಂತರ ಕಡ್ಡಾಯವಾಗಿ ವರ್ಗ ಮಾಡಬೇಕು. ಹೀಗೆ ಮಾಡುವುದರಿಂದ ಎಷ್ಟೋ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ. ಈಗ ಕೋ ಅಪರೇಟೀವ್ ಈಯರ್ ಮುಗಿದಿದೆ. ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರತಿಯೊಂದು ಸಹಕಾರ ಸಂಘಗಳ ಆಡಿಟ್ ಆಗಲೇಬೇಕು. ಈ ರೀತಿ ಸಹಕಾರಿ ಇಲಾಖೆಯವರು ನೋಡಿಕೊಂಡರೆ ಆಗತಕ್ಕ ಅಥವಾ ಆಗಬಹುದಾದಂಥ ಎಷ್ಟೋ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಷುಗರ್ ಫ್ಯಾಕ್ಟರಿಗಳ ಬಗೆ ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಈ ಕೋ ಆಪರೇಟೀವ್ ಸಹಕಾರ ಸಂಘಗಳನ್ನು ರಾಷ್ಟ್ರೀಕರಿಸಲೇಬೇಕು ಎಂದು ನನ್ನ ದೃಢವಾದ ನಿಲುವು ತಾಳಿದ್ದೇನೆ. ಎಷ್ಟೋ ಷುಗರ್ ಫ್ಯಾಕ್ಟರಿಗಳಿವೆ. ಅವುಗಳಿಗೆ ನಾಲ್ಕು ಕೋಟಿ ರೂಪಾಯಿ ರಾಜ್ಯ ಬೊಕ್ಕಸದಿಂದ ಹಣ ಕೊಡುತ್ತಾರೆ ಆಯಾ ಏರಿಯಾದಲ್ಲಿ ಬೆಳೆಯುವ ಕಬ್ಬನ್ನು ಆ ಏರಿಯಾದಲ್ಲಿರುವ ಸಕ್ಕರೆ ಫ್ಯಾಕ್ಟರಿಗಳಿಗೆ ಕೊಡಬೇಕು ಎಂದು ಹೇಳುತ್ತಾರೆ. ಆದರೆ ಆ ಕಬ್ಬನ್ನು ಯಾರು ಕಂಟ್ರಾಕ್ಟ್ ಮಾಡಬೇಕು ಷುಗರ್ ಕಂಪನಿಯವರು ಕಂಟ್ರಾಕ್ಟ್ ಮಾಡಬೇಕೋ ಅಥವಾ ರೈತ ಬಂದು ಷುಗರ್ ಕಂಪನಿ ಹತ್ತಿರ ಕಂಟ್ರಾಕ್ಟ್ ಮಾಡಬೇಕೋ ಎಂಬುದನ್ನು ನಿಗದಿಪಡಿಸಿಲ್ಲ. ಕೋ ಅಪರೇಟೀವ್ ಸೆಕ್ಟಾರ್‌ನಲ್ಲಿ ಒಂದು ಪಕ್ಷದವರ ಕಬ್ಬನ್ನು ಅವರು ಹಾಕುವುದಿಲ್ಲ ಎನ್ನುತಾರೆ. ಪಕ್ಷ ಎಂದರೆ ರಾಜಕೀಯ ಪಕ್ಷ ಅಲ್ಲ. ಅಲ್ಲಿ ಬೇಕಾದಷ್ಟು ಬಣಗಳಿವೆ. ಅವನು ಬಂದರೆ ನಾವು ಕಬ್ಬು ಉಯ್ಯುವುದಿಲ್ಲ ಎಂದು ಹೇಳುತ್ತಾರೆ. ಒಂದು ಉದಾಹರಣೆಗೆ ಹೇಳುತ್ತೇನೆ, ಚಿಕ್ಕೋಡಿ ಸಕ್ಕರೆ ಕಾರ್ಖಾನೆ ಇದೆ. ಅಲ್ಲಿ ಸೇಲ್ ಕಂಟ್ರೋಲ್ ಪ್ರೊಡಕ್ಷನ್ ಮಾಡಿದರು. ಅಲ್ಲಿ ಒಬ್ಬ ಮನುಷ್ಯ ಕಬ್ಬು ಕೊಡುವುದಕ್ಕೆ ಹೋದರೆ ನಿಮ್ಮ ಕಬ್ಬು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಚುನಾವಣೆ ಸಮಯದಲ್ಲಿ ನಮಗೆ ಓಟು ಹಾಕದಿದ್ದರೆ ನಿಮ್ಮ ಕಬ್ಬು ಒಣಗಿಸಿ ಬಿಡುತ್ತೇವೆ ಎಂದು ಹೇಳುತ್ತಾರೆ. ಷುಗರ್ ಫ್ಯಾಕ್ಟರಿ ಮೆಂಬರ್ಸ್ ಎಷ್ಟು ಇದ್ದಾರೆ, ಆ ಮೆಂಬರ್ಸ್ ಬರೆದುಕೊಟ್ಟ ಕಬ್ಬು ಎಷ್ಟು ಇದೆ ಅಷ್ಟನ್ನು ಮಾತ್ರ ಅಂದರೆ ಎಷ್ಟು ಶಕ್ತಿ ಇದೆ ಅಷ್ಟು ಕಂಟ್ರಾಕ್ಟ್ ಮಾಡಿ ಮಿಕ್ಕದ್ದನ್ನು ಬಿಡಬೇಕು. ಈಗ ಸಫಿಷಿಯಂಟ್ ಕಬ್ಬು ಇದೆ ಎಂದು ೩-೩ ತಿಂಗಳು ಏರಿಯಾ ಬಂದ್ ಮಾಡುತ್ತಾರೆ. ಜನರಿಗೆ ಕಬ್ಬು ಬೆಳೆಸಬೇಕಾದರೆ ನೀರು ಉಣಿಸಬೇಕಾಗುತ್ತದೆ. ಮೂರು ತಿಂಗಳವರೆಗೂ ನೀರು ಒದಗಿಸಬೇಕಾದರೆ ರೈತರಿಗೆ ಹೆಚ್ಚು ಕಷ್ಟವಾಗುತ್ತದೆ ಅಲ್ಲದೆ ಖರ್ಚಾಗುತ್ತದೆ. ಆದ್ದರಿಂದ ಷ್ಟು

ಕಬ್ಬು ಬೇಕಾಗುತ್ತದೋ ಅಷ್ಟನ್ನು ಮಿತಿ ಮಾಡಿ, ಅದನ್ನು ಮಾತ್ರ ಕಂಟ್ರಾಕ್ಟ್ ತೆಗೆದುಕೊಂಡು ನಮಗೆ ಇಷ್ಟು ಸಾಕು ಎಂದು ಕಂಪನಿಯವರು ಕಡ್ಡಾಯವಾಗಿ ಹೇಳಬೇಕು. ಇಲ್ಲದಿದ್ದರೆ ನಾವು ಬೆಳೆದ ಕಬ್ಬು ವೇಸ್ಟಾಗಿ ಹುಲಿ ಬಾಯಿಗೆ ರೈತರನ್ನು ಕೊಟ್ಟಂತಾಗುತ್ತದೆ, ನನ್ನ ಚುನಾವಣಾ ಕ್ಷೇತ್ರದಲ್ಲಿ ಕಬ್ಬು ಬೆಳೆದ ಜನಗಳಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಬಯಸುತ್ತೇನೆ. ಇಷ್ಟೇ ಅಲ್ಲ, ಕೋ ಅಪರೇಟೀವ್ ಸಕ್ಕರ್‌ನಲ್ಲಿ ಎಷ್ಟು ಹಣವನ್ನು ಕೊಡುತ್ತಿದ್ದೀರಿ; ಈ ಬಗ್ಗೆ ಈಗ್ಗೆ ಮೂರು ವರ್ಷಗಳ ಲಾಗಾಯ್ತು ಒಂದೇ ಸಮನೆ ಕೇಳುತ್ತಿದ್ದೇನೆ. ಒಂದು ಮಾತನ್ನು ಬಹಳ ದು:ಖದಿಂದ ಹೇಳಬೇಕಾಗಿದೆ. ಏನೆಂದರೆ ಈ ರಾಜ್ಯದಲ್ಲಿ ಸರ್ಕಾರ ಎಂಬುದು ಇದೆಯೇ ಎಂದು ಪ್ರಶ್ನಿಸಬೇಕಾಗಿದೆ. ೧೯೬೯ನೇ ಇಸವಿಗೆ ಪೂರ್ವದಲ್ಲಿ ಯಾರ್‍ಯಾರು ಹಣವನ್ನು ಕೊಟ್ಟಿದ್ದರು ಅವರನ್ನು ಸದಸ್ಯರನ್ನಾಗಿ ಈ ಸಹಕಾರಿ ಸಕ್ಕರೆ ಕಾರ್ಖಾನೆಗೆ ತೆಗೆದುಕೊಂಡಿಲ್ಲ, ಅವರ ಹಣದಿಂದ ಬರತಕ್ಕ ಬಡಿ ಹಣವನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ನಾನು ಈಗ ಮೂರು ವರ್ಷಗಳಿಂದಲೂ ಒಂದೇ ಸಮನೆ ಕೇಳುತ್ತಿದ್ದರೂ ಯಾವುದೂ ಏನೂ ಆಗಿಲ್ಲ. ಇದು ಏತಕ್ಕೆ ಎಂದು ಕೇಳುತ್ತೇನೆ. ಅನಂತರ ನಿಮಗೆ ಯಾರು ಯಾರು ಬೇಕಾಗಿದ್ದಾರೆ, ಅಂಥವರನ್ನು ಗುಂಪುಗಾರಿಕೆ ಮಾಡುವ ಸಲುವಾಗಿ ನೂರು ಜನರನ್ನು ಸದಸ್ಯರನ್ನಾಗಿ ಮಾಡಿಕೊಂಡಿರಿ. ಇದನ್ನು ನೋಡಿದರೆ ಸರ್ಕಾರಕ್ಕೆ ಯಾರ ಮೇಲೆ ಇಂಟರೆಸ್ಟ್ ಇದೆಯೋ, ಯಾರ ಮೇಲೆ ಇಲ್ಲವೋ ಎಂಬುದು ಒಂದೂ ಗೊತ್ತಾಗುವುದಿಲ್ಲ. ೧೯೬೯ರಿಂದ ೧೯೭೫ರವರೆಗೆ ಅಂದರೆ ಈ ೬ ವರ್ಷಗಳಲ್ಲಿ ಯಾರನ್ನೂ ಸದಸ್ಯರನ್ನಾಗಿ ಮಾಡಿಕೊಂಡಿಲ್ಲ ಅಂಥವರ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದೀರಿ ಎಂಬುದನ್ನು ಹೇಳಬೇಕು. ಇಷ್ಟೇ ಅಲ್ಲದೆ ಎಷ್ಟೋ ಜನ ನಮಗೆ ದುಡ್ಡೂ ಬೇಡ, ರಿಜಿಸ್ಟರೂ ಬೇಡ ಎಂದು ಲೆಟರ್ ಬರೆದರೂ ಕೂಡ ಅವರಿಗೂ ಸಹ ಉತ್ತರವನ್ನು ಕೊಟ್ಟಿಲ್ಲ. ಇದು ಏಕೆ ಎಂಬುದನ್ನು ನಾನು ಪ್ರಶ್ನಿಸಬೇಕಾಗಿದೆ. ಇಂಥ ಅನಾಹುತಗಳನ್ನು ತಪ್ಪಿಸಲಿಕ್ಕೆ ಸಹಾಯ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತು ರೈತರನ್ನು ಹುಲಿ ಬಾಯಲ್ಲಿ ಏನು ಕೊಡುತ್ತಿದ್ದೀರಿ ಅದನ್ನು ತಪ್ಪಿಸುವ ಸಲುವಾಗಿ ಏನಾದರೂ ಒಂದು ಕ್ರಮವನ್ನು ಆದಷ್ಟು ಜಾಗ್ರತೆ ಕೈಗೊಳ್ಳುತ್ತೀರಿ ಎಂದು ಆಶಿಸಿದ್ದೇನೆ.

ಇಷ್ಟೇ ಅಲ್ಲ. ಈ ಸಿಬ್ಬಂದಿ ವರ್ಗ ಏನಿದೆ ಅದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಏನೆಂದರೆ, ಸಹಕಾರಿ ಸಕ್ಕರೆ ಕಾರ್ಖಾನೆಗೆ ಸಿಬ್ಬಂದಿಯನ್ನು ನೇಮಿಸುವಾಗ ಅದನ್ನು ಸರ್ಕಾರದವರೇ ನೇಮಿಸಬೇಕು. ಇದನ್ನು ಒಂದು ಸ್ಟೇಟ್ ರಿಕ್ರೂಟ್‌ಮೆಂಟ್ ಪಾಲಸಿಯಲ್ಲಿ ಮಾಡಿ. ಅಗ್ರಿಕಲ್ಚರಲ್ ಕ್ರೆಡಿಟ್ ಏನಿದೆ ಅವುಗಳ ಸಹಾಯದಿಂದ ಒಂದು ಕೇಡರ್ ಮಾಡಬೇಕು. ಲೋಕಲ್ ಆಗಿ ನೇಮಕ ಮಾಡುವುದರಿಂದ ಲೋಕಲ್‌ನಲ್ಲಿ ಆಯಾಯ ಜನರು ಅಲ್ಲಿಯೇ ನಿಂತುಕೊಂಡು ಎಲ್ಲಾ ಸ್ಟ್ಯಾಗ್ನೇಟ್ ಆಗಿದೆ. ಇನ್ನು ಈ ಸಿಬ್ಬಂದಿವರ್ಗವನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಒಂದೊಂದು ಸಿಬ್ಬಂಗಿಯು ಕಡೆಯಿಂದಲೂ ೨–೩ ಸಾವಿರ ರೂಪಾಯಿಗಳವರೆಗೂ ಹಣವನ್ನು ತೆಗೆದುಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಈ ಸರ್ಕಾರದಲ್ಲಿ ಯಾರೇ ಬಂದರೂ ಇದನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ಸಹಕಾರ ಸಂಘಗಳಲ್ಲಿಯೂ ಕೂಡ ಸಿಬ್ಬಂದಿವರ್ಗವನ್ನು ನೇಮಕ ಮಾಡುವಾಗ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಪ್ರಕಾರ ಮಾಡಬೇಕೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ಕೆರೆಕಟ್ಟೆಗಳಿಗೆ ಸರ್ಕಾರದವರು ಮಂಜೂರಾತಿಯನ್ನು ನೀಡುತ್ತಿದ್ದಾರೆ. ಆದರೆ ಯಾರೋ ಒಬ್ಬ ವ್ಯಕ್ತಿ ೪–೫ ಎಕರೆ ಜಮೀನನ್ನು ಕೊಡುತ್ತಾ ಇಲ್ಲವೆಂದು ಆ ಕರೆಯ ಕೆಲಸ ಪೂರ್ತಿಯಾಗಿ ನಿಂತು ಬಿಟ್ಟಿದೆ. ಆದುದರಿಂದ ಇಂಥ ಕೆರೆಗಳ ವಿಷಯವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅದನ್ನು ಕೂಡಲೇ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇಷ್ಟು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಸನ್ಮಾನ್ಯ ಅಧ್ಯಕ್ಷರೆ, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಅಪೇಕ್ಷಿಪಡುತ್ತೇನೆ.

ಮೊದಲನೆಯದಾಗಿ ಈ ತುರ್ತು ಪರಿಸ್ಥಿತಿ ಇರುವ ಕಾಲದಲ್ಲಾದರೂ ರಾಷ್ಟ್ರದ ಮತ್ತು ಜನತೆಯ ಹಿತಕ್ಕೆ ವಿರುದ್ಧವಾಗಿ ವರ್ತಿಸುವಂತಹ ಕೆಲವು ಸಂಸ್ಥೆಗಳ ಬಗ್ಗೆ ತೀವ್ರವಾದಂಥ ಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು. ಮತ್ತು ಅವುಗಳನ್ನು ಹತೋಟಿಗೆ ತರಬೇಕೆಂದು ಹೇಳಲು ಅಪೇಕ್ಷೆ ಪಡುತ್ತೇನೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿರುವಂತಹ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ವಿಷಯವನ್ನು ಹೇಳಬಯಸುತ್ತೇನೆ. ಒಂದು ದೊಡ್ಡ ಸಂಸ್ಥೆಯಾದ ಮೆಡಿಕಲ್ ಕಾಲೇಜು ಇರುವಂತಹ ಜಿಲ್ಲೆಯಿಂದ ನಾನು ಬರುತ್ತಿದ್ದೇನೆ. ಈ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಯಾವ ರೀತಿಯಲ್ಲಿ ಅವ್ಯವಹಾರಗಳು ನಡೆಯುತ್ತಿವೆ ಎಂಬುದರ ಬಗ್ಗೆ ಸಾಕಷ್ಟು ಮಾಹಿತಿ ಸರ್ಕಾರಕ್ಕೆ ಇದೆಯೆಂದು ನಾನು ಭಾವಿಸುತ್ತೇನೆ. ಅನೇಕ ಬಾರಿ ಇದರ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆದಿದೆ. ಈಗಾಗಲೇ ಇದರ ಬಗ್ಗೆ ಒಂದು ಮಸೂದೆಯನ್ನೂ ಕೂಡ

ಈ ಸದನದಲ್ಲಿ ಅಂಗೀಕಾರ ಮಾಡಿದ್ದೇವೆ. ಈಗ ಅದು ಮೇಲ್ಮನೆಯಲ್ಲಿ ಅಂಗೀಕಾರವಾಗುವುದಕ್ಕೆ ಉಳಿದಿದೆ. ಇತ್ತೀಚೆಗೆ ಅಂದರೆ ೧೯೭೬ರಲ್ಲಿ ಮಣಿಪಾಲ್ ಮೆಡಿಕಲ್ ಕಾಲೇಜಿನಲ್ಲಿ ತನಗೆ ಪ್ರವೇಶ ಸಿಕ್ಕಲಿ ಎಂದು ಒಬ್ಬ ಹುಡುಗ ೫೦೦೦ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ. ೧೯೭೦ರಲ್ಲಿ ಅವನು ಪಿ.ಯು.ಸಿ. ಯಲ್ಲಿ ಪಾಸ್ ಮಾಡಿದ, ನಂತರ ೧೯೭೩ರಲ್ಲಿ ಬಿ.ಎಸ್.ಸಿ. ಪಾಸ್ ಮಾಡಿದ. ಅದೂ ಕೂಡ ಉತ್ತಮ ದರ್ಜೆಯಲ್ಲಿ. ಸಾಮಾನ್ಯವಾಗಿ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸ್ಥಾನ ಸಿಕ್ಕಬೇಕಾದರೆ ಎಷ್ಟು ಅಂಕಗಳನ್ನು ತೆಗೆದುಕೊಳ್ಳಬೇಕೋ ಅದಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದಿದ್ದರೂ ಕೂಡ ಆತನಿಗೆ ಸೀಟ್ ಸಿಕ್ಕಲಿಲ್ಲ. ಅಡ್ವಾನ್ಸ್ ಬುಕ್ಕಿಂಗ್ ಮಾಡಿದಂಥ ವಿದ್ಯಾರ್ಥಿಗಳಿಗೂ ಕೂಡ ಒಂದಲ್ಲೊಂದು ಕಾರಣದಿಂದ ವಿದ್ಯಾರ್ಥಿಗಳಿಗೆ ಇವತ್ತು ಸ್ಥಾನ ಸಿಕ್ಕುತ್ತಾ ಇಲ್ಲ. ಇಷ್ಟೇ ಅಲ್ಲ. ಮೆಡಿಕಲ್ ಕಾಲೇಜಿನವರ ಒಂದು ವಾದ ಏನೆಂದರೆ ಸರ್ಕಾರದವರು ನೂರಕ್ಕೆ ೩೨ ಸೀಟುಗಳನ್ನು ಕೇಳಿದ್ದಾರೆ, ಅವರಿಗೆ ಅಷ್ಟನ್ನು ಕೊಡುತ್ತೇವೆ. ಉಳಿದ ಸೀಟುಗಳನ್ನು ಭಾರತದವರಿಗೆ ಯಾರಿಗೂ ಕೂಡ ಕೊಡುವುದಿಲ್ಲ ಎಂದು. ಅವುಗಳನ್ನು ಮಲೇಷ್ಯದವರಿಗೋ ಅಥವಾ ಇನ್ನು ಯಾರಿಗೋ ಪರದೇಶದವರಿಗೆ ಕೊಡುತ್ತಾರೆ. ಇದು ಯಾವ ತರಹದ ವ್ಯವಹಾರವೋ ನನಗಂತೂ ಗೊತ್ತಾಗುವುದಿಲ್ಲ. ಹುಡುಗನಿಂದ ಮುಂಚಿತವಾಗಿಯೇ ಹಣವನ್ನು ತೆಗೆದುಕೊಂಡಿದ್ದರೂ ಕೂಡ ಅವನಿಗೆ ಸೀಟು ಕೊಡುವುದಿಲ್ಲ. ಎಲ್ಲಾ ವಿದೇಶಿಯರಿಗೇ ಕೊಡುತ್ತೀರಿ. ಮೆಕ್ಸಿಕೋನಲ್ಲಿ ಒಂದು ದೇವಸ್ಥಾನ ವಾಷಿಂಗ್‌ಟನ್‌ನಲ್ಲಿ ಒಂದು ದೇವಸ್ಥಾನ ಹೀಗೆ ತೆರೆಯುತ್ತೀರಿ. ಅಲ್ಲಿ ಇವುಗಳನ್ನು ನಡೆಸುವ ಅವಶ್ಯಕತೆ ಇಲ್ಲ ಈ ಸಂಸ್ಥೆಯನ್ನು ನಡೆಸುತ್ತಿರುವುದು ನಿಜವಾಗಿಯೂ ನಮ್ಮ ದೇಶದ ಜನತೆ ಕೊಟ್ಟಿರುವ ಹಣದಿಂದ ಎಂದು ನಾನಂತೂ ಭಾವಿಸುತ್ತೇನೆ ನಮ್ಮ ಜನ ಹೇರಳವಾಗಿ ಹಣ ಕೊಟ್ಟು ಕ್ಯಾಪಿಟೇಷನ್ ಫೀ ಕೊಟ್ಟು ಬೆಳೆಸಿದ್ದಾರೆ. ಇದನ್ನು ಜನರಲ್ ಎಜುಕೇಷನ್‌ನವರು ಎಲ್ಲಿಂದಲೋ ಹಣವನ್ನು ತಂದು ಈ ಸಂಸ್ಥೆಗಳನ್ನು ಕಟ್ಟಿದ್ದಲ್ಲ. ಆದರೂ ಇಲ್ಲಿನ ನಮ್ಮ ಮಕ್ಕಳಿಗೇ ವಿದ್ಯಾಭ್ಯಾಸಕ್ಕೆ ಅವಕಾಶ ಇಲ್ಲ. ಈ ಸಂಸ್ಥೆಗಳಿಂದ ನಮಗೆ ಯಾವುದೇ ಉಪಯೋಗವೂ ಇಲ್ಲ. ಇದನ್ನು ಹತೋಟಿಗೆ ತರುವ ಬಗ್ಗೆ ಸರ್ಕಾರ ಸರಿಯಾದ ಹೆಜ್ಜೆಯನ್ನಿಟ್ಟಿಲ್ಲವೆಂದೂ, ಇಟ್ಟ ಹೆಜ್ಜೆ ಕೂಡ ತಪ್ಪಾಗಿದೆಯೆಂದೂ ಹೇಳಬೇಕಾಗಿದೆ. ಮೊದಲು ಕ್ಯಾಪಿಟೇಷನ್ ಫೀ ೫ ಸಾವಿರ ಇದ್ದದ್ದು ಈಗ ೧೦ ಸಾವಿರಕ್ಕೆ ಏರಿಸಿದ್ದಾರೆ. ಪರಿಶಿಷ್ಟ ವರ್ಗದವರು, ಹಿಂದುಳಿದ ಜನ ಇವರು ಹಿಂದೆ ಇದ್ದುದಕ್ಕಿಂತಲೂ ಜಾಸ್ತಿ ಕ್ಯಾಪಿಟೇಷನ್ ಫೀಯನ್ನು ತರಬೇಕಾದ ಪರಿಸ್ಥಿತಿ ಬಂದಿದೆ. ಇಂಥಾದ್ದನ್ನು ಸರ್ಕಾರ ಒಪ್ಪಿಕೊಂಡಿದೆ ಎಂಬ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಇಷ್ಟು ಮಾತ್ರವಲ್ಲ, ಸರ್ಕಾರ ಹೇಳಿದವರಿಗೆ ಸೀಟುಗಳನ್ನು ಕೊಟ್ಟರೆ ಉಳಿದ ಸ್ಥಾನಗಳನ್ನು ಹೇಗೆ ಬೇಕಾದರೂ ಭರ್ತಿ ಮಾಡಿಕೊಳ್ಳಬಹುದಾಗಿದೆ. ಇಂಥ ಅವಕಾಶಗಳನ್ನು ಈ ಸಂಸ್ಥೆಗಳಿಗೆ ಕೊಡುವಂತಹ ಮಾರ್ಗದಲ್ಲಿ ಈ ಸರ್ಕಾರ ಹೋಗುವುದಾದರೆ ನಿಜವಾದ ತುರ್ತು ಪರಿಸ್ಥಿತಿಯನ್ನು ಇದು ಅರ್ಥಮಾಡಿಕೊಂಡಿಲ್ಲವೆಂದು ಹೇಳಬೇಕಾಗಿದೆ. ಯಾವ ಕಾರಣಕ್ಕೋಸ್ಕರ ಈ ತುರ್ತು ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ಘೋಷಿಸಬೇಕಾಗಿ ಬಂತೋ, ಯಾವ ಕಾರಣಕ್ಕೋಸ್ಕರವಾಗಿ ಈ ೨೦ ಅಂಶಗಳ ಕಾರ್ಯಕ್ರಮಗಳನ್ನು ಘೋಷಿಸಿದರೋ ಗೊತ್ತಿಲ್ಲ. ನಮ್ಮ ಸರ್ಕಾರ ಈ ತುರ್ತು ಪರಿಸ್ಥಿತಿಯ ಗಂಭೀರತೆಯನ್ನು ಸಾಕಷ್ಟು ತಿಳಿದುಕೊಂಡಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ.

10-00 A.M

ಆದ್ದರಿಂದ ಈ ತುರ್ತುಪರಿಸ್ಥಿತಿಯಲ್ಲಿ ಇಂಥ ಸಂಸ್ಥೆಗಳ ಮೇಲೆ, ಸರಿಯಾದಂತಹ ಹತೋಟಿ ತರುವುದಕ್ಕೆ ಸರ್ಕಾರದವರು ಕ್ರಮತೆಗೆದುಕೊಳ್ಳಬೇಕು. ಮತ್ತೆ ಇಂಥ ಸಂಸ್ಥೆಗಳು ನಮ್ಮ ದೇಶದಲ್ಲಿರುವ ಖಾಸಗೀ ಬಂಡವಾಳಗಳ ಹಾಗೂ ಖಾಸಗೀ ವ್ಯವಹಾರಗಳಿಗೆ, ದೇಶದ ಹಿತಕ್ಕೆ ವಿರೋಧವಾಗಿ, ಜನತೆಯ ಇಚ್ಛೆಗೆ ವಿರೋಧವಾಗಿ ಇದ್ದರೆ ಅವುಗಳನ್ನು ಬದಲಾಯಿಸುವ ರೀತಿಯಲ್ಲಿಯೂ ಕೂಡ ಸರ್ಕಾರ ಅಧಿಕಾರಗಳನ್ನು ಉಪಯೋಗಿಸಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಎರಡನೆಯದಾಗಿ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಮೋಟಾರ್‌ವೆಹಿಕಲ್ಸ್ ಟ್ಯಾಕ್ಸ್ ಏರಿಸಿ, ಅದರಿಂದ ಬಂದಂತ ಹಣವನ್ನು ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ಉಪಯೋಗಿಸಲಾಗುತ್ತದೆ ಎಂದು ಮಾನ್ಯ ಹಣಕಾಸಿನ ಸಚಿವರು ಸೂಚನೆ ಕೊಟ್ಟಿದ್ದಾರೆ, ಇದು ಸ್ವಾಗತಾರ್ಹವಾದ ಅಂಶ. ಆ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಕಡೆ ಮೈಸೂರು ಮಂಗಳೂರು ಹೆದ್ದಾರಿ ರಾಷ್ಟ್ರೀಕರಣವಾಗಿದೆ, ಚಿಕ್ಕಮಗಳೂರು ಮತ್ತು ಮಂಗಳೂರು ಹೆದ್ದಾರಿಯೂ ಕೂಡ ರಾಷ್ಟ್ರೀಕರಣವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಮಂಗಳೂರು ಬಸ್ಟ್ಯಾಂಡಿನಿಂದ ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳು ನಿಂತಹಾಗೆ ಅವುಗಳನ್ನು ಚಲಿಸಲಿಕ್ಕೂ ಕೂಡ ಬಿಡದೆ, ಕಂಟ್ರಾಕ್ಟ್ ಕ್ಯಾರೇಜಸ್ ಬಸ್ಸುಗಳು ಮಂಗಳೂರು ಮೈಸೂರು ಕಡೆಗೆ ಹಾಗೂ ಮಂಗಳೂರು ಬಾಂಬೆ ಕಡೆಗೆ ಮತ್ತು ಇನ್ನಿತರ ಕಡೆಗಳಿಗೆ ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಿಂದೆ ರಾತ್ರಿ ಹೊತ್ತು ಮಾತ್ರ ಬೆಂಗಳೂರಿಗೆ ಬರುವಂತ ಕಂಟ್ರಾಕ್ಟ್

ಕ್ಯಾರೇಜಸ್ ಬಸ್ಸುಗಳು ಇದ್ದವು. ಈಗ ಹಗಲು ಹೊತ್ತು ಕೂಡ ಈ ಬಸ್ಸುಗಳನ್ನು ಎಲ್ಲಿಗೆ ಬೇಕಾದರೂ ಓಡಿಸುತ್ತಿದ್ದಾರೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಬರುವ ಪ್ರಯಾಣಿಕರನ್ನು ಕೂಡ ಆಕರ್ಷಣೆ ಮಾಡಿ, ಮೈಸೂರು, ಧರ್ಮಸ್ಥಳ ಎಂದು ಕೂಗಿ ಕೂಗಿ ಆ ಜನರನ್ನು ತಮ್ಮ ಬಸ್ಸಿನಲ್ಲಿ ಕೂಡಿಸಿಕೊಂಡು ಹೋಗು ವುದನ್ನು ನಾವು ನೋಡುತ್ತಿದ್ದೇವೆ. ಏತಕ್ಕೆ ಹೀಗೆ ಆಗುತ್ತದೆ ಎಂದು ವಿಚಾರಿಸಿದಾಗ, ಒಂದು ವಿಚಾರ ಗಮನಕ್ಕೆ ಬಂತು. ಮಾನ್ಯ ಸಚಿವರು ಉತ್ತರ ಕೊಡುವಾಗ ಆ ವಿಚಾರವನ್ನು ಹೇಳಬೇಕು. ದಕ್ಷಿಣ ಕನ್ನಡ ಜಿಲ್ಲೆಯ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು ಯಾವುದೇ ವಿಧವಾದ ಪರ್ಮಿಟ್ ಕೊಡುತ್ತಾ ಇಲ್ಲ. ಕಂಟ್ರಾಕ್ಟ್ ಪರ್ಮಿಟ್‌ಗಳನ್ನು ಹೈಕೋರ್ಟಿನ ಒಂದು ತೀರ್ಮಾನದ ಮೇಲೆ, ರಾಜ್ಯದಲ್ಲಿಯೇ ಅತಿ ದೊಡ್ಡ ಜಿಲ್ಲೆಯಾದ ಬಿಜಾಪುರ ಜಿಲ್ಲೆಯ ಆರ್. ಟಿ. ಓ. ರವರು ಖಾಸಗಿ ಬಸ್ಸುಗಳನ್ನು ಓಡಿಸುವುದಕ್ಕೆ ತಾತ್ಕಾಲಿಕ ಪರ್ಮಿಟ್ ಕೊಡಬಹುದು ಎಂದು ಹೈಕೋರ್ಟಿನವರು ತೀರ್ಪುಕೊಟ್ಟಿದ್ದಾರೆಂದು ನಾನು ತಿಳಿದಿದ್ದೇನೆ. ಆ ತೀರ್ಪಿನ ಪ್ರಕಾರ ಕಂಟ್ರಾಕ್ಟ್ ಬಸ್ಸುಗಳನ್ನು ಓಡಿಸುವುದಕ್ಕೆ ಪರ್ಮಿಟ್ ಕೊಡುತ್ತಿದ್ದಾರೆ. ಮಂಗಳೂರಿನಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಟ್ರಾಕ್ಟ್ ಬಸ್ಸುಗಳನ್ನು ಓಡಿಸುವುದಕ್ಕೆ ಬಿಜಾಪುರ ಜಿಲ್ಲೆಯ ಆರ್.ಟಿ.ಓ. ರವರು ಪರ್ಮಿಟ್ ಕೊಡುತ್ತಿದ್ದಾರೆಂದು ವರ್ತಮಾನ ಬಂದಿದೆ. ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕು. ವಿಚಾರ ಇಷ್ಟೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಂದ ನಾವು ವರಮಾನವನ್ನು ನಿರೀಕ್ಷೆ ಮಾಡುತ್ತೇವೆ. ಸಾರಿಗೆ ಸಂಸ್ಥೆಯವರಿಗೆ ಬಹಳ ನಷ್ಟ ಸಂಭವಿಸುವ ರೀತಿಯಲ್ಲಿ, ಬಸ್ಸುಗಳನ್ನು ಓಡಿಸುವುದಕ್ಕೆ ಕಷ್ಟವಾಗುವ ರೀತಿಯಲ್ಲಿ, ಈ ಖಾಸಗೀ ಸಾರಿಗೆ ಸಂಸ್ಥೆಗಳವರ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಬೆಳೆದಿದೆ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರ ಪರಿಶೀಲನೆ ಮಾಡಿ, ನಮ್ಮ ರಾಜ್ಯದ ಸಾರಿಗೆ ಸಂಸ್ಥೆಯವರಿಗೆ ಏಟು ಬೀಳದ ರೀತಿಯಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಮೂರನೆಯದಾಗಿ, ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಇವತ್ತು ಬಹಳ ಮುಖ್ಯವಾದ ಭೂಸುಧಾರಣೆಗೆ ಶಾಸನವನ್ನು ಜಾರಿಗೊಳಿಸುವಂತಹ ದೀಕ್ಷೆಯನ್ನು ಕೈಗೊಂಡಿದ್ದೀರಿ. ಒಂದೇ ಒಂದು ವಿಚಾರ ಹೇಳ ಬೇಕಾದರೆ, ಭೂಸುಧಾರಣೆ ಶಾಸನಕ್ಕೆ ಸಂಬಂಧಪಟ್ಟಂತೆ ಯಾವುದೇ ಒಂದು ವಿಚಾರದಲ್ಲಿ ಯಾವುದೇ ಒಬ್ಬ ಭೂಮಾಲೀಕ ಸಿವಿಲ್ ಕೋರ್ಟುಗಳಿಗೆ ಹೋದರೆ, ಬಹಳ ಸುಲಭವಾಗಿ ಸಿವಿಲ್‌ಕೋರ್ಟಿನಲ್ಲಿ ಇಂಜಕ್ಷನ್ ಸಿಗುತ್ತದೆ. ಮಾಲೀಕರನ್ನೇ ರಿಸೀವರಾಗಿ ನೇಮಕ ಮಾಡುತ್ತಿದ್ದಾರೆ. ಹೈಕೋರ್ಟಿನವರು ಭೂ ನ್ಯಾಯ ಮಂಡಲಿಗಳು ನಡೆಯದ ಹಾಗೆ ತಡೆಯಾಜ್ಞೆಗಳನ್ನು ಕೊಡುತ್ತಿದ್ದಾರೆ. ಹೈಕೋರ್ಟಿನವರು ಭೂ ಸುಧಾ ರಣೆ ಶಾಸನವನ್ನು ಸಂವಿಧಾನದ ೯ನೇ ಪರಿಶಿಷ್ಟಕ್ಕೆ ಸೇರಿದ ಮೇಲೆ, ರಾಷ್ಟ್ರಾಧ್ಯಕ್ಷರು ಮುದ್ರೆ ಹಾಕಿದ ಮೇಲೆ ಪಾರ್ಲಿಮೆಂಟ್ ಒಪ್ಪಿಗೆ ಕೊಟ್ಟ ಮೇಲೆ ಇಂಥಹ ತಡೆಯಾಜ್ಞೆಗಳನ್ನು ಕೊಡುತ್ತಿದ್ದಾರೆ, ಇದು ನಮ್ಮ ತಿಳುವಳಿಕೆಗೆ ಮೀರಿದ ವಿಚಾರ. ಇದು ಯಾವರೀತಿ ಆಗುತ್ತಿದೆಯೋ ನನಗಂತೂ ಗೊತ್ತಾಗುತ್ತಾ ಇಲ್ಲ. ಇತ್ತೀಚಿಗೆ ನಾನು ಸದಸ್ಯನಾಗಿರುವ ಟ್ರಿಬ್ಯೂನಲ್‌ನಲ್ಲಿ, ೨-೩ ಇಂತಹ ತಡೆಯಾಜ್ಞೆಗಳು ಹೈಕೋರ್ಟಿಗೆ ಬಂದಾಗ ಹೈಕೋರ್ಟಿನಲ್ಲಿ ಭೂಮಾಲೀಕರನ್ನೇ ರಿಸೀವರಾಗಿ ನೇಮಕ ಮಾಡಿದ್ದಾರೆ. ಹೇಗೆ ನೇಮಕ ಮಾಡಿದಿರಿ ಎಂದು ಕೇಳಿದರೆ, ಎಲ್ಲಿ ವಕ್ಕಲು ಇದೆ, ಅಲ್ಲಿ ರೈತನ ದಾಖಲೆ ಪತ್ರಗಳೂ ಯಾವುದೂ ಇಲ್ಲ. ಅಂತ ಕಡೆ ಬಹಳ ಸಲೀಸಾಗಿ ಭೂಮಾಲೀಕರನ್ನು ರಿಸೀವರಾಗಿ ನೇಮಕ ಮಾಡುತ್ತಾರೆ. ಎಲ್ಲ ದಾಖಲೆ ಪತ್ರಗಳು ಇವೆ, ಅವುಗಳನ್ನು ಕೋರ್ಟಿನ ಮುಂದೆ ತರುತ್ತಾರೆ, ಅಂತ ಕಡೆ ನೇಮಕ ಮಾಡುವುದಿಲ್ಲ. ಕೋರ್ಟಿನಲ್ಲಿ ನ್ಯಾಯಾಧೀಶರವರು ಲಾಟರಿ ಎತ್ತುವ ಹಾಗೆ ಚೀಟಿಯಲ್ಲಿ ಹಾಕಿ ಅದನ್ನು ಎತ್ತಿ ಭೂ ಮಾಲೀಕರನ್ನು ರಿಸೀವರಾಗಿ ಮಾಡುತ್ತಾರೆ. ಅನೇಕ ಕಡೆ ಈ ರೀತಿ ಮಾಡಿ ಭೂ ಮಾಲೀಕರು ರೈತನ ಭೂಮಿಯನ್ನು ತೆಗೆದುಕೊಂಡಿದ್ದಾರೆ. ತಡೆಯಾಜ್ಞೆಯನ್ನು ಕೊಡುವ ಬಹಳ ವಿಚಿತ್ರವಾದ ಕಾರಣಗಳನ್ನು ಹೈಕೋರ್ಟಿನವರು ಕೊಡುತ್ತಾರೆ. ಭೂಸುಧಾರಣೆ ಶಾಸನದಲ್ಲಿ ಯಾರದೋ ಒಂದು ಜಮೀನು ಗೇಣಿದಾರನ ವಶದಲ್ಲಿಯೋ ಅಥವಾ ಮಾಲೀಕನ ವಶದಲ್ಲಿಯೋ ಇಂಥ ವಿಚಾರವನ್ನು ಆರಂಭದಲ್ಲಿ ರೆವಿನ್ಯೂ ಅಧಿಕಾರಗಳು ತೀರ್ಮಾನ ಮಾಡಿದಮೇಲೆ, ಅಪಲೇಟ್ ಟ್ರಿಬ್ಯೂನಲ್ ಯಾರು ಗೇಣಿದಾರ ಎನ್ನುವುದನ್ನು ತೀರ್ಮಾನ ಮಾಡಬೇಕು. ಅಷ್ಟೇ ಅಲ್ಲದೇ, ಈ ನ್ಯಾಯ ಮಂಡಲಿಗಳಿಗೆ ಪೂರ್ಣ ಅಧಿಕಾರ ಇದೆ. ಜಮೀನು ಗೇಣಿದಾರನ ವಶದಲ್ಲಿಯೋ ಅಥವಾ ಇಲ್ಲವೇ ಎನ್ನುವುದನ್ನು ತೀರ್ಮಾನ ಮಾಡುವ ಅಧಿಕಾರ ನ್ಯಾಯ ಮಂಡಲಿಗಳಿಗೆ ಇಲ್ಲ ಎಂದು ಹೈಕೋರ್ಟಿನವರು ತೀರ್ಮಾನ ವನ್ನು ಕೊಟ್ಟಿದ್ದಾರೆ. ಸರ್ಕಾರದವರು ಇತ್ತಕಡೆ ಗಮನಹರಿಸಿ, ಸುಪ್ರೀಂಕೋರ್ಟು ಮುಂದೆ ಹೋಗಿ ಅವರು ತೀರ್ಮಾನ ಪಡೆದಂತೆ ತಡೆಹಾಕುವುದು ಒಳ್ಳೆಯದು. ಅಧಿವೇಶನ ಮುಗಿದ ಮೇಲೆ ಯೋಚನೆ ಮಾಡಿ ಇಂಥ ತೊಡಕುಗಳನ್ನು ನಿವಾರಣೆ ಮಾಡುವುದಕ್ಕೆ ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇದು ಅಲ್ಲದೆ ಭೂ ನ್ಯಾಯಮಂಡಲಿಗಳಿಗೆ ಸಾಕಷ್ಟು ಸಿಬ್ಬಂಧಿ ಇರಬೇಕಾಗುತ್ತದೆ, ಅಸಿಸ್ಟೆಂಟ್ ಕಮಿಷನರುಗಳು ಪ್ರತಿಯೊಂದು ತಾಲ್ಲೂಕಿಗೆ ಈಗ ತಾನೆ ಬಂದಿದ್ದಾರೆ, ಹಿಂದೆ ೨-೩ ತಾಲ್ಲೂಕು ಗಳಿಗೆ ಒಬ್ಬೊಬ್ಬರು ಅಸಿಸ್ಟೆಂಟ್ ಕಮಿಷನರ್‌ರವರು ಇದ್ದರು. ತಹಶೀಲ್ದಾರರು ಮತ್ತು ಕಾರ್ಯದರ್ಶಿ ಗಳು ಇಲ್ಲದೇ ಇರುವಂತ ತಾಲ್ಲೂಕುಗಳು ಇವೆ. ನಾನು ಪ್ರತಿನಿಧಿಸುವ ತಾಲ್ಲೂಕು ಕೂಡ ತಹಶೀಲ್ದಾರರು

ಇಲ್ಲದ ದುರ್ಭಿಕ್ಷ ತಾಲ್ಲೂಕು. ಜನತೆಯ ಕಷ್ಟಗಳನ್ನು ತೊಂದರೆಗಳನ್ನು ಅರ್ಥಮಾಡಿಕೊಂಡು, ಈಗ ಇರತಕ್ಕ ತುರ್ತುಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ಸಾಕಷ್ಟು ಸಿಬ್ಬಂಧಿಯನ್ನು ನೇಮಕಮಾಡಿ, ಎಲ್ಲಾ ಟ್ರಿಬ್ಯೂನಲ್‌ಗಳೂ, ತಾಲ್ಲೂಕು ಆಫೀಸುಗಳೂ ಬಾಕಿ ಉಳಿದಿರುವಂತ ಕೆಲಸಗಳನ್ನು ಬೇಗನೆ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಕೊನೆಯದಾಗಿ ವ್ಯವಸಾಯದ ಬಗ್ಗೆ ಇದರಲ್ಲಿ ತಾವು ಹೇಳಿದ್ದೀರಿ. ವ್ಯವಸಾಯದಲ್ಲಿ ನಮ್ಮಲ್ಲಿ ಇವತ್ತು ವಿಶೇಷ ಪರಿಸ್ಥಿತಿ ಬಂದಿದೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨ ವರ್ಷಗಳಿಂದ ಎಡೆಬಿಡದೆ ನೆರೆ ಬಂತು. ಒಂದು ವರ್ಷ ತೀವ್ರ ನೆರೆ ಬಂದಿದೆ ಈ ವರ್ಷ ಸಾಮಾನ್ಯವಾದ ನೆರೆ ಬಂದು ಯಾವ ಮನೆಯು ಕುಸಿದು ಬಿದ್ದಿಲ್ಲ. ಮನೆಗಳು ಕುಸಿದು ಬಿದ್ದಾಗ ಸರ್ಕಾರದವರು ತುರ್ತಾಗಿ ಕೆಲಸ ಮಾಡಿದ್ದಾರೆ. ೪ ಸಾವಿರಕ್ಕಿಂತ ಹೆಚ್ಚು ಕುಸಿದು ಬಿದ್ದ ಮನೆಗಳನ್ನು ನಮ್ಮ ಜಿಲ್ಲೆಯಲ್ಲಿ ಕಟ್ಟುವುದಕ್ಕೆ ಎಲ್.ಐ.ಸಿ. ಯಿಂದ ಪಡೆದ ಸಾಲದ ಹಣದಿಂದ ಅವರು ಪ್ರಾರಂಭ ಮಾಡಿಸಿ ಅದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಆದ್ದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಮತ್ತೆ ಇನ್ನೂ ಕೆಲವು ಸಮಸ್ಯೆಗಳು ಇವೆ. ಕುಸಿದುಬಿದ್ದು ಹೋದ ಮನೆಗಳ ಪುನರ್ ನಿರ್ಮಾಣದಿಂದ ಜನರು ಚೇತರಿಸಿಕೊಳ್ಳುವ ಸಂದರ್ಭ ಇವತ್ತು ಬಂದಿದೆ ಇದೇಹೊತ್ತಿನಲ್ಲಿ ಈ ವರ್ಷ ನೆರೆ ಬಂದಿದೆ. ಈ ನೆರೆಯಿಂದ ಆಗಿರುವ ಅನಾಹುತ ಮನೆಗಳದ್ದು ಅಲ್ಲ. ಅನೇಕ ಕಡೆಗಳಲ್ಲಿ ತೋಡರುಗಳು ಅಂದರೆ ಚಿಕ್ಕ ಚಿಕ್ಕ ಹೊಳ್ಳಗಳ ತೋಡುಗಳನ್ನು ಆ ಊರಿನವರೇ ಕಲ್ಲಿನಿಂದ ಕಟ್ಟಿದ್ದಾರೆ. ಅವುಗಳಿಗೆ ದುರಸ್ತಿ ಇಲ್ಲದೆ ಮೊದಲಿನ ಸ್ಥಿತಿಯಲ್ಲಿಯೇ ಇವೆ. ಅನೇಕ ಕಡೆಗಳಲ್ಲಿ ಒಡ್ಡುಗಳು ಹರಿದು ಹೋಗಿವೆ. ವ್ಯವಸಾಯ ಆಗುವಂಥ ಜಮೀನಿಗೆ ಮರಳು, ಕೆಸರು ೨-೩ ಅಡಿ ಎತ್ತರಕ್ಕೆ ಬಿದ್ದು ವ್ಯವಸಾಯ ಆಗುವಂಥ ಜಮೀನು ಇವತ್ತು ಹಾಳಾಗಿ ಹೋಗಿದೆ. ಇದನ್ನು ತೆಗೆಯುವ ಶಕ್ತಿಯು ರೈತರಿಗೆ ಇಲ್ಲವಾಗಿದೆ. ಇದು ಹೋದಸಲವೇ ಆಗಿದ್ದು ಅವರೇ ಆ ಸಾರಿ ಮಾಡಿಕೊಂಡರು; ನಮ್ಮ ಕಡೆ ಓನಫೆಡ ಎಂದು ಒಂದು ಗ್ರಾಮ ಇದೆ. ಇಲ್ಲಿ ಹೋದವರ್ಷ ಒಡ್ಡು ಹರಿದಿದ್ದು ಜಮೀನುಗಳಿಗೆ ಮರಳು ಕೆಸರು ಬಿದ್ದಿದ್ದು ಅದನ್ನು ರೈತರೇ ತೆಗೆದಿದ್ದಾರೆ. ಅಲ್ಲಿ ಈ ಸಲವೂ ಕೂಡ ಒಡ್ಡು ಒಡೆದು ಕೆಸರು ತುಂಬಿದೆ. ಅದನ್ನು ತೆಗೆಯುವ ಶಕ್ತಿ ರೈತರಿಗೆ ಇಲ್ಲ. ಹೋದಸಲವೇ ಇದನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಆಗ ನೆರೆ ಬಂದು ಮನೆಗಳನ್ನು ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟುವ ಕಾರ್ಯಕ್ರಮ ಆಗುತ್ತಿತ್ತು. ವ್ಯವಸಾಯದ ಜಮೀನು ಹಾಳಾಗಿ ಹೋಗಿದೆ. ನೀರು ಹರಿಯುವಂತಹ ಕಾಲುವೆಗಳಲ್ಲಿ ಒಡ್ಡು ಹರಿದು ಹೋಗಿದೆ. ಅವುಗಳನ್ನು ದುರಸ್ತಿ ಮಾಡುವುದಕ್ಕೆ ಸಾಲದ ರೂಪದಲ್ಲಿ, ಕಡಿಮೆ ಬಡ್ಡಿಯ ರೂಪದಲ್ಲಾಗಲೀ, ಸಬ್ಸಿಡಿ ರೂಪದಲ್ಲಾಗಲೀ ಅವರಿಗೆ ಸಹಾಯ ಮಾಡುವಂಥ ಯೋಜನೆಯನ್ನು ವ್ಯವಸಾಯ ಇಲಾಖೆಯವರು ಮತ್ತು ಪಿ ಡಬ್ಲ್ಯು. ಡಿ. ಇಲಾಖೆಯವರು ಸೇರಿಕೊಂಡು ನಮ್ಮ ಅರ್ಥ ಮಂತ್ರಿಗಳ ಸಹಕಾರವನ್ನು ಪಡೆದು ಈ ಯೋಜನೆಯನ್ನು ಕೈಗೊಳ್ಳಬೇಕು. ಅರ್ಥಸಚಿವರ ಸಹಕಾರ ಇಲ್ಲದೆ ಈ ಯೋಜನೆ ಕಾರ್ಯಗತವಾಗುವುದಿಲ್ಲ. ಅವರು ಇದರ ಬಗ್ಗೆ ಸಹಕಾರ ಕೊಟ್ಟು, ವ್ಯವಸಾಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯವರು ಸೇರಿಕೊಂಡು ಈ ಕಾರ್ಯಕ್ರಮದ ಬಗ್ಗೆ ವಿಶೇಷ ಗಮನವನ್ನು ಹರಿಸಬೇಕು. ರೈತರು ಅವರ ಜಮೀನಿನಲ್ಲಿ ವ್ಯವಸಾಯ ಮಾಡಿ ಆಹಾರದ ಉತ್ಪಾದನೆಯನ್ನು ಅಭಿವೃದಿ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ಈ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಅಧ್ಯಕ್ಷರು.— ಈಗ ನಮ್ಮ ಕಾರ್ಯಕ್ರಮದ ಪ್ರಕಾರ ೫-೬ ಬಿಲ್ಸ್‌ಗಳು ಪಾಸ್ ಆಗಲೇಬೇಕಾಗಿವೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ಮಾತಾಡುವುದಕ್ಕೆ ಹೆಸರು ಮೇಲೆ ಹೆಸರುಗಳು ಬರುತ್ತಿವೆ. ಆದುದರಿಂದ ತಮ್ಮ ಭಾಷಣವನ್ನು ಸ್ವಲ್ಪ ಕಡಿಮೆ ಮಾಡಿದರೆ ಒಳ್ಳೆಯದು.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಸಚಿವರು ನಮ್ಮ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡಿಗೆ ನಾನು ಬೆಂಬಲವನ್ನು ಸೂಚಿಸುತ್ತಾ, ಅವರು ಮೊನ್ನೆ ತಾನೇ ಡೆಲ್ಲಿಗೆ ಹೋಗಿ ಬಂದಿದ್ದಾರೆ ಅಲ್ಲಿ ವಿಶೇಷವಾದ ರೀತಿಯಲ್ಲಿ ಅವರು ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಅಲ್ಲಿಯ ಮುಖಂಡರುಗಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಶ್ರೀಮಾನ್ ವೀರಪ್ಪಗೌಡರು ಮಾತನಾಡುತ್ತಾ ಮಾನ್ಯ ಅರ್ಥ ಸಚಿವರು ಕೇವಲ ನೌಕರರ ಸಂಬಳವನ್ನು ಹೆಚ್ಚು ಮಾಡುವುದಕ್ಕೆ ಮಾತ್ರ ಸೀಮಿತವಾಗಿದ್ದಾರೆ ಎನ್ನುವ ಧಾಟಿಯಲ್ಲಿ ಹೇಳಿದಹಾಗೆ ಇತ್ತು. ಬಹುಶಹ ಅವರು ಮೊನ್ನೆಯ ಪತ್ರಿಕೆಗಳನ್ನು ನೋಡಿದಾಗ ಆ ರೀತಿ ಇಲ್ಲ. ಏಕಪಕ್ಷೀಯಾಗಿ ನೀವು ಕೇಂದ್ರ ಸರ್ಕಾರದ ನೌಕರರ ತುಟ್ಟಿಭತ್ಯವನ್ನು ಕೊಡತಕ್ಕಂಥ ದಿಶೆಯಲ್ಲಿ ನಮ್ಮನ್ನು ಕನಸಲ್ಟ್ ಮಾಡದೇ ಮಾಡುವುದು ಸರಿಯಲ್ಲವೆಂದು ಇಲ್ಲಿ ತಿಳಿಸಿದ್ದಾರೆ, ಆದ್ದರಿಂದ ಅವರಾದರೂ ಕೂಡ ಈ ಬಗ್ಗೆ ಕೇವಲ ಅಧಿಕಾರಿಗಳ ಅಥವಾ ನೌಕರರ ಸಂಬಳವನ್ನು ಹೆಚ್ಚು ಮಾಡತಕ್ಕಂಥ ದಿಶೆಯಲ್ಲಿ ಕೆಲಸಮಾಡುತ್ತಿಲ್ಲ ಎಂದು ಹೇಳಿ ಪತ್ರಿಕೆಯನ್ನು ನೋಡಿದನಂತರ

ನನಗಾದರೂ ಅನ್ನಿಸುತ್ತದೆ. ಅದೇ ರೀತಿಯಲ್ಲಿ ಅವರು ಕೆಲಸಮಾಡಬೇಕು. ಹೆಚ್ಚು ಹೆಚ್ಚಾಗಿ ಹಳ್ಳಿಗಾಡಿನ ಜನತೆಗೆ ಅನುಕೂಲಗಳನ್ನು ಕಲ್ಪಿಸತಕ್ಕಂಥ ರೀತಿಯಲ್ಲಿ ನಮ್ಮ ಬಜೆಟ್ ರೂಪಿತವಾದರೆ ಬಹಳ ಕ್ಷೇಮವಾಗುತ್ತದೆ. ಪ್ರಧಾನಮಂತ್ರಿಗಳು ೨೦ ಅಂಶಗಳ ಕಾರ್ಯಕ್ರಮ ಪಟ್ಟಿ ನಮ್ಮ ಮುಂದೆ ಇದ್ದು ಈ ಕಾರ್ಯಕ್ರಮಗಳನ್ನು ಜಾರಿಗೆ ತನ್ನಿ ಎಂದು ಹೇಳತಕ್ಕ ಸಂದರ್ಭದಲ್ಲಿ ನಾವಾದರೂ ಕೂಡ ಮಾರ್ಪಾಡು ಮಾಡಿಕೊಂಡು ನಮ್ಮ ಕೆಲಸಕಾರ್ಯಗಳನ್ನು ಮಾಡತಕ್ಕಂಥಾದ್ದು ಅತಿ ಮುಖ್ಯವಾದ ಒಂದು ಕಾರ್ಯ. ಆ ದಿಶೆಯಲ್ಲಿ ಮಾನ್ಯ ಅರ್ಥಸಚಿವರು ಇವತ್ತು ಇಟ್ಟಿರತಕ್ಕ ಈ ಒಂದು ಪತ್ರವು ಅಷ್ಟು ಮಹತ್ವದ್ದು ಆಗಿದೆಯೆಂದು ಹೇಳುವುದಕ್ಕೆ ನಮಗೆ ಅಷ್ಟು ಸೂಕ್ತವಾಗಿ ಕಾಣುತ್ತಿಲ್ಲ. ಅನೇಕ ರೀತಿಯ ತೊಂದರೆಗಳನ್ನು ನಾವು ಅನುಭವಿಸುತ್ತಿದ್ದೇವೆ. ಇವತ್ತು ನಾವು ೩-೪ನೇ ವರ್ಷದ ಹತ್ತಿರ ಹತ್ತಿರ ಬರುತ್ತಿದ್ದೇವೆ. ಈ ಮನೆಗೆ ಬಂದು ಸಾಕಷ್ಟು ಪ್ರಮಾಣದಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗಿಲ್ಲ. ನಾವು ಜನಗಳಿಗೆ ಹೇಳಿದ್ದಂತ ಕಾರ್ಯಗಳನ್ನು ಕಾರ್ಯಗತಃ ಮಾಡತಕ್ಕಂಥ ಒಂದು ದಿಶೆಯಲ್ಲಿ ಅವು ಕಾರ್ಯರೂಪಕ್ಕೆ ಬಾರದೆ ಇರತಕ್ಕಂಥಾದ್ದು ನಮಗೂ ಬಹಳ ತೊಂದರೆಗೆ ಈಡು ಮಾಡಿದೆ. ಪ್ರಧಾನಿಯವರ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ದಿಶೆಯಲ್ಲಿ ಹಿಂದೆ ಬಿದ್ದಂತಾಗುತ್ತದೆಂದು ಮಾನ್ಯ ಅರ್ಥಸಚಿವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಕಾರ್ಯಕ್ರಮವನ್ನು ಜಾಗ್ರತೆಯಾಗಿ ಮಾಡಿದರೆ ದೇಶದಲ್ಲಿ ಆಹಾರದ ಉತ್ಪಾದನೆ ಜಾಸ್ತಿಯಾಗುತ್ತದೆ. ತನ್ಮೂಲಕ ನಮ್ಮ ಬೇಡಿಕೆ ಏನಿದೆ, ಜನತೆಯ ಬೇಡಿಕೆ ಏನಿದೆ ಆ ಬೇಡಿಕೆಗಳು ಈಡೇರುತ್ತವೆ. ಹೆಚ್ಚು ಪ್ರಗತಿದಾಯಕವಾಗಿ ದೇಶ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುವುದಕ್ಕೆ ಸಹಕಾರಿಯಾಗುತ್ತದೆ. ಈ ಬಾಬಿಗೆ ಹೆಚ್ಚು ಹಣವನ್ನು ಮುಂದಿನ ಸಾರಿಯಾದರೂ ಕೂಡ ಕೊಡತಕ್ಕಂಥಾದ್ದು ಸೂಕ್ತವೆಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ವಿದ್ಯಾ ಸಚಿವರು ಇಲ್ಲೇ ಇದ್ದಾರೆ. ಅವರ ಇಲಾಖೆಗೆ ಸಂಬಂಧಪಟ್ಟಂತೆ ಎರಡು ಮಾತನ್ನು ಹೇಳುವುದು ಉಚಿತವೆಂದು ನಾನಾದರೂ ಭಾವಿಸುತ್ತೇನೆ. ಸುಮಾರು ೨-೩ ವರ್ಷದಿಂದ ಈ ಬ್ಯಾನ್ ಎನ್ನುವುದು ಇದೆ. ಹೆಚ್ಚು ಉಪಾಧ್ಯಾಯರುಗಳನ್ನು ನೇಮಿಸಿಕೊಳ್ಳುವುದಕ್ಕೆ ಒಂದು ತಡೆಯಾಜ್ಞೆ ಇದೆ ಈ ತಡೆಯಾಜ್ಞೆ ಪ್ರಕಾರ ವಿದ್ಯಾ ಇಲಾಖೆಯಲ್ಲಿ ಹೆಚ್ಚು ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿಯಾಗಿದ್ದರೂ ಕೂಡ ಮಕ್ಕಳ ಸಂಖ್ಯೆ ಜಾಸ್ತಿಯಾಗಿದ್ದರೂ ಕೂಡ. ಸೆಕ್ಷನ್‌ಗಳು ಜಾಸ್ತಿಯಾಗಿದ್ದರೂ ಕೂಡ ಈ ಉಪಾಧ್ಯಾಯರುಗಳ ನೇಮಕಗಳು ಕಳೆದ ಮೂರು ವರ್ಷದಲ್ಲಿ ಏನಿತ್ತು ಅಷ್ಟೇ ಪ್ರಮಾಣದಲ್ಲಿ ಇವತ್ತೂ ಮುಂದುವರಿಯುತ್ತಿದೆ. ಇದರಿಂದ ಹೈಸ್ಕೂಲುಗಳಲ್ಲಿ ಮತ್ತು ಕಾಲೇಜುಗಳಲ್ಲಿ ಮತ್ತು ಪ್ರೈಮರಿ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳ ಕೊರತೆಯಿಂದ ಸರಿಯಾದ ರೀತಿಯಲ್ಲಿ ಪಾಠಪ್ರವಚನಗಳು ನಡೆಯದೆ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಈ ಒಂದು ಇಲಾಖೆಯ ಕೆಲಸಕಾರ್ಯಗಳು ನಡೆಯುತ್ತಿವೆಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇಡೀ ದೇಶದಲ್ಲಿ ಹೈಸ್ಕೂಲು ಮಟ್ಟದಲ್ಲಿ ನಾವು ಈ ದಿವಸ ಲೆಕ್ಕವನ್ನು ತೆಗೆದುಕೊಂಡರೆ ಪ್ರತಿಯೊಂದು ಸೆಕ್ಷನ್‌ಗಳೂ ಕೂಡ ಜಾಸ್ತಿ ಆಗಿದೆ. ೮ನೇ ತರಗತಿ ೯ನೇ ತರಗತಿ ಮತ್ತು ೧೦ನೇ ತರಗತಿಯಲ್ಲಿ ಒಂದೊಂದು ಸೆಕ್ಷನ್‌ನಲ್ಲಿ ನೂರು ಮಕ್ಕಳು ಕೂತು ವಿದ್ಯಾಭ್ಯಾಸ ಮಾಡುವುದಕ್ಕಾಗುವುದಿಲ್ಲ ಅದೇ ಬ್ಯಾನ್‌ನ್ನು ಮುಂದುವರಿಸಿಕೊಂಡು ಹೋದರೆ ಮಕ್ಕಳಗತಿ ಏನಾಗಬೇಕು? ಉಪಾಧ್ಯಾಯರು ಕೆಲಸಮಾಡುವ ರೀತಿಹೇಗೆ? ತಾವು ಯೋಚನೆಮಾಡಿ ಈ ಬಾಬಿಗೆಹೆಚ್ಚು ಹಣವನ್ನು ಕೊಟ್ಟು ತಕ್ಷಣ ಬ್ಯಾನನ್ನು ತೆಗೆಯಬೇಕು. ಇನ್ನು ಉಪಾಧ್ಯಾಯರನ್ನು ನೇಮಕ ಮಾಡಿಕೊಂಡು ವಿದ್ಯಾಭ್ಯಾಸ ಸುಲಲಿತವಾಗಿ ನಡೆಯುವಂತೆ ವಿದ್ಯಾ ಇಲಾಖೆಯು ವ್ಯವಸ್ಥೆಮಾಡಬೇಕೆಂದು ಹೇಳಿ ನಾನು ಮಾನ್ಯ ಅರ್ಥಸಚಿವರ ಮೂಲಕ ಕೇಳಿಕೊಳ್ಳುತ್ತೇನೆ. ಈ ಒಂದು ಕಾರ್ಯಕ್ರಮ ತ್ವರಿತವಾಗಿ ಆಗಬೇಕಾಗಿದೆ. ಇದು ನಿಲ್ಲಿಸತಕ್ಕಂಥ ಒಂದು ಕಾರ್ಯಕ್ರಮವಲ್ಲ. ಪಾಠಶಾಲೆಗಳಿಗೆ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಸೇರಲು ಬರುತ್ತಾರೆ. ನಿಮಗೆ ಸ್ಥಳವಿಲ್ಲವೆಂದು ಬೇರೆ ಶಾಲೆಗಳಿಗೆ ಹೋಗಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ನೂರು ಮಕ್ಕಳೇ ಬರಲಿ, ನೂರೈವತ್ತು ಮಕ್ಕಳೇ ಬರಲಿ ಅವರನ್ನು ಪಾಠಶಾಲೆಗೆ ಸೇರಿಸಿಕೊಳ್ಳಲೇಬೇಕು. ಅವರಿಗೆ ಪಾಠ ಹೇಳಲೇಬೇಕು. ಇಂದಿನ ಪರಿಸ್ಥಿತಿ ಏನಾಗಿದೆ ಎಂದರೆ ಮಕ್ಕಳು ತೊಂದರೆಗೆ ಈಡಾಗಿದ್ದಾರೆ, ಆಡಳಿತವರ್ಗದವರು ತೊಂದರೆಗೆ ಈಡಾಗಿದ್ದಾರೆ. ಅದರಂತೆ ಪೋಷಕರೂ ಕೂಡ ತೊಂದರೆಗೆ ಈಡಾಗಿದ್ದಾರೆ. ಸರಿಯಾದಂಥ ರೀತಿಯಲ್ಲಿ ಪಾಠಶಾಲೆಗಳಲ್ಲಿ ಪಾಠಪ್ರವಚನಗಳು ಆಗುತ್ತಿಲ್ಲ. ವಿದ್ಯಾಭ್ಯಾಸದ ಇಲಾಖೆಯವರು ಏನು ಮೂರು ವರ್ಷಕಾಲದವರೆಗೆ ಇಟ್ಟಿದ್ದೀರಿ ಅದನ್ನು ತಕ್ಷಣ ತೆಗೆದು ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಅರ್ಥ ಸಚಿವರನ್ನು ಮತ್ತು ವಿದ್ಯಾಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಇಡೀ ದೇಶದ ಒಂದು ಸಮಗ್ರವಾದ ಸಮಸ್ಯೆಯಾಗಿದೆ ಎಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಸಹಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ ಮಾನ್ಯ ಸಹಕಾರ ಮಂತ್ರಿಗಳು ಇದರ ಬಗ್ಗೆ ಈಗಾಗಲೇ ನಿನ್ನೆ ನಮ್ಮ ಮುಂದೆ ಡಿಮ್ಯಾಂಡ್ ಇಟ್ಟಿದ್ದಾರೆ. ಈವತ್ತು ಅನೇಕ ಸಂಘ ಸಂಸ್ಥೆಗಳು ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ಅಲ್ಲಿ ಇರತಕ್ಕಂಥವರಿಗೆ ಈ ಸಂಘ ಸಂಸ್ಥೆಗಳು ಹುಲ್ಲಿಂಗಾವಲು ಇದ್ದಂಥಾಗಿದೆ. ಅಲ್ಲಿ ಚೆನ್ನಾಗಿ ಮೇಯ್ದು ಕೊಬ್ಬಿದ ಕೋಣಗಳಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದರಿಂದಾಗಿ ರೈತರಿಗೆ ಮುಂದುವರಿಯುವುದಕ್ಕೆ ಶಕ್ತಿ ಇಲ್ಲದಂತಾಗಿದೆ ಎಂದು ಸಹಕಾರಿ ಸಚಿವರಿಗೆ ತಿಳಿಸಲು ಇಚ್ಛೆಪಡುತ್ತೇನೆ. ಆರು ವರ್ಷಗಳ ಹಿಂದೆ ಏನು ಇದೇ ಮನೆಯಲ್ಲಿ ವಿಧೇಯಕವನ್ನು ಪಾಸ್‌ಮಾಡಿದ್ದಾರೆ, ಶಾಸನವನ್ನು ಪಾಸ್ ಮಾಡಿದ್ದಾರೆ. ಅದನ್ನು ತಕ್ಷಣ ಜಾರಿಗೆ ಬಂದರೆ, ಮೋಸಮಾಡತಕ್ಕ ಜನರು ಏನು ಇದ್ದಾರೆ, ಸಹಕಾರಿ ಕ್ಷೇತ್ರದಲ್ಲಿ ಮೋಸವನ್ನು ಅದೇ ಒಂದು ಕಸಬನ್ನಾಗಿ ಇಟ್ಟುಕೊಂಡು ವಂಚನೆ ಮಾಡತಕ್ಕ ಕದೀಮರು ಏನು ಇದ್ದಾರೆ ಅವರನ್ನು ದೂರವಿಡಲು ಸಾಧ್ಯವಾಗುತ್ತದೆ ಇದರಿಂದ ರೈತರಿಗೂ ಅನುಕೂಲವಾಗುತ್ತದೆಂದು, ತನ್ಮೂಲಕ ಆರ್ಥಿಕ ಪರಿಸ್ಥಿತಿಯೂ ಸುಭದ್ರವಾಗುತ್ತದೆಯಲ್ಲದೆ ಜನರಿಗೂ ಕೂಡ ನೆಮ್ಮದಿ ಎಂದು ಇರುತ್ತದೆ ನಾನು ಹೇಳಲು ಇಚ್ಛೆಪಡುತ್ತೇನೆ. ಈ ಕ್ಷೇತ್ರದಲ್ಲಿ ಈಗಲೂ ಕೂಡ ಬಹಳ ಅನ್ಯಾಯಗಳು ಕೆಲವು ಸಂಘಗಳಲ್ಲಿ ನಡೆಯುತ್ತಿವೆ ಎಂದು ಪದೇಪದೇ ಹೇಳುತ್ತಲೇ ಇದ್ದೇನೆ ಎಡಗೈ ಬಲಗೈಗಳಿಂದ ಹೆಬ್ಬೆಟ್ಟನ್ನು ಒತ್ತಿಸಿಕೊಂಡು ಜನರಿಗೆ ಮೋಸಮಾಡತಕ್ಕ ಪ್ರವೃತ್ತಿ ಈ ದೇಶದಲ್ಲಿ ನಡೆಯುತ್ತಿದೆ. ಇಂಥಹ ಜನರಿಂದ ಏನೂ ಅರಿಯದ ಸಾಮಾನ್ಯ ಜನರಿಗೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಈವತ್ತಿನ ದಿವಸ ಸಣ್ಣ ಸಣ್ಣ ಸಹಕಾರಿಸಂಘಗಳಿಗೆ ಕೊಟ್ಟರತಕ್ಕ ಸಾಲಗಳಲ್ಲಿ ಶೇಕಡ ೭೫ ರಷ್ಟು ಭಾಗ ರೈತಜನರಿಗೆ ಸಿಕ್ಕದೆ ಮೋಸಹೋಗಿರತಕ್ಕಂಥ ಸನ್ನಿವೇಶಗಳು ಈ ದೇಶದಲ್ಲಿ ಬಹಳವಾಗಿ ನಡೆದಿದೆ ಎಂದು ಈ ಸನ್ನಿವೇಶದಲ್ಲಿ ಹೇಳುತ್ತಾ ಇದ್ದೇನೆ. ಇದಕ್ಕೆ ಅವಕಾಶ ಕೊಡದೆ ಸಹಕಾರಿ ಇಲಾಖೆ ಹೆಚ್ಚಿನ ಶ್ರಮ ವಹಿಸಿ ಕೆಲಸಮಾಡಬೇಕಾಗಿದೆ. ಇದಕ್ಕೆ ಬೇಕಾದಂತ ಆರ್ಥಿಕ ನೆರವನ್ನು ಮಾನ್ಯ ಅರ್ಥ ಸಚಿವರು ಕೊಡುತ್ತಾರೆಂದು ನಂಬಿದ್ದೇನೆ. ಇನ್ನು ನಾವು ಅನೇಕ ರಾಷ್ಟ್ರೀಕೃತ ಬ್ಯಾಂಕುಗಳನ್ನು ನೋಡುತ್ತಾ ಇದ್ದೇವೆ. ಅದು ಸರಿಯಾಗಿ ಕೆಲಸಮಾಡತಕ್ಕ ಸೊಸೈಟಿಗಳಿಗೆ ಹಣವನ್ನು ಕೊಡುತ್ತಾ ಇಲ್ಲ. ಕೆಲವು ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅವರು ತೆಗೆದುಕೊಂಡಂತ ಸಾಲವನ್ನು ವಾಪಸ್ ಕೊಟ್ಟಿದ್ದರೂ ಕೂಡ ಮತ್ತೆ ಅವರಿಗೆ ಸಾಲವನ್ನು ಕೊಡುವುದರಲ್ಲಿ ಅವರು ಸರಿಯಾದ ರೀತಿಯಲ್ಲಿ ವ್ಯವಹರಿಸುತ್ತಿಲ್ಲ ಆದ್ದರಿಂದ ರಾಷ್ಟ್ರೀಕೃತ ಬ್ಯಾಂಕುಗಳು ಕೂಡ ಸರಿಯಾದಂತ ರೀತಿಯಲ್ಲಿ, ವ್ಯವಸ್ಥಿತವಾಗಿ ರೈತರಿಗೆ ಆಗಲಿ, ಅಥವಾ ಸಣ್ಣ ಸಣ್ಣ ಉದ್ದಿಮೇದಾರರಿಗೆ ಆಗಲಿ, ಸಣ್ಣ ಕೈಗಾರಿಕೆಗಳನ್ನು ನಡೆಸತಕ್ಕಂಥ ಕೈಗಾರಿಕಾ ಬಂಧುಗಳಿಗೆ ಆಗಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಕಷ್ಟು ಪ್ರಮಾಣದಲ್ಲಿ ಆರ್ಥಿಕ ನೆರವು ಏನು ದೊರೆಯುತ್ತಿಲ್ಲ ಅದನ್ನು ದೊರಕಿಸಿಕೊಡುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಇದನ್ನು ಕೇವಲ ರಾಷ್ಟ್ರೀಕರಣ ಮಾಡಿದ್ದರಿಂದ ಜನರಿಗೆ ಹಣ ಇದರಿಂದ ಸಿಗುತ್ತಿದೆ ಎಂದು ಏನು ನೀವು ತಿಳಿದುಕೊಂಡಿದ್ದೀರಿ ಅದು ತಪ್ಪು. ವ್ಯವಸ್ಥಿತವಾದ ರೀತಿಯಲ್ಲಿ ಹಣವನ್ನು ಕೊಡತಕ್ಕ ಏರ್ಪಾಡನ್ನು ಅರ್ಥ ಸಚಿವರು ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇಲ್ಲಿ ಅನ್ಯಾಯ ಮೋಸ ಎರಡೂ ನಡೆಯುತ್ತಿದೆ ಎಂದು ನಾನು ಹೇಳುತ್ತಾ ಇದ್ದೇನೆ.

ಇನ್ನು ಲ್ಯಾಂಡ್ ಆರ್ಮಿಯ ವಿಚಾರವನ್ನು ಹೇಳುವುದಾದರೆ, ಈ ಲ್ಯಾಂಡ್ ಆರ್ಮಿಗೆ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೀರಿ ಇಂಥ ಸಣ್ಣ ಸಣ್ಣ ಅನಾವಶ್ಯಕವಾಗಿ ತಗೆದಿರುವ ಇಲಾಖೆಗಳನ್ನು ತೆಗೆಯಬೇಕು. ಇದರಿಂದ ಏನು ಪ್ರಯೋಜನವಾಗುತ್ತಿಲ್ಲ. ಇದಕ್ಕೆ ಲಕ್ಷಗಟ್ಟಲೆ ಹಣವನ್ನು ಕೊಡುತ್ತಿದ್ದೀರಿ. ಇದರ ಬದಲು ಪಬ್ಲಿಕ್‌ವರ್ಕ್ಸ್ ಇಲಾಖೆ ಕೆಲಸಮಾಡುತ್ತಿದೆ ಅದರ ಮೂಲಕ ಈ ಇಲಾಖೆಯ ಕೆಲಸವನ್ನು ಮಾಡಿಸುವ ವ್ಯವಸ್ಥೆಯನ್ನು ಮಾಡಬಹುದು. ಡೂಪ್ಲಿಕೇಶನ್ ಆಗಬಾರದು. ಈ ಇಲಾಖೆ ಕೇವಲ ಹೆಸರಿಗೆ ಮಾತ್ರ ಇದೆ ಸಾಮಾಜಿಕವಾಗಿ ಇದರಿಂದ ಅನುಕೂಲವಾಗತಕ್ಕ ಒಂದು ಕೆಲಸವೂ ಕೂಡ ಆಗುತ್ತಿಲ್ಲ ಎಂದು ಹೇಳುತ್ತಿದ್ದೇನೆ. ಇದನ್ನು ಬೇಗ ಮುಚ್ಚಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನಾನು ಅರ್ಥ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಹೇಳುವುದಾದರೆ ಇದರಿಂದ ರೈತರಿಗೆ ಯಾವವಿಧ ಅನುಕೂಲವು ಆಗುತ್ತಿಲ್ಲ. ಕಂಬ ಕೊಟ್ಟರೆ ವೈರ್ ಇರುವುದಿಲ್ಲ, ವೈರ್ ಕೊಟ್ಟರೆ ಅಲ್ಯೂಮಿನಿಯಂ ಕಟ್‌ಔಟ್‌ಗಳು ಇರುವುದಿಲ್ಲ, ಹೀಗಾಗಿ ಪರಿಸ್ಥಿತಿಯನ್ನು ಎದುರಿಸತಕ್ಕ ದುಸ್ಥಿತಿಯಲ್ಲಿ ಈ ಇಲಾಖೆ ಇದೆಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ ವಿದ್ಯುಚ್ಛಕ್ತಿ ಬೋರ್ಡ್ ಬಹಳ ಉತ್ತಮವಾಗಿ ಕೆಲಸ ಮಾಡುತ್ತಾ ಇದೆ, ಮಂತ್ರಿಗಳೂ ಕೂಡ ಹೇಳಿದ್ದಾರೆ. ಆದರೂ ಕೂಡ ರೈತರಿಗೆ ಸಾಕಷ್ಟು ಅನುಕೂಲತೆಗಳು ಇದರಿಂದ ದೊರೆಯುತ್ತಿಲ್ಲ. ರೈತರು ದಿನೇ ದಿನೇ ಬಹಳ ತೊಂದರೆಗೆ ಈಡಾಗುತ್ತಿದ್ದಾರೆ ವಿನಹ ಅವರ ಕಷ್ಟ ಪರಿಹಾರವಾಗುತ್ತಾ ಇಲ್ಲ. ಆದಷ್ಟು ಬೇಗ ಇಲಾಖೆಯನ್ನು ಚುರುಕುಗೊಳಿಸುವುದು

ಸೂಕ್ತವೆಂದು ಹೇಳುತ್ತೇನೆ. ರೈತನು ತೆಗೆದಂತ ಬಾವಿಗಳಿಗೆ ಎರಡು, ಮೂರು ವರ್ಷಗಳಾದರೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈಬಗ್ಗೆ ತೀವ್ರವಾದಂತ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ.

ಇನ್ನು ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಆತನು ಬೆಳೆದಂತಹ ದವಸಕ್ಕೆ ಸರಿಯಾದ ಧಾರಣೆ ದೊರೆಯದೆ ಬಹಳ ತೊಂದರೆ ಪಡುತ್ತಿದ್ದಾನೆ. ಗೊಬ್ಬರದ ರೇಟ್ ಗಗನಕ್ಕೆ ಮುಟ್ಟಿದೆ. ಶ್ರೀಮಾನ್ ಚಿಕ್ಕೇಗೌಡರು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದ್ದೇವೆಂದು ಹೇಳುತ್ತಾ ಇದ್ದಾರೆ. ಈವತ್ತು ತಾಲ್ಲೂಕ್ಕುವಾರು ಅಂಕಿ ಅಂಶಗಳನ್ನು ತರಿಸಿಕೊಳ್ಳಬೇಕು, ಯಾವ ಪ್ರಮಾಣದಲ್ಲಿ ಗೊಬ್ಬರ ಮಾರಾಟವಾಗುತ್ತಿದೆ, ಕಳೆದವರ್ಷ ಮಾರಾಟವಾದುದು ಎಷ್ಟು, ಈ ವರ್ಷ ಮಾರಾಟವಾದುದು ಎಷ್ಟು ಈ ಬಗ್ಗೆ ರೈತನಿಗೆ ಗೊಬ್ಬರವನ್ನು ಕೊಡತಕ್ಕ ಸಾಮರ್ಥ್ಯವಿದೆಯೇ ಎನ್ನುವುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕೆಂದು ಕೇಳಿಕೊಳುತ್ತೇನೆ. ಸುಮಾರು ೧೫೦ ರೂಪಾಯಿಸಿಂದ ೧೬೦ ರೂಪಾಯಿನ ವರೆಗೆ ಒಂದು ಕ್ವಿಂಟಾಲ್ ಗೊಬ್ಬರಕ್ಕೆ ಕೊಟ್ಟು ತಂದು ಬೆಳೆದಂತ ಭತ್ತಕ್ಕೆ ಈವತ್ತಿನ ದಿವಸ ಕ್ವಿಂಟಾಲ್ ಭತ್ತವನ್ನು ೮೦ ರೂಪಾಯಿಗಳಿಗೆ ಕೇಳುತ್ತಾ ಇದ್ದಾರೆ. ಅವನ ಸ್ಥಿತಿ ಏನಾಗಬೇಕು, ಗೊಬ್ಬರ ಮತ್ತು ಕೂಲಿಕೊಡುವುದಕ್ಕೆ ಅವನು ಮಾಡಿದಂತ ಸಾಲವನ್ನು ತೀರಿಸುವುದಕ್ಕೆ ಈವತ್ತು ಭತ್ತವನ್ನು ಮಾರುತ್ತೇನೆಂದು ಹೇಳಿದರೆ ಭತ್ತವನ್ನು ತೆಗೆದುಕೊಳ್ಳುವುದಕ್ಕೆ ವರ್ತಕರು ಮುಂದೆ ಬರುತ್ತಾ ಇಲ್ಲ.

10-30 A. M.

ನಮ್ಮ ತಾಲ್ಲೂಕಿನಲ್ಲಿ ಹಾಗೂ ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಇವತ್ತು ಭತ್ತ ಮೊಳಕೆ ಬರುತ್ತಾ ಇದೆ. ಫುಡ್ ಕಾರ್ಪೊರೇಷನ್‌ನವರು ತೆಗೆದುಕೊಳ್ಳುತ್ತಾರೆ ಎಂದು ತಾವು ಹೇಳುತ್ತಿದ್ದೀರಿ, ಅವರು ಹೇಳಿದ್ದಾರೋ ಏನು ಕಥೆಯೋ ಗೊತ್ತಿಲ್ಲ. ಹೋಗಲಿ, ನೀವು ತೆಗೆದುಕೊಳ್ಳುವ ಬೆಲೆಗಾದರೂ ನಮ್ಮಿಂದ ಭತ್ತ ತೆಗೆದುಕೊಳ್ಳಿ ಎಂದರೆ, ಅರ್ಜಿ ಕೊಡಿ ಎಂದು ಕೇಳುತ್ತಾರೆ. ರೈತ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಅರ್ಜಿಯನ್ನು ಕೊಟ್ಟು, ಅವರು ಅದನ್ನು ಪರಿಶೀಲಿಸಬೇಕು. ಅವನು ಭತ್ತವನ್ನು ಮಾರುವುದು ಯಾವತ್ತು ? ಅವನ ಸ್ಥಿತಿ ಏನಾಗಬೇಕು ? ಇಂತಹ ಪರಸ್ಥಿತಿ ಬಂದೊದಗಿದೆ. ನೀವು ಈ ಬಗ್ಗೆ ಏನಾದರೂ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಬೆಳೆದಂಥ ಭತ್ತಮೊಳಕೆ ಬಾರದ ರೀತಿಯಲ್ಲಿ ಸರ್ಕಾರವೇ ಕೊಳ್ಳುವಂಥ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ಮಾನ್ಯ ಆರ್ಥಿಕ ಸಚಿವರು ಮುಂದಿನ ಸಾರಿ ಬೇಡಿಕೆಗಳನ್ನು ಮಂಡಿಸುವಾಗ ಸಾಮಾಜಿಕ ನ್ಯಾಯ ದೊರೆಯುವ ರೀತಿಯಲ್ಲಿ ಪ್ರಧಾನ ಮಂತ್ರಿಗಳ ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ಬರುವ ದಿಸೆಯಲ್ಲಿ ಪರಿವರ್ತನೆಮಾಡಿ ಮಂಡಿಸಬೇಕು ಎಂದು ಅವರನ್ನು ಪ್ರಾರ್ಥನೆ ಮಾಡಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕಂಥ ಹೆಚ್ಚುವರಿ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ, ನನ್ನ ಕ್ಷೇತ್ರಕ್ಕೆ ಮತ್ತು ನಮ್ಮ ಮೈಸೂರು ಜಿಲ್ಲೆಯ ಕೆಲವಾರು ತಾಲ್ಲೂಕುಗಳಲ್ಲಿ ಮಳೆ ಅಭಾವದಿಂದ ಜೋಳದ ಬೆಳೆಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ಒಂದೆರಡು ಸಲಹೆಗಳನ್ನು ಮತ್ತು ಕೆಲವು ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಕೆಲವು ಸೂಚನೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಮುಂಗಾರು ಮಳೆ ಸಕಾಲಕ್ಕೆ ಬಾರದೆ ತಡವಾಗಿ ಬಂತು. ಮುಂಗಾರು ಮಳೆ ತಡವಾಗಿ ಬಂದರೂ ಕೂಡ, ಜೋಳದ ಬೆಳೆ ಎಲ್ಲಾ ಕಡೆ ಹೋದರೂ ಕೂಡ ಮೈಸೂರು ಸಿಟಿಯಿಂದ ಪಶ್ಚಿಮಕ್ಕೆ ಇರತಕ್ಕ ತಾಲ್ಲೂಕುಗಳಲ್ಲಿ ರಾಗಿ ಬೆಳೆ ಚೆನ್ನಾಗಿ ಬರುತ್ತದೆ, ಸುಮಾರು ಮೇ ತಿಂಗಳ ಮಧ್ಯ ಭಾಗದ ಹೊತ್ತಿಗೆ ಮಳೆ ಬರಬಹುದು, ಈ ವರ್ಷ ನಮ್ಮ ಜಿಲ್ಲೆಯಲ್ಲಿ ಬೆಳೆ ಚೆನ್ನಾಗಿ ಬರಬಹುದು ಅಭಾವ ತಪ್ಪಬಹುದು ಎಂದು ಭರವಸೆ ಇಟ್ಟುಕೊಂಡಿದ್ದೆವು. ಆದರೆ ನಮ್ಮ ಜಿಲ್ಲೆಯ ದುರ್ದೈವ ಎಂದು ಕಾಣುತ್ತದೆ, ಒಂದೂ ಮುಕ್ಕಾಲು ವರ್ಷದಿಂದ ಮಳೆ ಬಾರದೆ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡಿನ ಒಂದೂವರೆ ಹೋಬಳಿ. ಟಿ. ನರಸೀಪುರದ ಒಂದು ಹೋಬಳಿ, ಕೊಳ್ಳೇಗಾಲ, ಯಳಂದೂರಿನ ಕಲವು ಭಾಗಗಳಲ್ಲಿ ಜೋಳದ ಬೆಳೆ ಸುಟ್ಟುಹೋಗಿದೆ. ಇದರ ಬಗ್ಗೆ ಪತ್ರ ಬರೆದು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಹಿಂದೆ ಅಸೆಂಬ್ಲಿ ಅಧಿವೇಶನ ನಡೆಯುವಾಗ ಮಾನ್ಯ ಮುಖ್ಯ ಮಂತ್ರಿಗಳು, ನಮ್ಮ ಜಿಲ್ಲೆಯ ಎಲ್ಲಾ ಪಕ್ಷಗಳ ಶಾಸಕರು, ಪಾರ್ಲಿಮೆಂಟ್ ಸದಸ್ಯರು,

ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ಕರೆದು ಪೇಟೆಗಳ ಮಧ್ಯ ಭಾಗದಲ್ಲಿ ಮೈಸೂರು ಜಿಲ್ಲೆಯಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆಮಾಡಿದರು. ಚರ್ಚೆಯಾದ ನಂತರ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಜರೂರಾಗಿ ಮಾಡಬೇಕು ಎಂದು ನಿರ್ದೇಶನ ಕೊಟ್ಟರು ಎಂದು ನನಗೆ ಜ್ಞಾಪಕ. ಕುಡಿಯುವ ನೀರಿಗೆ ಹೆಚ್ಚು ಆದ್ಯತೆ ಕೊಟ್ಟು ಆದಮೇಲೆ ನಮ್ಮ ಭಾಗದಲ್ಲಿ ಕೂಲಿಗಾರರಿಗೆ ಕೂಲಿ ಸಿಗತಕ್ಕಂಥಾದ್ದು, ಖಾಯಂ ಆಗಿ ಆದರಿಂದ ಫಲ ದೊರತಕ್ಕ ಕೆಲಸಗಳು ಎಂದರೆ ಸಣ್ಣ ನೀರಾವರಿ ಯೋಜನೆಗಳು ಮತ್ತು ಏತ ನೀರಾವರಿ ಯೋಜನೆಗಳು. ಇವುಗಳನ್ನು ಬಜೆಟ್‌ನಲ್ಲಿ ಸೇರಿಸಿ ಸ್ಯಾಂಕ್ಷನ್ ಮಾಡಿದ್ದೇವೆ. ಈ ಕೆಲಸಗಳನ್ನು ಪೀಸ್ ವರ್ಕ್ ಬೇಸಿಸ್ ಮೇಲೆ ಪ್ರಾರಂಭ ಮಾಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಆಗ ಶಾಸಕರ ಎದುರಿಗೇ ಸೂಚನೆಯನ್ನು ಕೊಟ್ಟರು. ಹೀಗೆ ಆದ್ಯತೆ ಮೇಲೆ ಸಣ್ಣ ನೀರಾವರಿ ಯೋಜನೆಗಳನ್ನು, ಮತ್ತು ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಮಾಡುವುದು ಎಂದು ಹೇಳಿಯಾದ ಮೇಲೆ ನೀರಾವರಿಗೆ ಅಭಾವ ಇರತಕ್ಕಂಥ ಭಾಗಗಳಲ್ಲಿ ಸಾಯಿಲ್ ಕನ್ಸರ್ವೇಷನ್‌ಗೆ, ಆದ್ಯತೆ ಕೊಟ್ಟು ಮಾಡಬೇಕು ಎಂದು ಅವರು ನಿರ್ದೇಶನ ಕೊಟ್ಟರು. ಕೊನೆಯದಾಗಿ, ಬಜೆಟ್‌ನಲ್ಲಿ ಸೇರಿಸಿ ಮಂಜೂರು ಆಗಿರತಕ್ಕಂಥ ಹಣದಲ್ಲಿ ಸ್ವಲ್ಪ ಹಣವನ್ನು ರಸ್ತೆ ಕಾಮಗಾರಿಗಳಿಗೆ ಕೊಟ್ಟರೆ ೧೫-೨೦ ದಿವಸಗಳಲ್ಲಿ ಕೆಲಸಗಳೆಲ್ಲಾ ಪ್ರಾರಂಭವಾಗಿ ದೂರು ಬರದ ಹಾಗೆ ನೋಡಿಕೊಳ್ಳಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ನಿರ್ದೇಶನ ಕೊಟ್ಟರು. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರಿಗಳಿಗೆಲ್ಲಾ ಸೂಚನೆ ಕೊಟ್ಟು ಬಂದಮೇಲೆ ಸರ್ಕಾರದ ಕಡೆಯಿಂದ ಹಣ ಕೊಟ್ಟು ಕೆಲಸಗಳು ಪ್ರಾರಂಭವಾಗಬಹುದು ಎಂದು ಯೋಚನೆ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದ ಪ್ರಕಾರ ಕೊಳ್ಳೇಗಾಲಕ್ಕೆ ಒಂದು ಫಾಸ್ಟ್ ರಿಗ್‌ನ್ನು ಕಳಿಸಿಕೊಟ್ಟರು, ಮತ್ತು ಗುಂಡ್ಲುಪೇಟೆಗೆ ಒಂದು ಫಾಸ್ಟ್ ರಿಗ್ಗನ್ನು ಕಳುಹಿಸಿಕೊಟ್ಟರು. ಈ ಎರಡು ತಾಲ್ಲೂಕುಗಳಲ್ಲಿ ಕೆಲಸಮಾಡುತ್ತಿದ್ದ ಫಾಸ್ಟ್ ರಿಗ್ಸ್ ೨-೩ ಬಾವಿಗಳನ್ನು ತೆಗೆಯುವ ಹೊತ್ತಿಗೆ ಕೆಟ್ಟು ಹೋಯಿತು. ಅದನ್ನು ರಿಪೇರಿ ಮಾಡಿಸಿ ಮತ್ತೆ ವಾಪಸ್ ತೆಗೆದುಕೊಂಡು ಹೋಗಬೇಕಾದರೆ ಒಂದು ವಾರ ಅಥವಾ ೧೫ ದಿವಸ ಹಿಡಿಯುತ್ತದೆ. ಇಡೀ ಜಿಲ್ಲೆಯಲ್ಲಿ ಹೆಚ್ಚಾಗಿ ತೊಂದರೆಗೆ ಸಿಕ್ಕಿರತಕ್ಕ ಪ್ರದೇಶಗಳಲ್ಲಿ ಫಾಸ್ಟ್ ರಿಗ್ಸ್‌ನ ಉಪಯೋಗ ಅಷ್ಟಾಗಿ ಆಗಿಲ್ಲ. ಕೆಲವೊಂದು ಬಾವಿಗಳನ್ನು ಗುಂಡ್ಲುಪೇಟೆಯಲ್ಲಿ ತೆಗೆದಿದ್ದಾರೆ. ನಂತರ ಕೊಳ್ಳೇಗಾಲ ಮತ್ತು ಚಾಮರಾಜ ನಗರದಲ್ಲಿ ೨-೩ ಬಾವಿ ತೆಗೆದ ಮೇಲೆ ರಿಗ್ಸ್ ಕೆಟ್ಟುಹೋಯಿತು. ಕೆಟ್ಟು ಹೋದ ರಿಗ್ಸ್‌ನ್ನು ರಿಪೇರಿಗೆ ಕಳಿಸಿದ ಮೇಲೆ ಅವು ೧೫ ೨೦ ದಿವಸ ಆದರೂ ವಾಪಸ್ ಬರಲಿಲ್ಲ. ಬೋರ್ ಬಾವಿಗಳನ್ನು ಮತ್ತು ಕೈಪಂಪು ಬಾವಿಗಳನ್ನು ಆಳ ಮಾಡಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚುಮಾಡಬಹುದು ಎಂದು ಸರ್ಕಾರದ ಕಡೆಯಿಂದ, ಅಧಿಕಾರಿಗಳ ಕಡೆಯಿಂದ ಬಿಡಿಓ ಗಳಿಗೆ ಸೂಚನೆ ಇರುವುದರಿಂದ ಆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಒದಗಿಸತಕ್ಕ ಸನ್ನಿವೇಶ ಇಲ್ಲ. ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಬೇಕಾದರೆ ಸರ್ಕಾರದ ಅನುಮತಿಬೇಕು. ಕೇವಲ ಒಂದು ಸಾವಿರ ರೂಪಾಯಿಯನ್ನು ಖರ್ಚುಮಾಡಿ ಬಾವಿಗಳನ್ನು ಆಳ ಮಾಡುವುದಕ್ಕೆ ಸಾಧ್ಯವಿಲ್ಲ. ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು, ಟಿ. ನರಸೀಪುರ, ಮತ್ತು ಕೊಳ್ಳೇಗಾಲ–ಈ ಭಾಗಗಳ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಆಳ ಮಾಡಿಸಿ ಕುಡಿಯುವ ನೀರನ್ನು ಒದಗಿಸು ವ್ಯವಸ್ಥೆ ಇನ್ನೂ ನಡೆದಿಲ್ಲ. ಮತ್ತೆ ಬಜೆಟ್‌ನಲ್ಲಿ ಸೇರಿಸಿರತಕ್ಕ ಸಣ್ಣ ನೀರಾವರಿ ಯೋಜನೆಗಳನ್ನು ಮತ್ತು ಏತನೀರಾವರಿ ಯೋಜನೆಗಳನ್ನು ಯಾವ ಒಂದು ತಡ ಇಲ್ಲದೇ ಕೆಲಸಗಳನ್ನು ಪ್ರಾರಂಭಮಾಡಿಸಿ ಎಂದು ಹೇಳಿದರೂ ಸಹ ಇನ್ನೂ ಪ್ರಾರಂಭವಾಗಿಲ್ಲ. ನನ್ನ ಕ್ಷೇತ್ರದಲ್ಲಂತೂ ಎರಡು ಏತ ನೀರಾವರಿ ಮಂಜೂರಾಗಿ ಎರಡು ವರ್ಷ ಆಯಿತು. ಅದನ್ನು ಕಾರ್ಪೊರೇಷನ್‌ಗೆ ತಿಳಿಸುತ್ತೇವೆ ಎಂದು ಎಕ್ಸಿಕ್ಯೂಟೀವ್ ಇಂಜನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರ್‌ರವರು ಹೇಳುತ್ತಾರೆ. ಅದು ಏನಾಯಿತು ಎಂದು ಕೇಳಿದರೆ ಸರ್ಕಾರದ ಕಡೆಯಿಂದ ಕ್ಲಿಯರೆನ್ಸ್ ಬಂದ ಹೊರತು ಮಾಡುವುದಿಲ್ಲ ಎಂದು ಹೇಳುತ್ತಾರೆ. ಕಳೆದ ಸಾಲಿನ ಅಸೆಂಬ್ಲಿಯಲ್ಲಿ ಸಣ್ಣನೀರಾವರಿ ಯೋಜನೆಗಳು ಸ್ಯಾಂಕ್ಷನ್ ಆಗಿ ಮಂಜೂರಾಗಿದ್ದರೂ ಕೂಡ ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲ. ಅದಕ್ಕೆ ಏನಾದರೂ ಸಣ್ಣಪುಟ್ಟ ನೆಪ ಹೇಳುತ್ತಾರೆ. ಅದಕ್ಕೆ ಸರ್ಕಾರದ ಮಂಜೂರಾತಿ ಸಿಕ್ಕಿದೆ, ತಾಂತ್ರಿಕ ಸಲಹೆ ಸಿಕ್ಕಿದೆ ; ಟೆಂಡರ್ ಕರೆದಿದ್ದಾರೆ. ಆದರೂ ಸಹ ಸಣ್ಣ ನೀರಾವರಿ ಕೆಲಸವನ್ನು ಪ್ರಾರಂಭ ಮಾಡುತ್ತಾ ಇಲ್ಲ. ನನ್ನ ಕ್ಷೇತ್ರದ ಬಗ್ಗೆ ಹೇಳಿದರೆ ಆಶ್ಚರ್ಯ ಎಂದು ತಾವು ಹೇಳಬಹುದು. ಒಂದು ೨೦-೩೦ಸಾವಿರ ರೂಪಾಯಿಯ ಸಣ್ಣ ನೀರಾವರಿ ಯೋಜನೆ ಬಿಟ್ಟರೆ ಕಳೆದ ೬-೭ ವರ್ಷಗಳಲ್ಲಿ ಒಂದು ಸಣ್ಣ ನೀರಾವರಿ ಯೋಜನೆಯನ್ನು ಕೂಡ ನನ್ನ ಕ್ಷೇತ್ರದಲ್ಲಿ ಮಾಡುವುದಕ್ಕೆ ಆಗಿಲ್ಲ. ಎರಡು ಏತ ನೀರಾವರಿ ಯೋಜನೆ, ಎರಡು ಸಣ್ಣ ನೀರಾವರಿ ಯೋಜನೆಗಳನ್ನು ಪ್ರಾರಂಭಮಾಡಿ ಎಂದುಮುಖ್ಯಮಂತ್ರಿಗಳು ಹೇಳಿದರೂ ಕೂಡ ಅಧಿಕಾರಿಗಳು ಪ್ರಾರಂಭಮಾಡಿಲ್ಲ ಮೂರನೇ ಆದ್ಯತೆಕೊಟ್ಟು ಸಾಯಿಲ್ ಕನ್‌ಸರ್ವೇಷನ್ ಕೆಲಸಗಳನ್ನು ಹೆಚ್ಚು ಹೆಚ್ಚು ತೆಗೆದುಕೊಳ್ಳಬೇಕು ಎಂದು ಆ ಸಭೆಯಲ್ಲಿ ತೀರ್ಮಾನವಾಗಿದ್ದರೂ ಸಹ ಸಾಯಿಲ್ ಕನ್‌ಸರ್ವೇಷನ್ ಕೆಲಸಗಳನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಸಾಯಿಲ್ ಕನ್‌ಸರ್ವೇಷನ್ ಡಿಪಾರ್ಟ್‌ಮೆಂಟ್‌ನ್ನು ಕೇಳಿದರೆ, ಅವರು 'ಸಾಕಾದಷ್ಟು ಹಣ ಕೊಟ್ಟಿಲ್ಲ',

ಕೊಟ್ಟಿರತಕ್ಕಂಥ ಹಣ ಕಳೆದ ಬಾರಿ ಕೆಲಸಗಳನ್ನು ಕನ್‌ಸಾಲಿಡೇಟ್ ಮಾಡುವುದಕ್ಕೆ ಮತ್ತು ವೇಸ್ಟ್‌ವೇರ್ ಮಾಡುವುದಕ್ಕೆ ಮಾತ್ರ ಸಾಕಾಗುತ್ತದೆ, ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಹಣ ಸಾಲದು ಇದರ ಬಗ್ಗೆ ಕಾಗದ ಬರೆಯುತ್ತೇವೆ, ವಿಚಾರ ಮಾಡುತ್ತೇವೆ' ಎಂದು ಉತ್ತರ ಕೊಡುತ್ತಾರೆ. ಇದಕ್ಕೆ ಹಣ ಕೊಟ್ಟು ಕೆಲಸ ಮಾಡಿಸುವ ಪ್ರಯತ್ನವನ್ನು ಇನ್ನೂ ಮಾಡಿಲ್ಲ. ಗುಂಡ್ಲುಪೇಟೆ, ಚಾಮರಾಜ ನಗರ, ಕೊಳ್ಳೇಗಾಲದ ಭಾಗಗಳಲ್ಲಿ ನೀರಿಗೆ ತೊಂದರೆ ಬಾರದೇ ಇರುವ ಹಾಗೆ ನೀರಾವರಿ ಭಾವಿಗಳನ್ನು ತೆಗೆದು ಪಂಪುಸೆಟ್ಟುಗಳನ್ನು ಹಾಕತಕ್ಕಂಥ ವ್ಯವಸ್ಥೆ ಮಾಡಿಕೊಡಿ ಎಂದು ಸರ್ಕಾರದಲ್ಲಿ ಮತ್ತು ಇಲಾಖೆ ಗಳಲ್ಲಿ ಹೇಳಿಕೊಂಡರೂ ಸಹ ಇನ್ನೂ ಮಾಡಿಲ್ಲ. ನನ್ನ ಅನುಭವದಲ್ಲಿ ಕಳೆದ ಎರಡು ವರ್ಷಗಳಿಂದ ನಮ್ಮ ಕೊಳ್ಳೇಗಾಲ, ಚಾಮರಾಜನಗರದಲ್ಲಿ ಬರಗಾಲ ಇದೆ. ಅಲ್ಲಿ ನೀರಾವರಿ ಭಾವಿಗಳನ್ನು ಹೆಚ್ಚಾಗಿ ತೆಗೆಯು ವುದು ಬಹಳ ಅವಶ್ಯಕತೆ ಇದೆ. ಅಲ್ಲಿ ವಿದ್ಯುಚ್ಛಕ್ತಿಗಾಗಿ ಅರ್ಜಿಗಳನ್ನು ಹಾಕಿಕೊಳ್ಳತಕ್ಕ ಸನ್ನಿವೇಶ ಇರುವುದರಿಂದ ಕೊಳ್ಳೇಗಾಲ, ಯಳಂದೂರು ಚಾಮರಾಜನಗರದ ಸ್ವಲ್ಪ ಭಾಗ ಮತ್ತು ಗುಂಡ್ಲುಪೇಟೆಯಲ್ಲಿ ಜನರು ವಿದ್ಯುಚ್ಛಕ್ತಿಗಾಗಿ ನೂರಾರು ಅರ್ಜಿಗಳನ್ನು ಕಳೆದ ೨-೩ ವರ್ಷಗಳಿಂದ ಹಾಕಿಕೊಂಡು ವಿದ್ಯುಚ್ಛಕ್ತಿ ಗಾಗಿ ಕಾದುಕೊಂಡಿದ್ದಾರೆ.

ಬಹುಶಃ ಸರ್ಕಾರದ ಕಡೆಯಿಂದ ಎಲ್ಲಿಗೆ ಸೂಚನೆ ಹೋಗುತ್ತದೆಯೋ ಅಲ್ಲಿಗೆ ವಿದ್ಯುಚ್ಛಕ್ತಿಯ ಕಂಬಗಳು ಆಗಲೀ, ವಯರ್ ಆಗಲೀ ಹೋಗುತ್ತವೆ. ಅಲ್ಲಿ ಮಾತ್ರ ಕೆಲಸ ನಡೆಯುತ್ತದೆ; ಎಂದು ನಮಗೆ ಸುದ್ದಿ ಬರುತ್ತದೆ. ನಾವು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕೇಳಿದರೆ, ಅವರು ಡಿವಿಷನಲ್ ಮಟ್ಟದ ಅಧಿಕಾರಿಗಳನ್ನು ಕೇಳಿ ಎಂದು ಹೇಳುತ್ತಾರೆ, ಅಲ್ಲಿ ಕೇಳಿದರೆ, ನಮಗೆ ವಯರ್, ಬೇಕಾದಂಥ ಸಾಮಾನುಗಳನ್ನು ಕೊಟ್ಟರೆ ನಾವು ಕೆಲಸ ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ, ನಾವು ಇದರ ಬಗ್ಗೆ ೧೫ ದಿವಸಕ್ಕೊಂದು ಸಾರಿ, ಎರಡು ತಿಂಗಳಿಗೊಮ್ಮೆ ಕೇಳಿದಾಗಲೆಲ್ಲ ಇದೇ ಉತ್ತರ ಅವರಿಂದ ಬರುತ್ತಿರುತ್ತದೆ. ದಯಮಾಡಿ ಇದು ಏಕೆ ಹೀಗೆ ಆಗುತ್ತದೆನ್ನುವುದನ್ನು ತಾವು ನೋಡಬೇಕು. ಬರಗಾಲಕ್ಕೆ ತುತ್ತಾಗಿರತಕ್ಕ ೩-೪ ಭಾಗಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಗೆ ಆದ್ಯತೆ ಕೊಟ್ಟು ಅವುಗಳಿಗೆ ಹಣ ಒದಗಿಸತಕ್ಕಂಥ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕುಗಳಲ್ಲಿ ಸುಮಾರು ೪೦೦-೫೦೦ ಬಾವಿಗಳಿಗೆ ವಿದ್ಯು ಚ್ಛಕ್ತಿಯನ್ನು ಕೊಟ್ಟರೆ ಅಲ್ಲಿಯ ಅಭಾವ ಪರಿಸ್ಥಿತಿ ಸುಧಾರಿಸಬಹುದು ಎಂದು ನನಗನ್ನಿಸುತ್ತದೆ. ನಮ್ಮ ಹಣಕಾಸಿನ ಮಂತ್ರಿಗಳು ದಯಮಾಡಿ ಇದಕ್ಕೆ ಹಣವನ್ನು ಒದಗಿಸಬೇಕೆಂದು ಕೇಳಿಕೊಂಡು ಸಪ್ಲಿಮೆಂಟರಿ ಎಸ್ಟಿಮೇಟನ್ನು ನಾನು ಸಮರ್ಥನೆ ಮಾಡುತ್ತೇನೆ. ಇದರ ಬಗ್ಗೆ ನಾನು ಯಾವ ಕಾಮೆಂಟ್ಸ್ ಮಾಡು ವುದಕ್ಕೆ ಇಷ್ಟಪಡುವುದಿಲ್ಲ. ಆದರೆ ನಮಗೆ ಬತ್ತೆಟ್ಟಿನಲ್ಲಿ ಮಂಜೂರಾಗಿರತಕ್ಕ ಕೆಲಸಗಳನ್ನಾದರೂ ಮಾಡು ವುದಕ್ಕೆ ಪ್ರಯತ್ನ ಮಾಡಿದರೆ ನಮ್ಮ ತೊಂದರೆಗಳು ನಿವಾರಣೆಯಾಗುತ್ತವೆ. ಕ್ಷಾಮ ಪರಿಹಾರಕ್ಕಾಗಿ ತಾವು ಹಣವನ್ನು ಇಟ್ಟುಕೊಂಡಿದ್ದೀರಿ, ಇದರಲ್ಲಿ ಖಾಯಂ ಆಗಿ ಫಲ ಕೊಡತಕ್ಕ ಕೆಲಸಗಳನ್ನು ಮಾಡಿಸ ಬೇಕು.

ಚಾಮರಾಜನಗರಕ್ಕೆ ಒಂದು ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡಿದ್ದಾರೆ. ಮಂಜೂರು ಮಾಡಿ ಎರಡು ವರ್ಷಗಳು ಕಳೆದು ಹೋದುವು, ಮೂರನೆಯ ವರ್ಷಕ್ಕೆ ಕಾಲು ಇಡುತ್ತಿದ್ದೇವೆ. ಈ ಆಸ್ಪತ್ರೆಗೆ ಸರಿಯಾದ ಕಟ್ಟಡ ಇಲ್ಲ. ಎಕ್ಸ್‌ರೇ ಸೌಲಭ್ಯ ಇಲ್ಲ, ಆಪರೇಷನ್ ಇನ್‌ಸ್ಟ್ರುಮೆಂಟ್ಸ್ ಇಲ್ಲ, ಇದಕ್ಕೆ ಸರಿಯಾದ ಬಿಲ್ಡಿಂಗ್ ಅನ್ನು ಕಟ್ಟುವುದಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ. ಇದಕ್ಕೆ ಆರೋಗ್ಯ ಇಲಾಖೆಯಲ್ಲಿ ಹಣ ಇದೆಯೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ನಮ್ಮ ಹಣಕಾಸಿನ ಮಂತ್ರಿಗಳು ಮಂಜೂ ರಾತಿಯನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ ಪರಿಸ್ಥಿತಿ ಹೀಗೆ ಆಗಿದೆ, ಇವಕ್ಕೆ ಬರೀ ಕಾಗದದ ಮೇಲೆ ಮಂಜೂರಾತಿ ದೊರಕಿದೆಯೋ ಏನೋ ಗೊತ್ತಾಗಿಲ್ಲ ಅಲ್ಲಿಗೆ ಡಾಕ್ಟರುಗಳನ್ನು ಮತ್ತು ಸ್ಟಾಫ್ ಮಾತ್ರ ಪೋಸ್ಟ್ ಮಾಡಿದ್ದಾರೆ. ಔಷಧಿಗಳು ಸಾಕಾದಷ್ಟು ಸರಬರಾಜು ಇಲ್ಲ. ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿದ ಮೇಲೆ ಅದಕ್ಕನುಗುಣವಾಗಿ ಔಷಧಿಯನ್ನು ಕೊಟ್ಟಿಲ್ಲ; ಇಂದು ಡಾಕ್ಟರುಗಳು ದೂರು ಮಾಡು ತ್ತಿದ್ದಾರೆ.

ಕೆಲವು ಕಡೆಗಳಲ್ಲಿ ರಸ್ತೆಗಳನ್ನು, ಕಟ್ಟಡಗಳನ್ನು ಮಾಡುತ್ತಿದ್ದಾರೆ, ಈ ಬಗ್ಗೆ ಸರ್ಕಾರದವರು ಏನು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಒಂದು ಕಡೆ, ಒಂದು ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಕೆಲಸಗಳನ್ನು ಮಾಡುವಂಥ ಒಂದು ತಾರತಮ್ಯವನ್ನು ನಾವು ಕಂಡಂಥ ಸಂದರ್ಭದಲ್ಲಿ, ಅಥವಾ ಕೇಳಿದಂಥ ಸಂದರ್ಭದಲ್ಲಿ ಈ ಒಂದು ನೀತಿ ನಮ್ಮ ಕ್ಷೇತ್ರಕ್ಕೆ ಮಾತ್ರ ಸೀಮಿತ ವಾಗಿದೆಯೇ ಎಂದು ನಮಗನ್ನಿಸುತ್ತದೆ. ನನ್ನ ಕ್ಷೇತ್ರದಲ್ಲಿ ಒಂದು ಬಾಲಕಿಯರ ಪಾಠಶಾಲೆಯನ್ನು ಷಿಫ್ಟ್ ಮೇಲೆ ನಡೆಸುತ್ತಿದ್ದಾರೆ. ಇದಕ್ಕೆ ಆದ್ಯತೆ ಕೊಟ್ಟು ಬಾಲಕಿಯರ ಶಾಲಾಕಟ್ಟಡವನ್ನು ಕಟ್ಟಿಸಿಕೊಡಿ ಎಂದು ಮಾನ್ಯ ಬದರೀನಾರಾಯಣ್ ಅವರು ಇದ್ದಾಗ ಮನವಿಮಾಡಿಕೊಂಡಿದ್ದೆನು. ಅವರು ಮುಂದಿನ ವರ್ಷ ಇದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ್ದರು. ಇದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನಸ್ವಾಮಿ

ಯಾವರಲ್ಲಿಯೂ ಮನವಿ ಮಾಡಿಕೊಂಡಾಗ ಅವರು ವಿಚಾರ ಮಾಡೋಣ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಕಟ್ಟಡಗಳನ್ನು ಕಟ್ಟದಿದ್ದರೆ, ನನ್ನ ಕ್ಷೇತ್ರದಲ್ಲಿಯೂ ಕಟ್ಟುವುದು ಬೇಡ ಎಂದು ನಾನೇ ಹೇಳುತ್ತೇನೆ. ಎಷ್ಟೋ ಕಡೆ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ, ಆದರೆ ತಮ್ಮ ನೀತಿ ನನ್ನ ಕ್ಷೇತ್ರಕ್ಕೆ ಮಾತ್ರ ಏಕೆ ಸೀಮಿತವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ದಯಮಾಡಿ ಮಾನ್ಯ ಹಣಕಾಸಿನ ಮಂತ್ರಿಗಳು ಈ ಒಂದು ಹೈಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಆಸ್ಪತ್ರೆಗೆ ಬೇಕಾದಂಥ ಎಕ್ಸ್‌ರೇ ಯೂನಿಟ್, ಆಪರೇಷನ್ ಥಿಯೇಟರ್‌ಗೆ ಕಟ್ಟಡ, ಅದಕ್ಕೆ ಬೇಕಾದಂಥ ಸಲಕರಣೆಗಳನ್ನು ಒದಗಿಸುವುದಕ್ಕೆ ಹಣಕಾಸಿನ ಮಂಜೂರಾತಿಯನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ),—ಸಭಾಪತಿಗಳೇ, ಈ ದಿವಸ ಮಂಡಿಸಿರತಕ್ಕ ಸಪ್ಲಿಮೆಂಟರಿ ಬಜೆಟ್ಟಿನ ಮೇಲೆ ನಾನು ಎರಡು ಮಾತನ್ನು ಹೇಳುತ್ತಾ, ಇದನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಮಾಡುವುದಕ್ಕೆ ಈ ಸಂದರ್ಭದಲ್ಲಿ ನಾನು ಇಷ್ಟಪಡುತ್ತೇನೆ. ಈಗಾಗಲೇ ಮಾತನಾಡಿರತಕ್ಕ ಅನೇಕ ಸ್ನೇಹಿತರು ಎಲ್ಲಾ ವಿಷಯಗಳನ್ನು ಮಾತನಾಡಿದ್ದಾರೆ. ಅವರೆಲ್ಲರೂ ತಮ್ಮ ತಮ್ಮ ಮನವಿಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಬಹಳ ದಿವಸಗಳಿಂದ ಈ ಒಂದು ಸಂಪ್ರದಾಯ ನಡೆದುಕೊಂಡು ಬರುತ್ತಿದೆ. ನನ್ನ ಅಭಿಪ್ರಾಯವಾದರೂ ಇಷ್ಟೆ, ನಾವು ಏನು ಒಂದು ಕಾರ್ಯವನ್ನು ಮಾಡಲಿ, ಮಾಡುವಾಗ ಎಲ್ಲವನ್ನು ಒಂದೇ ಸಮನಾಗಿ ನೋಡುತ್ತಿದ್ದೇವೆಂದು ನೋಡಬೇಕು. ಹಿಂದುಳಿದ ಪ್ರದೇಶಕ್ಕೂ ಸ್ವಲ್ಪ ಮುಂದುವರಿದ ಪ್ರದೇಶಕ್ಕು ಇರುವ ತಾರತಮ್ಯವನ್ನು ನಾವು ಲೆಕ್ಕಹಾಕಿ ಹಿಂದುಳಿದಪ್ರದೇಶಕ್ಕೆ ಸ್ವಲ್ಪಹೆಚ್ಚಿನ ಆದ್ಯತೆಯನ್ನುಮುಂದುವರಿದ ಪ್ರದೇಶಕ್ಕೆ ಸ್ವಲ್ಪಕಡಿಮೆ ಆದ್ಯತೆಯನ್ನು ಸರ್ಕಾರದವರು ಕೊಟ್ಟರೆ ಒಳ್ಳೆಯದಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಅತಿ ಸಮೀಪದಲ್ಲಿರತಕ್ಕ ನನ್ನ ತಾಲ್ಲೂಕು ಹೆಚ್ಚಿನ ಮಟ್ಟದಲ್ಲಿ ಹಿಂದುಳಿದಿದೆ ಎಂದರೆ ಅದು ತಪ್ಪಾಗಲಾರದು. ಎಲ್ಲಾ ಕ್ಷೇತ್ರಗಳಿಗಿಂತ ಇದು ಹಿಂದುಳಿದ ಪ್ರದೇಶವಾಗಿದೆ. ರಸ್ತೆಸಾರಿಗೆಯ ವಿಷಯದಲ್ಲಾಗಲೀ ನೀರಾವರಿ ವಿಷಯದಲ್ಲಾಗಲೀ ಎಲ್ಲಾ ಕ್ಷೇತ್ರಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳು ಆಗಬೇಕೋ ಆ ಕಾರ್ಯಗಳೆಲ್ಲವೂ ಆಗದೆ ನನ್ನ ಕ್ಷೇತ್ರ ಹಿಂದುಳಿದಿದೆ ಎಂದು ನಾನು ಹೇಳಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ನನ್ನ ತಾಲ್ಲೂಕಿಗೆ ಒಂದು ಸಾರಿ ಪ್ರವಾಸ ಹಾಕಿಕೊಂಡು ನನ್ನ ಕ್ಷೇತ್ರವನ್ನು ವೀಕ್ಷಿಸಿದರೆ ಆಗ ಅವರಿಗೆ ನನ್ನ ಕ್ಷೇತ್ರ ಎಷ್ಟರಮಟ್ಟಿಗೆ ಹಿಂದುಳಿದಿದೆ ಎನ್ನುವುದು ಮನವರಿಕೆಯಾಗಿ, ಆಗಲಾದರೂ ನನ್ನ ಕ್ಷೇತ್ರಕ್ಕೆ ಸ್ವಲ್ಪ ಹೆಚ್ಚಿನ ಸೌಲಭ್ಯಗಳನ್ನು ಮಾಡಲಿಕ್ಕೆ ಅನುಕೂಲವಾಗಬಹುದು ಎನ್ನುವ ಅಭಿಪ್ರಾಯ ಇದೆ. ಕಳೆದ ನಾಲ್ಕು ವರ್ಷಗಳಿಂದ ಸಣ್ಣ ನೀರಾವರಿಗೆ ಉಪಯೋಗವಾಗುವಂಥ ಒಂದೆರಡು ಕೆರೆಗಳನ್ನು ಕಟ್ಟಿಸಿಕೊಡಿ ಎಂದು ಕೇಳುತ್ತಿದ್ದೇನೆ, ಆದರೂ ಕೂಡ ಕೆಲಸಗಳು ಆಗಿಲ್ಲ ; ನೂರಕ್ಕೆ ನಾಲ್ಕೈದು ಪರ್ಸೆಂಟು ಮಾತ್ರ ನೀರಾವರಿ ಕೆಲಸಗಳು ನಮ್ಮಲ್ಲಿವೆ. ಇಲ್ಲಿಗೆ ಸ್ವಲ್ಪ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ನನ್ನ ಕ್ಷೇತ್ರವನ್ನು ಅಭಿವೃದ್ಧಿ ಮಾಡಿಕೊಡಿ ಎಂದು ಕೇಳಿಕೊಂಡರೂ ಕೂಡ ಸಣ್ಣ ನೀರಾವರಿ ಯೋಜನೆಗಳೂ ಕೂಡ ಅಲ್ಲಿ ಕಾರ್ಯಗತವಾಗುತ್ತಿಲ್ಲ. ಮತ್ತು ಒಡೆದು ಹೋದ ಪಿಕ್‌ಅಪ್‌ಗಳು, ಸಣ್ಣ ಸಣ್ಣ ಕೆರೆಗಳು ಈ ಕೆಲಸಗಳೂ ಆಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಮೇಲಿಂದ ಆದೇಶ ಬಂದಿಲ್ಲ, ನಾವು ಎಸ್ಟಿಮೇಟುಗಳನ್ನು ಕಳುಹಿಸಿಕೊಟ್ಟಿದ್ದೇವೆ, ಮಂಜೂರಾತಿ ಪಡೆದು ಬಂದಮೇಲೆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾ ಹೋಗುತ್ತಾರೆ. ಈ ಕೆಲಸಗಳಿಗೆ ಮಂಜೂರಾತಿ ಬರುವುದು ಯಾವಾಗ ಕೆಲಸಗಳು ಆಗುವುದು ಯಾವಾಗ ಇದು ನಮಗಂತೂ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೀಗೆ ರೆಗ್ಯುಲರ್ ಬಜೆಟ್ಟಿನ ಮೇಲೆ ಮಾತನಾಡಿದ ಹಾಗೆ ಭಾಷಣ ಮಾಡುತ್ತಾ ಹೋದರೆ ಹೇಗೆ, ಆದಷ್ಟು ಜಾಗ್ರತೆಯಾಗಿ ಅವರ ಭಾಷಣವನ್ನು ಮುಗಿಸಬೇಕು.

ಶ್ರೀ ಎಚ್. ಜಿ. ಚೆನ್ನಪ್ಪ.—ಅಧ್ಯಕ್ಷರೇ ನಾನಿನ್ನೂ ಐದು ನಿಮಿಷವೂ ಕೂಡ ಮಾತನಾಡಿಲ್ಲ.

ಅಧ್ಯಕ್ಷರು.—ಜಾಗ್ರತೆಯಾಗಿ ತಾವು ಭಾಷಣವನ್ನು ಮುಗಿಸಬೇಕು.

ಈಗ ಎಲ್ಲಾ ವಿಧದಲ್ಲೂ ಅನಾನುಕೂಲತೆಗಳು ಇದೆ ಎಂದು ಹೇಳುತ್ತೇನೆ. ಇವೊತ್ತಿನ ದಿವಸ ವಿದ್ಯಾಭ್ಯಾಸದ ವಿಷಯ ಯೋಚನೆ ಮಾಡುವುದಾದರೆ ಪಟ್ಟಣಗಳಲ್ಲಿ ಓದಿದಂತಹ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿರುತ್ತಾರೆ, ಆದ್ದರಿಂದ ಇಲ್ಲಿರತಕ್ಕ ಪಟ್ಟಣದ ಮಕ್ಕಳುಗಳಿಗೆ ಎಲ್ಲಾ ಕಾಲೇಜುಗಳಲ್ಲಿ, ಎಲ್ಲಾ ತಾಂತ್ರಿಕ ಶಾಲೆಗಳಲ್ಲಿ ಪ್ರವೇಶ ಸಿಕ್ಕತಕ್ಕ ಸೌಲಭ್ಯ ಇದೆ. ಆದರೆ ಅದೇ ಹಳ್ಳಿಗಾಡಿನ ಮಕ್ಕಳುಗಳ ವಿಷಯವಾಗಿ ಹೇಳುವುದಾದರೆ ಅವರಿಗೆ ಸರಿಯಾದ ತರಬೇತಿ ಸಿಕ್ಕದೆ ಅವರುಗಳು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಅವರಿಗೆ ಪ್ರೈಮರಿ, ಮಾಧ್ಯಮಿಕ, ಹಾಗೂ ಪ್ರೌಢಶಾಲೆಗಳಲ್ಲಿ ಹೆಚ್ಚಿನ ತರಬೇತಿ ಸಿಕ್ಕಿರುವುದಿಲ್ಲ. ಆದ್ದರಿಂದ ಅವರು ಹೆಚ್ಚಿನ ಅಂಕ

ಗಳನ್ನು ಗಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸೀಟು ಕೊಡುವಾಗ ಹಳ್ಳಿಗಳಿಂದ ಬರತಕ್ಕ ಮಕ್ಕಳುಗಳಿಗೆ ಪ್ರತ್ಯೇಕವಾಗಿ ನಿಯಮಾವಳಿ ಒಂದು ತಂದರೆ, ಹಳ್ಳಿಯ ಮಕ್ಕಳು ಕೂಡ ಈ ತಾಂತ್ರಿಕ ಶಾಲೆಗಳಲ್ಲಿ ಅಭ್ಯಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ತಾವು ಈ ಒಂದು ನಿಯಮಾವಳಿ ತಂದೇ ಹೋದರೆ ಹಿಂದುಳಿದ ಮಕ್ಕಳು ಹಿಂದೆಯೇ ಉಳಿಯಬೇಕಾಗುತ್ತದೆ, ಮುಂದುವರೆದ ಮಕ್ಕಳು ಮುಂದೆಯೇ ಹೋಗಬೇಕಾಗುತ್ತದೆ. ಆದುದರಿಂದ ಈ ಒಂದು ವಿಷಯದಲ್ಲಿ ಕೂಲಂಕುಷವಾಗಿ ಯೋಚಿಸಿ ಹಳ್ಳಿಯಿಂದ ಬರತಕ್ಕ ಮಕ್ಕಳಿಗೆ ಒಂದು ನಿಯಮಾವಳಿ ಮಾಡಿ ಅವರಿಗೆ ಸೌಲಭ್ಯ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ವ್ಯವಸಾಯದ ವಿಷಯವಾಗಿ ಅನೇಕ ಸದಸ್ಯರು ಮಾತನಾಡಿದ್ದಾರೆ, ಇವೊತ್ತು ರೈತರು ಬೆಳೆಯುತಕ್ಕ ಬೆಳೆಗೆ ಅವರಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ ಎಂದು ಹೇಳುತ್ತೇನೆ. ಕಾರಣ ಅವರು ಕೊಳ್ಳತಕ್ಕ ವಸ್ತುಗಳ ಬೆಲೆ ಏರುತ್ತಾ ಇದೆ, ಉದಾಹರಣೆಗೆ ಹೇಳುವುದಾದರೆ ಸುಮಾರು ಎರಡು ರೂಪಾಯಿಗೆ ಸಿಕ್ಕುತ್ತಿದ್ದಂಥ ಒಂದು ಗುದ್ದಲಿಯ ಬೆಲೆ ಇವೊತ್ತಿನ ದಿವಸ ಸುಮಾರು ಐದು ರೂಪಾಯಿ ಇದೆ. ಆದರೆ ರೈತರು ಬೆಳೆಯತಕ್ಕ ಬೆಳೆಗಳ ಬೆಲೆ ಮಾತ್ರ ಇಳಿಯುತ್ತಿದೆ, ಆದ್ದರಿಂದ ಬೆಳೆಯುತಕ್ಕವರ ಹಾಗೂ ಕೊಳ್ಳತಕ್ಕತಕ್ಕವರ ಬಗ್ಗೆ ಒಂದು ಸಮಿತಿಯನ್ನು ನಿರ್ಮಾಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಅಲ್ಲದೇ ಈಗಾಗಲೇ ಅನೇಕ ಇಲಾಖೆಗಳಲ್ಲಿ ಒಂದೊಂದು ಬೋರ್ಡ್ ಮಾಡಿದ್ದಾರೆ, ಇದೇ ರೀತಿಯಲ್ಲಿ ರೈತರುಗಳಿಗೂ ಕೂಡ ಒಂದು ಒಳ್ಳೆಯ ಸೌಲಭ್ಯ ದೊರೆಯುವಂತೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಈ ಒಂದು ಸಲಹೆ ಮಾಡದೇ ಹೋದರೆ ಬೆಳೆಯನ್ನು ಬೆಳೆಯುತಕ್ಕವನ ಮನಸ್ಸಿಗೆ ಬೇಜಾರಾಗಿ, ತಾನು ಬೆಳೆಯುತಕ್ಕದ್ದನ್ನು ಕಡಿಮೆ ಮಾಡುತ್ತಾನೆ ಎಂದು ಹೇಳುತ್ತೇನೆ. ರೈತರು ಏನು ಬೆಳೆಯುತ್ತಾರೆ ಅವರ ಖರ್ಚು ವೆಚ್ಚ ಎಷ್ಟಾಗುತ್ತದೆ ಅದನ್ನು ಲೆಕ್ಕ ಹಾಕಿ ಅದರ ಮೇಲೆ ಲಾಭ ಸಿಕ್ಕುವ ರೀತಿಯಲ್ಲಿ ವ್ಯವಸ್ಥೆ ಆಗಬೇಕು ಎಂದು ಹೇಳುತ್ತೇನೆ. ಈ ರೀತಿ ಮಾಡುವಾಗ ಇದು ಮಧ್ಯವರ್ತಿಗಳ ಕೈ ತಪ್ಪಿಸಿ ಸರ್ಕಾರದಿಂದ ನೇರವಾಗಿ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಷಯ ಹೇಳುವುದಾದರೆ ಇವೊತ್ತಿನ ದಿವಸ ರೈತರು ಬಾವಿಗಳಿಗೆ ಕಂಪ್ಲೀಷನ್ ರಿಪೋರ್ಟ್ ಕೊಟ್ಟು ತನ್ನ ಕಡೆಯಿಂದ ಖರ್ಚು ಮಾಡಬೇಕಾದಂಥಾದ್ದನ್ನು ಖರ್ಚು ಮಾಡಿ ಕರೆಂಟ್‌ಗೋಸ್ಕರ ಕಾಯುತ್ತಿದ್ದಾರೆ, ಆದರೆ ಮಂತ್ರಿಗಳು ವೈರ್ ಒದಗಿಸಿಕೊಡುತ್ತೇವೆ ಎಂದು ಹೇಳಬಹುದು, ಆದರೆ ರೈತರು ಎಷ್ಟು ಆಕಾಂಕ್ಷೆಯಿಂದ ಮುಂದೆ ಹೋಗುತ್ತಾರೆ ಅಷ್ಟೇ ಜರೂರಾಗಿ ಅವರಿಗೆ ಪ್ರತಿಫಲ ಸಿಕ್ಕುತ್ತಿಲ್ಲ. ಈಗ ಹೇಳುವುದಾದರೆ ಮಾರ್ಕೆಟ್ಟಿನಲ್ಲಿ ಬೇಕಾದಷ್ಟು ವೈರ್ ಸಿಕ್ಕುತ್ತಿದೆ, ಅದನ್ನು ಉಪಯೋಗಿಸಿಕೊಂಡು ಅವರು ಬಾವಿಗಳಿಗೆ ಕರೆಂಟ್ ತೆಗೆದುಕೊಳ್ಳಬೇಕಾಗಿದೆ, ಆದ್ದರಿಂದ ಸರ್ಕಾರ ತಕ್ಷಣ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಆಹಾರದ ಉತ್ಪತ್ತಿ ಹೆಚ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಅದರಿಂದ ಅವನು ಸಾಲ ತೀರಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮತ್ತೆ ಅವನು ಬೆಳೆದ ಬೆಳೆಗೂ ಯೋಗ್ಯ ರೀತಿಯ ಬೆಲೆ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು, ಅಲ್ಲದೇ ಹೆಚ್ಚಿನ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಹೇಳಿ ಇಷ್ಟು ವೇಳೆ ಕಾಲಾವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕೃಷ್ಣರಾವ್ (ಗೌರಿಬಿದನೂರು) —ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಆರ್ಥಿಕ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಸಲಹೆಗಳನ್ನು ಕೊಡಲು ಅಪೇಕ್ಷೆ ಪಡುತ್ತೇನೆ. ಇವೊತ್ತಿನ ದಿವಸ ರಾಷ್ಟ್ರಪತಿಯವರು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ತಂದಿರತಕ್ಕದ್ದು ಬಹಳ ಸ್ವಾಗತಾರ್ಹ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು ಮಾಡತಕ್ಕ ಅತಿ ಮುಖ್ಯವಾದಂಥ ಕೆಲಸಗಳನ್ನು ನಾನು ಈ ಸಂದರ್ಭದಲ್ಲಿ ಸೂಚಿಸಲು ಅಪೇಕ್ಷಿಸುತ್ತೇನೆ. ಈಗಾಗಲೇ ಶ್ರೀಮಾನ್ ಕೆ. ಎನ್. ವೀರಪ್ಪಗೌಡರು ಮಾತನಾಡಿದ ಹಾಗೆ ಅತಿ ಮುಖ್ಯವಾದಂಥ ವಿಷಯ ಎಂದರೆ ಇವೊತ್ತಿನ ದಿವಸ ಆಗಬೇಕಾದುದು ಹೆಚ್ಚಿಗೆ ಬೆಳೆ ಬೆಳೆಯಬೇಕಾದ್ದು, ಈ ರೀತಿ ಹೆಚ್ಚಿಗೆ ಬೆಳೆಯನ್ನು ಬೆಳೆಯದೆ ಬೆಲೆಗಳನ್ನು ಇಳಿಸುತ್ತೇವೆ ಎಂದು ಹೇಳಿದರೆ ಅದರಲ್ಲಿ ಅರ್ಥವಿಲ್ಲ ಎಂದು ಹೇಳುತ್ತೇನೆ. ಈ ರೀತಿ ಹೆಚ್ಚಿಗೆ ಬೆಳೆಯನ್ನು ಬೆಳೆಯ ಬೇಕಾದರೆ ಬಹುತೇಕವಾಗಿ ಮೈನರ್ ಇರಿಗೇಷನ್ ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ. ಇವೊತ್ತಿನ ದಿವಸ ಮಾನ್ಯ ಆರ್ಥಿಕ ಸಚಿವರು ಮಂಡಿಸಿರತಕ್ಕ ಬಡ್ಜೆಟ್ಟಿನಲ್ಲಿ ಮೈನರ್ ಇರಿಗೇಷನ್ ಬಗ್ಗೆ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ ಅಷ್ಟು ಆದ್ಯತೆ ಕೊಟ್ಟ ಹಾಗೆ ಕಾಣುತ್ತಾ ಇಲ್ಲ. ಈಗ ಒಂದು ಉದಾಹರಣೆ ಹೇಳುವುದಾದರೆ ಗೌರೀಬಿದನೂರು ತಾಲ್ಲೋಕಿನಲ್ಲಿ ೧೯೫೨–೫೩ನೇ ಇಸವಿ ಅಥವಾ ೧೯೭೦ನೇ ಇಸವಿ ತೆಗೆದುಕೊಂಡರೆ ಅಲ್ಲಿ ಮೈನರ್ ಇರಿಗೇಷನ್ ಕೆಲಸಗಳಲ್ಲಿ ಎಷ್ಟು ಮಟ್ಟಿಗೆ ಪೂರ್ತಿಯಾಗಿವೆ, ಎಷ್ಟು ಮಟ್ಟಿಗೆ ಅಭಿವೃದ್ಧಿಯಾಗಿವೆ ಎನ್ನುವ ವಿಷಯವನ್ನು ತಾವು ಯೋಚಿಸಬಹುದು. ಉದಾಹರಣೆಗೆ ಗೌರಿಬಿದನೂರು ತಾಲ್ಲೋಕಿನಲ್ಲಿ ಪೂರ್ಣಾಂಬುದಿ ಫೀಡರ್ ಚಾನಲ್‌ಗೆ

ನಾಲ್ಕು ಲಕ್ಷ ರೂಪಾಯಿ ಮಂಜೂರಾಗಿ, ಸುಮಾರು ಹನ್ನೊಂದು ಲಕ್ಷ ರೂಪಾಯಿಗಳವರೆಗೆ ಎಸ್ಟಿಮೇಟಾಗಿ ನಿಂತಿದೆಯೇ ಹೊರತು ಇವೊತ್ತಿನ ದಿವಸದವರೆಗೂ ಅಲ್ಲಿಯ ಕಾರ್ಯ ಪೂರ್ತಿ ಮುಗಿದಿಲ್ಲ. ಕಲ್ಲೂಡಿ ಕೆರೆಯಲ್ಲಿ ಬರತಕ್ಕ ಚಾನಲ್ ಸುಮಾರು ಹತ್ತು ವರ್ಷಗಳಿಂದ ಅಲ್ಲಿಗಲ್ಲಿಗೆ ಅರ್ಧಂಬರ್ಧವಾಗಿ ನಡೆದು ಕೆಲಸ ನಿಂತು ಹೋಗಿದೆ. ಈ ರೀತಿಯಾಗಿ ಅನೇಕ ಸಣ್ಣ ಸಣ್ಣ ನೀರಾವರಿ ಕಾರ್ಯಗಳು ಅರ್ಧಂಬರ್ಧ ಕೆಲಸವಾಗಿ ನಿಂತು ಹೋಗಿವೆ, ಇಂತಹ ಕೆಲಸಗಳನ್ನಾದರೂ ಇವೊತ್ತಿನ ದಿವಸ ಮಾಡದೇ ಇದ್ದ ಪಕ್ಷದಲ್ಲಿ ಮುಂದೆ ಮಾಡುತ್ತೇವೆ ಎನ್ನುವ ಆಸೆ ನನಗಂತೂ ಇಲ್ಲ. ಆದುದರಿಂದ ಇನ್ನಾದರೂ ಸರ್ಕಾರದವರು ದೃಢ ನಿರ್ಧಾರ ಮಾಡಿ ಯಾವ ಯಾವ ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕೆಲಸಗಳನ್ನು ತೆಗೆದುಕೊಂಡು ಎಷ್ಟು ಮಟ್ಟದಲ್ಲಿ ನಿಲ್ಲಿಸಿದ್ದಾರೆ, ಅವುಗಳನ್ನು ಪೂರೈಸುವಂತಹ ಕಾರ್ಯಕ್ರಮಗಳನ್ನು ದಯಮಾಡಿ ಮಾಡ ಬೇಕು ಎಂದು ನಾನು ಈ ಸಂದರ್ಭದಲ್ಲಿ ಅತ್ಯಂತ ವಿನಯದಿಂದ ಬೇಡಿಕೊಳ್ಳುತ್ತೇನೆ. ಇನ್ನೊಂದು ವಿಷಯ ಹೇಳುವುದಾದರೆ ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ, ಈ ವಿಷಯದಲ್ಲಿ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳ ಚೇಂಬರ್‌ನಲ್ಲಿ, ಸೆಕ್ರೆಟರಿಯವರು, ಚೀಫ್ ಇಂಜನಿಯರ್ ಅವರು, ದೇಶದ ಎಲ್ಲಾ ಇಂಜನಿಯರ್‌ಗಳನ್ನು ಸೇರಿಸಿ ನೀವು ಎಷ್ಟು ದುಡ್ಡು ಕೊಡುತ್ತೀರೋ ಅಷ್ಟು ಹಣವನ್ನು ಕರ್ನಾ ಟಕ ರಾಜ್ಯ ಸರ್ಕಾರ ಕೊಟ್ಟು ಈ ರಸ್ತೆ ಯೋಜನೆ ಮಾಡಿಕೊಡುತ್ತೇವೆ, ನೀವು ಬೆಳೆದಂತಹ ಕಬ್ಬನ್ನು ಸಾಗಿಸುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದ್ದು ಇದುವರೆಗೂ ಅಲ್ಲಿ ಕಾರ್ಯಕ್ರಮ ಕೈಗೊಂಡಿಲ್ಲ. ಈ ಕೆಲಸವನ್ನು ಡಿಸೆಂಬರ್ ಅಖೈರೊಳಗೆ ಮಾಡಿಕೊಡುತ್ತೇವೆ ಎಂದು ಹೇಳಿದ ಕೆಲಸ ಹಾಗೆ ನಿಂತು ಹೋಗಿದೆ ಎಂದು ಹೇಳಬೇಕಾಗಿದೆ. ಇಂತಹ ಒಂದು ಕ್ರಮ ಫೈನಾನ್ಸ್ ಡಿಪಾರ್ಟ್‌ಮೆಂಟಿ ನಲ್ಲಿ ಆಗುತ್ತಿದೆ. ಈಗ ಸ್ಯಾಂಕ್ಷನ್ ಹಣ ಏನು ಇದೆ, ಆ ಹಣದಲ್ಲಿ ಹಂತಹಂತವಾಗಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ, ಉದಾಹರಣೆಗೆ ಒಂದು ರಸ್ತೆ, ಅಥವಾ ಒಂದು ಮೋರಿ, ಸುಮಾರು ಹತ್ತು ಸಾವಿರ ರೂಪಾಯಿಗಳಲ್ಲಿ ಆದರೆ ಅಲ್ಲಿ ಸಲೀಸಾಗಿ ಲಾರಿಗಳು ಬಂದು ಹೋಗಬಹುದು. ಅಲ್ಲದೇ ಎಂಟು ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮ ಹಾಕಿಕೊಂಡರೆ ಸಲೀಸಾಗಿ ಎಲ್ಲಾ ರಸ್ತೆ ಗಳಲ್ಲೂ ಕಬ್ಬು ಸಾಗಾಣಿಕೆ ಅವಕಾಶವಾಗುತ್ತದೆ ಎನ್ನುವ ಶಿಫಾರಸ್ಸನ್ನು ಸೂಪರಿಂಟೆಂಡೆಂಟ್ ಇಂಜನಿಯರ್ ಚೀಫ್ ಇಂಜನಿಯರ್, ಸರ್ಕಾರದ ಪಿ ಡಬ್ಲ್ಯು. ಡಿ. ಇಂಜನಿಯರ್, ಪಿ. ಡಬ್ಲ್ಯು. ಡಿ. ಸೆಕ್ರೆಟರಿ ಯವರಿಂದ ಹೊರಟು ಫೈನಾನ್ಸ್‌ಗೆ ಹೋದಾಗ ಯಾವುದೋ ಒಂದು ಕ್ವೊಯರಿಯಾಗಿ ಮತ್ತೆ ವಾಪಸ್ಸು ಬಂದಿದೆ. ದಯಮಾಡಿ ಮಾನ್ಯ ಮಂತ್ರಿಗಳು ಇವೊತ್ತಿನ ದಿವಸ ಅಂಥ ಒಂದು ಅಡ್ಡಿ ಆತಂಕಗಳಿಗೆ ಅವಕಾಶ ಇಲ್ಲದೆ ಸುಂದರ ಹಾಗೂ ಅಭಿವೃದ್ಧಿ ಆಗತಕ್ಕ ಕೆಲಸಕಾರ್ಯಗಳನ್ನು ತಮ್ಮ ಭಾಗದಲ್ಲಿ ಏನು ಮುಂಚ್ಚಿ ದ್ದಾರೆ ಅದನ್ನು ತೆರವು ಮಾಡಿಕೊಟ್ಟು ತಾಲ್ಲೂಕಿನಲ್ಲಿ, ದೇಶದಲ್ಲಿ ಆಗತಕ್ಕ ಕೆಲಸಗಳಿಗೆ ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೈನರ್ ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಡಬೇಕು. ಇವೊತ್ತು ನಮ್ಮ ರಾಜ್ಯದಲ್ಲಿ ರೈತನು ಬೆಳೆಯುತಕ್ಕ ಪದಾರ್ಥಗಳ ವಿಷಯದಲ್ಲಿ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ರೈತರು ಬೆಳೆಯುತಕ್ಕ ಪದಾರ್ಥಗಳ ಬೆಲೆ ಕಡಿಮೆಯಾಗಬೇಕು ಎನ್ನುವುದರಲ್ಲಿ ನಾವು ಕೂಡ ಒಪ್ಪುರು. ಅದೇ ರೀತಿಯಲ್ಲಿ ಬಾಕಿ ಪದಾರ್ಥಗಳ ಬೆಲೆ ಇಳಿಯುತ್ತಿದೆ. ಇಳಿಯದೆ ಇರತಕ್ಕ ಪದಾರ್ಥಗಳ ಬೆಲೆ ಇನ್ನೂ ಕಡಿಮೆಯಾಗಬೇಕು. ರೈತನಿಗೆ ಅತಿ ಮುಖ್ಯವಾಗಿ ಉಪಯೋಗವಾಗಿರತಕ್ಕ ಫರ್ಟಿಲೈಸರ್ಸ್ ರಸಗೊಬ್ಬರಗಳು ಮತ್ತು ಇತ್ಯಾದಿಗಳ ಬೆಲೆ ಇಳಿಯದಿರುವುದನ್ನು ಕೇಂದ್ರ ಸರ್ಕಾರಕ್ಕೆ ತಾವು ಶಿಫಾರಸ್ಸು ಮಾಡಬೇಕು. ಇವೊತ್ತಿನ ದಿವಸ ಕೋಲಾರ ಜಿಲ್ಲೆಯಲ್ಲಿ ಲೆವಿ ವಸೂಲ್ಮಾಡುತ್ತಾ ಇರತಕ್ಕದ್ದು ಸರಿ ಯಷ್ಟೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಒಂದು ಪಲ್ಲ ಧಾನ್ಯವೂ ಸಹ ಇಲ್ಲದೆ, ಮತ್ತಿತರ ಮನೆಗಳಲ್ಲಿ ಅಂಗಡಿಯಿಂದ ಅಕ್ಕಿಯನ್ನು ತರಿಸಿಕೊಂಡು ತಿನ್ನುತ್ತಿರುವ ಸಂದರ್ಭದಲ್ಲಿ ೧೦ ಪಲ್ಲ ಲೆವಿ ನಿಗದಿ ಮಾಡಿ ಅವರುಗಳನ್ನು ಪೋಲೀಸ್ ಠಾಣೆಗೆ ಎಳೆದುಕೊಂಡು ಹೋಗಿರತಕ್ಕ ನಿದರ್ಶನಗಳು ಇವೆ. ಇದೇ ರೀತಿ ೯೩ ಕೇಸುಗಳನ್ನು ಹಾಕಿದ್ದಾರೆ. ಯಾರು ಸರ್ಕಾರಕ್ಕೆ ದ್ರೋಹ ಬಗೆಯದೆ ನಿಜವಾಗಿ, ಸತ್ಯಸಂಧತೆಯಿಂದ ಇರುತ್ತಾರೋ ಅಂಥವರನ್ನು ಶಿಕ್ಷಿಸುವ ಪ್ರವೃತ್ತಿ ಸರ್ಕಾರಕ್ಕೆ ಬೇಕಿಲ್ಲ. ಇದನ್ನು ಮಾನ್ಯ ಕಂದಾಯ ಸಚಿವರು ಪರ್ಯಾಲೋಚನೆ ಮಾಡಿ ಆದೇಶ ನೀಡಬೇಕೆಂದೂ ಹಾಗೂ ಸಂಬಂಧಪಟ್ಟ ಡೆಪ್ಯೂಟಿ ಕಮೀಷನರ್ ಗಳಿಗೂ ಸಹ ತಿಳಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

†SMT. SUMATHI S. MADIMAN (Dharwar).—Madam Speaker, I welcome the supplementary estimates for 1975-76 brought before the House today by the Hon'ble Finance Minister. At the outset, I want to say that I am going to speak on only subject *i. e.*, the

Education of Women. This being the commencement of the International Womens Year which I hope will continue till every woman is enlightend, I would like to place before the Minister that the percentage of women population is nearly 50% and the literacy percentage is only 18—19% Therefore, I request that more schools should be started for girls and women especially in the rural areas. Why I am stressing more schools and high schools meant for girls should come up in the rural areas is that in villages, after reaching certain age, the girl is prevented from going to school. I would also request that rules should be relaxed and full gratns should be given to those private organisations who have recently started schools or high schools for girls because, as every body knows, there are too many rules and obstacles which makes the girls to stay away from the school and prevents them from getting the educational facilities. Therefore, I once again request both the Hon'ble Finance Minister and the Hon'ble Education Minister to consider this matter very seriously. I am sure the Hon'ble Finance Minister will agree to this proposal and the Hon'ble Education Minister will rise to the occasion and send the proposal and get it sanctioned.

With these words, I thank the Chair for the oppertunity given to me to speak.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಈ ಸಪ್ಲಿಮೆಂಟರಿ ಎಸ್ಟಿಮೇಟ್‌ಗಳಿಗೆ ನಾನು ಸಂಪೂರ್ಣ ಬೆಂಬಲ ನೀಡುತ್ತಾ ಕೆಲವು ಉಪಯುಕ್ತವಾದ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಡಿಮ್ಯಾಂಡ್ ನಂ. ೮೬ರಲ್ಲಿ ಟ್ಯಾಕ್ಸೇಷನ್ ವೆಹಿಕಲ್ಸ್ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ಈ ಒಂದು ಸ್ಟ್ಯಾಪ್ ಸ್ಟೇಜಸ್ಸನ್ನು ಕಿತ್ತು ಹಾಕಿ 6 ಸ್ಟೇಜಸ್ ಇರುವುದನ್ನು ೭ ಸ್ಟೇಜಸ್ ಮಾಡಿ ೨ ಮೈಲಿಗೂ ೭೦ ಪೈಸೆ, ೭ ಮೈಲಿಗೂ ೭೦ ಪೈಸೆ ಮಾಡಿರುವುದು ಪ್ರಯಾಣಿಕರಿಗೆ ಅನ್ಯಾಯವಾಗಿದೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ, ೨ ಮೈಲಿಗೆ ೩೦ ಪೈಸೆ ಇದ್ದುದನ್ನು ೭೦ ಪೈಸೆ ಮಾಡಿದ್ದಾರೆ. ೫ ಮೈಲಿಯಿಂದ ೭ ಮೈಲಿಯ ಸ್ಟ್ಯಾಪ್ ಸ್ಟೇಜನ್ನು ಕಿತ್ತುಹಾಕಿ ೭೦ ಪೈಸೆ ಮಾಡಿದ್ದಾರೆ. ಈ ಹೊರೆಯನ್ನು ಪ್ರಯಾಣಿಕರ ಮೇಲೆ ಹೊರಿಸದೆ ಆದಷ್ಟು ಜಾಗ್ರತೆ ತೆಗೆದು ಹಾಕಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಮತ್ತು ಬಡವರಿಗೆ ಇರುವುದಕ್ಕೆ ಮನೆ, ಮೈಗೆ ಬಟ್ಟೆ ಹಾಗೂ ಹೊಟ್ಟೆಗೆ ಅನ್ನ ಇದರ ಬಗ್ಗೆ ವಿಶೇಷವಾದ ಬಜೆಟ್ಟನ್ನು ಅವರು ನಮೂದು ಮಾಡಬೇಕಿತ್ತು ಎಂದು ಹೇಳುತ್ತೇನೆ. ಮೂಲಭೂತವಾಗಿ ಪ್ರಧಾನ ಮಂತ್ರಿಯವರ ೨೦ ಅಂಶಗಳ ಕಾರ್ಯಕ್ರಮಕ್ಕನುಗುಣವಾಗಿ ಈ ಕಾರ್ಯಕ್ರಮ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೆ ಮೂಲಭೂತವಾಗಿ ಅನ್ನ ಮತ್ತು ಆಹಾರ, ರೈತನಿಗೆ ಗೊಬ್ಬರ ಮತ್ತು ಬೀಜ ಒದಗಿಸುವ ಬಗ್ಗೆ ಹೆಚ್ಚಿಗೆ ಚಿಂತನೆ ಮಾಡಬೇಕಾದುದು ಅತ್ಯಗತ್ಯವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ ಅನೇಕ ನ್ಯೂನತೆಗಳನ್ನು ಸರಿಪಡಿಸಬೇಕು. ಆ ಇಲಾಖೆಗೆ ಸರ್ಕಾರದವರು ಹೆಚ್ಚು ಹಣವನ್ನು ಮೀಸಲಾಗಿಟ್ಟಿದ್ದಾರೆ. ತಾವು ಸಹ, ಬಹುಭಾಗ ಹಣವನ್ನು ಜನರು ಉಪಯೋಗಿಸಿಕೊಂಡು ಸರ್ಕಾರಕ್ಕೆ ಮೋಸ ಮಾಡತಕ್ಕದ್ದನ್ನು ತಪ್ಪಿಸಿ ಹಣ ವಸೂಲಿ ಮಾಡುವ ಬಗ್ಗೆ ಹೆಚ್ಚಿನ ನಿಗಾವಹಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ತಾನೇ ಮಸೂದೆ ಪಾಸ್ ಆದ ರೀತಿಯಲ್ಲಿ ೬ ವರ್ಷಗಳ ಪದಾಧಿಕಾರಿಗಳು ಯಾರಿದ್ದಾರೆ ಅವರನ್ನು ಕಿತ್ತೊಗೆಯಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳ್ಳಸಾಗಾಣೆ ದಾರರು, ಬಂಡವಾಳಶಾಹಿಗಳು ಈ ಸೊಸೈಟಿಗಳನ್ನು ಕಬಳಿಸಿಕೊಂಡು ಬಡವರಿಗೆ ಯಾವ ರೀತಿಯಲ್ಲೂ ಸಹಾಯವಾಗದಂತೆ ಮಾಡಿದ್ದುದನ್ನು ಸರ್ಕಾರ ತೊಡೆದು ಹಾಕಿರುವುದಕ್ಕೆ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಮೂಲಭೂತವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಒಳನೇ ನಿಯಮದ ಪ್ರಕಾರ ಪಿ.ಎಲ್.ಡಿ. ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕಾಗಿದ್ದರೂ ಇದುವರೆಗೂ ಮಾಡದೆ ಇರುವುದು

ನನಗೆ ತುಂಬಾ ದುಃಖದ ವಿಚಾರ. ಮಾನ್ಯ ಸಹಕಾರ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಸೆಕ್ಷನ್ ೩೪ ರ ಪ್ರಕಾರ ಸ್ಪೆಸಿಫಿಕ್ ಆಗಿ ಇಷ್ಟು ದಿವಸದಲ್ಲಿ ಸೂಪರ್‌ಸೀಡ್ ಮಾಡಬೇಕೆಂದು ಆದೇಶವನ್ನು ಎಲ್ಲಾ ಸಹಕಾರ ಸಂಘಗಳಿಗೂ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಸೊಸೈಟಿಗಳಲ್ಲಿ ಏನೇನು ಅಕ್ರಮ ಮತ್ತು ಅನ್ಯಾಯ ನಡೆದಿದೆ ಆ ಬಗ್ಗೆ ಆದಷ್ಟು ಜಾಗ್ರತೆ ಸರ್ಕಾರಕ್ಕೆ ರಿಪೋರ್ಟ್ ತರಿಸಿಕೊಂಡು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬ್ಯಾಂಕುಗಳು ರಾಷ್ಟ್ರೀಕರಣವಾದ ಮೇಲೆ ಅನೇಕ ರೀತಿಯಲ್ಲಿ ಬಡವರಿಗೆ, ದುರ್ಬಲ ವರ್ಗದವರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಅನೇಕ ರೀತಿಯಲ್ಲಿ ಸಾಲ ದೊರೆಯುತ್ತವೆಂದು ಪ್ರತೀತಿ ಇದೆ. ಆದರೆ ನೇರವಾಗಿ ಸಾಲ ಬಡವರಿಗೆ ಮತ್ತು ಹರಿಜನರಿಗೆ ಸುಲಭ ರೀತಿಯಲ್ಲಿ ಯಾವ ಅಡ್ಡಿ ಆತಂಕವೂ ಇಲ್ಲದ ರೀತಿಯಲ್ಲಿ ಒದಗಿಸತಕ್ಕ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ, ಈ ಒಂದು ಪಾಲಿಸಿ ವಿಚಾರದಲ್ಲಿ ಹೇಳಬೇಕಾದರೆ, ನನ್ನ ಕ್ಷೇತ್ರದಲ್ಲಿ ಅನೇಕ ಹರಿಜನ ಗಿರಿಜನರು ಫಾರೆಸ್ಟನ್ನು ಉತ್ತು ಬಿತ್ತಿ ೧೦–೨೦ ವರ್ಷಗಳಿಂದ ಬೇಸಾಯ ಮಾಡಿಕೊಂಡಿದ್ದರು. ಫಾರೆಸ್ಟ್ ಇಲಾಖೆಯವರು ಆ ಒಂದು ಜಮೀನನ್ನು ಮೈನರ್ ಫಾರೆಸ್ಟ್ ಮಾಡಿ ಅಕ್ರಮಿಸಿಕೊಂಡಿದ್ದಾರೆ. ನಾನು ಈ ಸಮಯದಲ್ಲಿ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಪದೇ ಪದೇ ೨೦–೩೦ ವರ್ಷಗಳಿಂದ ಸಾಗು ಮಾಡಿಕೊಂಡು ಬಂದಿರತಕ್ಕ ಬಡವರಿಗೆ ಆ ಜಮೀನನ್ನು ಖಾಯಂ ಮಾಡಿಕೊಡಬೇಕು. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಟ್ರೆಂಚಸ್ ಹಾಕಿ ಸಸಿಗಳನ್ನು ನೆಡುತ್ತಾರೆ, ಇದು ಅಕ್ರಮವಾದುದು, ಬಡವರು ಸಾಗುವಳಿ ಚೀಟಿ ಪಡೆದಿದ್ದರೂ ಸಹ ಅದನ್ನು ಕಿತ್ತು ಹಾಕಿ ಸಾಗು ಮಾಡಬಾರದೆಂದು ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಅನೇಕ ವಿಧದಲ್ಲಿ ತೊಂದರೆ ಕೊಡುತ್ತಿದ್ದಾರೆ. ಇದು ಸಮಾಜವಾದಕ್ಕೆ ತದ್ವಿರುದ್ಧವಾಗಿದೆ. ಇದನ್ನು ಆದಷ್ಟು ಜಾಗ್ರತೆ ತಪ್ಪಿಸಬೇಕು. ಇದರಿಂದ ಅದಕ್ಕೆ ಮೆರಗು ಕೊಟ್ಟಂತಾಗುತ್ತದೆ.

ಕೊನೆಯದಾಗಿ ಮಾನ್ಯ ಆರ್ಥಿಕ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಏನೆಂದರೆ ಮನೆ ಕಟ್ಟುವ ವಿಚಾರದಲ್ಲಿ ಹೌಸಿಂಗ್ ಬೋರ್ಡ್‌ನವರು ರಿಯಾಯಿತಿ ರೀತಿಯಲ್ಲಿ ಹರಿಜನ ಗಿರಿಜನರಿಗೆ ಸಬ್ಸಿಡಿ ರೂಪದಲ್ಲಿ ಏನು ಹಣವನ್ನು ಕೊಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕು. ಏಕೆಂದರೆ ಇವತ್ತು ಅವರು ಮನೆಯನ್ನು ಕಟ್ಟಿಲ್ಲ. ಅವರ ಹೆಸರಿನಲ್ಲಿ ಮಧ್ಯವರ್ತಿ ಜನ ಸಾಲ ಪಡೆದು ಡಿಮ್ಯಾಂಡ್ ನೋಟೀಸ್ ಬಂದಾಗ ಮಾತ್ರ ಅವರು ಎಚ್ಚೆತ್ತಿದ್ದಾರೆ. ಹರಿಜನ ಗಿರಿಜನರ, ದುರ್ಬಲ ವರ್ಗದವರ ಬಗ್ಗೆ ಹೆಚ್ಚು ನಿಗಾ ವಹಿಸಿ ನೀವು ಏನು ಸೌಕರ್ಯಗಳನ್ನು ಕೊಟ್ಟಿದ್ದೀರಿ ಅವುಗಳೆಲ್ಲಾ ಅವರ ಹೆಸರಿನಲ್ಲಿ ಇವೆಯೋ, ಲೋನ್ ಕೊಟ್ಟಿರುವುದು ಅವರಿಗೆ ತಲುಪಿದೆಯೋ ಎಂಬುದನ್ನು ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಿದ್ದೇನೆ. ಈಗಾಗಲೇ ಜನತಾ ಹೌಸಿಂಗ್ ಸ್ಕೀಮಿನಲ್ಲಿ ಸುಲಭ ರೀತಿಯಲ್ಲಿ ೧ ಕೋಟಿ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡಬೇಕೆಂದು ಮಾಡಿದ್ದಾರೆ. ಅದೇ ರೀತಿಯಲ್ಲಿ ಹೌಸಿಂಗ್ ಬೋರ್ಡ್ ಕಾರ್ಪೊರೇಷನ್‌ನವರೂ ಕೂಡ ಒಂದು ಸಾವಿರ ರೂಪಾಯಿಯನ್ನು ಸಬ್ಸಿಡಿ ರೂಪದಲ್ಲಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್ಥಿಕ ಸಚಿವರು ತಂದಿರತಕ್ಕಂಥ ಸಪ್ಲಿಮೆಂಟರಿ ಡಿಮ್ಯಾಂಡ್ ಏನಿದೆ ಅದನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆ ಪಡುತ್ತೇನೆ.

ಮೊಟ್ಟ ಮೊದಲನೆಯದಾಗಿ ಕಾಳೀನದಿ ಯೋಜನೆಗೆ ಹಣದ ಸವಲತ್ತನ್ನು ಮಾನ್ಯ ಆರ್ಥಿಕ ಸಚಿವರು ಒದಗಿಸಿಕೊಂಡು ಬಂದಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಈ ದೇಶದಲ್ಲಿ ಸಂಕಷ್ಟ ಪರಿಸ್ಥಿತಿ ಇರುವಂತಹ ಈ ಕಾಲದಲ್ಲಿ ಅನೇಕ ಸಮಸ್ಯೆಗಳನ್ನು ಇವರು ತೀರ್ಮಾನ ಮಾಡಿದ್ದಾರೆ ಆದುದರಿಂದ ಅವರನ್ನು ನಾನು ವಂದಿಸುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಮಾನ್ಯ ಗುಂಡೂರಾಯರು ಈಗ ಏನೊಂದು ವಿಷಯದಲ್ಲಿ ತಲೆ ಎತ್ತಿಕೊಂಡು ಹೊರಟಿದ್ದಾರೆ ಆ ಬಗ್ಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಸರ್ಕಾರದ ಎಲ್ಲ ಆಫೀಸ್‌ಗಳಲ್ಲಿಯೂ ಕೂಡ ಯಾವ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಪರಿಶೀಲನೆ ಮಾಡುವ ಕಾರ್ಯಕ್ರಮವನ್ನು ಈಗ ಇವರು ಹಾಕಿಕೊಂಡು ಹೊರಟಿದ್ದಾರೆ. ಇವರ ಖಾತೆಯವರು ಇದನ್ನು ಕೊನೆಯವರೆಗೂ ನಡೆಸಿಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಆಫೀಸ್‌ಗಳಲ್ಲಿ ಸಣ್ಣಪುಟ್ಟ ನೌಕರರಿಗೆ ಕಾಫಿ ಕುಡಿಯುವ ರಿವಾಜು ಇದೆ. ಯಾರಾದರೂ ಹೋಗಿ ಇವರು ಎಲ್ಲಿ ಹೋದರು ಎಂದು ಕೇಳಿದರೆ ಕಾಫಿ ಕುಡಿಯುವುದಕ್ಕೆ ಹೋಗಿದ್ದಾರೆ, ಟೀ ಷಾಪ್‌ಗೆ ಹೋಗಿದ್ದಾರೆ, ಎಂದು ಹೇಳುತ್ತಾರೆ. ಇನ್ನು ಡಿಪಾರ್ಟ್‌ಮೆಂಟ್

ಹೆಡ್ ಆದಂಥ ಸಾಹೇಬರು ಎಲ್ಲಿ ಹೋಗಿದ್ದಾರೆಂದು ಕೇಳಿದರೆ, ಅವರು ವಿಧಾನ ಸೌಧಕ್ಕೆ ಮೀಟಿಂಗ್‌ಗೆ ಹೋಗಿದ್ದಾರೆ, ಅವರು ಯಾವಾಗ ಬರುತ್ತಾರೋ ಗೊತ್ತಿಲ್ಲವೆಂದು ಹೇಳುತ್ತಾರೆ. ಇಂಥ ಉತ್ತರವನ್ನು ಹೇಳುವುದನ್ನು ತಪ್ಪಿಸತಕ್ಕ ವ್ಯವಸ್ಥೆಯನ್ನು ಮಾಡಿದರೆ ಆಗ ಈ ದೇಶದಲ್ಲಿ ಕೆಲಸಕಾರ್ಯಗಳು ಬಹಳ ಸುಗಮವಾಗಿ ನಡೆಯಲು ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನೊಂದು ಮಾತು ಏನೆಂದರೆ, ನಾವು ಏನಾದರೂ ಕಾಗದಗಳನ್ನು ಮಂತ್ರಿಗಳಿಗೆ ಕೊಟ್ಟರೆ ಅದನ್ನು ಅವರು ಕಳುಹಿಸುತ್ತಾರೆ. ಆರೀತಿ ಕಳುಹಿಸಿದಂಥ ಮಿನಿಟ್ ಆಗಲಿ, ಆರ್ಡರ್ ಆಗಲಿ, ಅವು ಗುಮಾಸ್ತರ ಟೇಬಲ್ ಮೇಲೆಯೇ ಕೊಳೆಯುತ್ತಾ ಬಿದ್ದಿರುತ್ತವೆ. ಇದರ ವ್ಯವಸ್ಥೆ ಏನು ಎಂಬುದನ್ನು ಅರ್ಥಮಾಡಿ ಕೊಳ್ಳಬೇಕು. ಮುಖ್ಯ ಮಂತ್ರಿಗಳನ್ನು ನಾವು ನಮ್ಮ ಪತ್ರಗಳ ಬಗ್ಗೆ ಕೇಳಿರುತ್ತೇನೆ. ಅವರು ಅವು ಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿರುತ್ತಾರೆ. ನಾವು ಅಲ್ಲಿ ಹೋಗಿ ಕೇಳಿದಾಗ ಮಂತ್ರಿಗಳು ಕಳುಹಿಸಿಕೊಡುತ್ತಾರೆ, ಅವರು ಕಳುಹಿಸಿಕೊಟ್ಟ ಕೂಡಲೇ ನಾವು ಮಾಡುವುದಕ್ಕಾಗುತ್ತದೆಯೇ ? ಅದನ್ನು ಪರಿಶೀಲನೆ ಮಾಡಬೇಕು ಎಂದು ಅಧಿಕಾರಿಗಳು ಬಾಯಿಂದ ಹೇಳಿರುವುದನ್ನು ನಾವು ಕೇಳಿದ್ದೇವೆ. ಈ ರೀತಿ ಆದರೆ ಆಡಳಿತ ಯಂತ್ರ ಕೊಳೆತು ನಾರುತ್ತದೆಂದು ಹೇಳದೇ ಗತ್ಯಂತರವಿಲ್ಲ. ಇನ್ನೊಬ್ಬರು ಅಧಿಕಾರಿಗಳು ಯಾವರೀತಿ ಉತ್ತರವನ್ನು ಕೊಟ್ಟರು ಎಂದರೆ ಮಂತ್ರಿಗಳು ೫ ವರ್ಷ ಇರುತ್ತಾರೆ, ಹೋಗು ತ್ತಾರೆ ಆದರೆ ಜವಾಬ್ದಾರಿ ನಮ್ಮದು ಅಲ್ಲವೆ ? ಎಂದು ಹೇಳಿದರು. ಆದರೆ ಎಲ್ಲರೂ ಇಂಥ ಮಾತು ಗಳನ್ನು ಹೇಳುತ್ತಾರೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಇಂಥ ಅಧಿಕಾರಿಗಳು ನೂರಕ್ಕೆ ಹತ್ತು ಭಾಗ ಇರಬಹುದು. ಒಂದು ಕೊಡ ಹಾಲಿಗೆ ಒಂದು ತೊಟ್ಟು ಹುಳಿ ಹಿಂಡಿದರೂ ಇಡೀ ಹಾಲು ಒಡೆದು ಹೋಗುತ್ತದೆ. ಇಂಥ ಅಧಿಕಾರಿಗಳು ನೂರಕ್ಕೆ ಹತ್ತು ಮಂದಿ ಇದ್ದರೂ ಕೂಡ ಇದರ ಪರಿಣಾಮ ಇಡೀ ಆಫೀಸಿನ ಎಲ್ಲರ ಮೇಲೂ ಹರಡುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಈ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಲಾ ಡಿಪಾರ್ಟ್‌ಮೆಂಟ್‌ಗಳನ್ನು ಯಾರು ಸೃಷ್ಟಿ ಮಾಡಿದರೋ ನನಗಂತೂ ಅರ್ಥವಾಗುವುದಿಲ್ಲ. ಬ್ರಿಟಿಷ್ ಅಡ್ಮಿನಿಸ್ಟ್ರೇಷನ್ ಹಾಕಿಕೊಟ್ಟು ಹೋಗಿರ ತಕ್ಕಂಥವು ಈ ಎರಡು ಡಿಪಾರ್ಟ್‌ಮೆಂಟ್‌ಗಳು. ಕಾಗದಗಳನ್ನು ಚೀಫ್ ಮಿನಿಸ್ಟರ್‌ರವರೂ ಬರೆದು ಕಳು ಹಿಸಿರುತ್ತಾರೆ, ಫೈನಾನ್ಸ್ ಮಿನಿಸ್ಟರ್‌ರವರೂ ಬರೆದು ಕಳುಹಿಸಿರುತ್ತಾರೆ. ಈ ಕಾಗದಗಳು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಹೋಗಬೇಕಾಗಿದ್ದರೆ ಎಷ್ಟು ತಿಂಗಳ ಕಾಲ, ಎಷ್ಟು ವರ್ಷಗಳ ಕಾಲ ಬೇಕಾಗುತ್ತದೆಂಬುದು ನನಗೆ ಅರ್ಥವಾಗುವುದಿಲ್ಲ. ಇದಕ್ಕೆ ಒಂದು ನಿದರ್ಶನವನ್ನು ಕೊಡಬೇಕೆಂದರೆ, ಮೊನ್ನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗಾ ಜಿಲ್ಲೆಗೆ ಬಂದಿದ್ದಾಗ ಒಂದು ಸೀಗೆ ಹಳ್ಳ ಪ್ರಾಜೆಕ್ಟ್, ಇನ್ನೊಂದು ರಸ್ತೆ ಕೆಲಸ, ಈ ಎರಡೂ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಆಜ್ಞೆ ಕೊಟ್ಟರು. ಇದನ್ನು ಗೌರ್ನಮೆಂಟಿಗೆ ಬರೆದಿದ್ದರೂ ಇವತ್ತಿನವರೆಗೂ ಕೂಡ ಇದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಸಿಕ್ಕಿಲ್ಲ. ಈ ಎರಡಕ್ಕೂ ಕ್ಲಿಯರೆನ್ಸ್ ದೊರೆಯುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ ಎಂದರ ಈ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ, ಲಾ ಡಿಪಾರ್ಟ್‌ಮೆಂಟ್‌ನಿಂದ ಏನು ಉಪಕಾರವಾಗುತ್ತಿದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಬೇಕು. ಒಂದು ಟೇಬಲ್‌ಗೆ ಹೋಗಿ ಒಂ ಕಾಗದ ಕೇಳಿದರೆ ಅದು ನಾಳೆ ಬರುತ್ತದೆಂದು ಹೇಳುತ್ತಾರೆ. ನಾಳೆ ಹೋಗಿ ಕೇಳಿದರೆ ಅದು ಬಂದು ಮತ್ತೊಂದು ಟೇಬಲ್‌ಗೆ ಹೋಯಿತು ಎಂದು ಹೇಳುತ್ತಾರೆ. ಹೀಗೆ ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಹೋಗುವುದರೊಳಗೆ ೫ ವರ್ಷ ಕಳೆಯುತ್ತದೆ. ಅಷ್ಟು ಹೊತ್ತಿಗೆ ನಮ್ಮ ಆಯಸ್ಸೂ ಕೂಡ ತೀರುತ್ತದೆ ಎಂಬ ಮಾತನ್ನು ಗತ್ಯಂತರವಿಲ್ಲದೆ ಹೇಳಬೇಕಾಗಿದೆ. ಆದುದರಿಂದ ದಯುವಿಟ್ಟು ಇಂಥಾ ದ್ದನ್ನು ತಪ್ಪಿಸುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ವಿದ್ಯಾಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗ ಶಾಲಾಕಟ್ಟಡಕ್ಕೆ ಹಣವನ್ನು ಕೊಡುವುದದನ್ನು ನಿಲ್ಲಿಸಿದ್ದೀರಿ. ಆದರೆ ಎಲ್ಲದಕ್ಕೂ ಒಂದೇ ಮಂತ್ರ ಮಾಡಬಾರದು. ನಮ್ಮ ಮಲೆ ನಾಡಿನಲ್ಲಿ ಶಾಲಾಕಟ್ಟಡ ಪೂರ್ಣವಾಗಿ ಈ ಮಳೆಯೊಳಗೇ ಹಾಳಾಗಿ ಹೋಗತಕ್ಕ ಪರಿಸ್ಥಿತಿ ಇದೆ. ವೇಕು ಒಮ್ಮೆ ಒಂದು ಸ್ಕೂಲ್‌ಗ ಭೇಟಿ ಕೊಟ್ಟಿದ್ದೀರಿ. ಆ ಬಿಲ್ಡಿಂಗ್ ಬಿದ್ದು ಹೋಗುವ ಹಾಗಿದ್ದುದರಿಂದ ಕೂಡಲೇ ರಿಪೇರಿ ಮಾಡಬೇಕೆಂದು ಒಂದು ಆಜ್ಞೆ ಮಾಡಿದಿರಿ. ಆ ಆಜ್ಞೆ ಎಲ್ಲಿ ಹೋಯಿತೋ ಗೊತ್ತಿಲ್ಲ. ಇವತ್ತಿನವರೆಗೂ ಆ ಕೆಲಸ ಕಾರ್ಯಗತವಾಗಿಲ್ಲ. (ಅದು ಬಹುಶಃ ಎನ್. ಟಿ. ಸಿ. ಎಂ. ಸಿ. ಹೆಣ್ಣು ಮಕ್ಕಳ ಶಾಲೆ ಇರಬಹುದು.) ಈ ಮಳೆಯಲ್ಲಿ ಅದು ಏನಾದರೂ ಬಿದ್ದುಹೋಯಿತೋ ಏನೋ ನನಗೆ ತಿಳಿಯದು. ಆದ್ದರಿಂದ ಎಲ್ಲಿ ತುರ್ತು ಕೆಲಸವಾಗಬೇಕೋ ಅದನ್ನು ಮಾಡದೇ ಹೋದರೆ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ಅದೇರೀತಿಯಲ್ಲಿ ನಮ್ಮ ಕ್ಷೇತ್ರದಲ್ಲೂ ಬಹಳ ಅನ್ಯಾಯುವಾಗುತ್ತದೆಂದು ಹೇಳ ಬಯಸುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ಮಂತ್ರಿಗಳು ಈ ಸದನದಲ್ಲಿಲ್ಲ. ಅವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಒಂದು ಕಿಲೋ ಮೀಟರ್ ರಸ್ತೆಯನ್ನು ಕೊಡುವಂಥ ಯೋಜನೆಯನ್ನು ಹಾಕಿಕೊಂಡರು. ಅದರ ಪ್ರಕಾರ ಎಷ್ಟೋ ಕಡೆಗಳಲ್ಲಿ ಕೆಲಸಗಳಾಗದೆ, ಇನ್ನೂ ಎಷ್ಟೋ ಕಡೆಗಳಲ್ಲಿ ಏನೂ ಆಗದೇ ಹಾಗೆಯೇ ಉಳಿದಿವೆ. ಆಗಿರುವ ಕೆಲಸದಲ್ಲಿ ಕೆಲವಕ್ಕೆ ಜಲ್ಲಿಯನ್ನು ಹಾಕದೆ ಬರೀ ಮಣ್ಣನ್ನು ಮಾತ್ರ ಹಾಕಿದ್ದಾರೆ. ನಮ್ಮ ಮಲೆನಾಡಿನಲ್ಲಿ ರಸ್ತೆಯ ಮಣ್ಣೆಲ್ಲಾ ತೊಳೆದುಹೋಗಿ ರಸ್ತೆಗಳನ್ನು ಗುರ್ತಿಸುವುದಕ್ಕಾಗುವುದಿಲ್ಲ. ಇಂಥ ಅವ್ಯವಸ್ಥೆಯಾಗಿವೆಯೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಪದೇ ಪದೇ ಇದನ್ನು ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರ ದುಡ್ಡು ಖರ್ಚುಮಾಡಿರುವುದು ಗೊತ್ತಾಗುತ್ತದೆಯೇ ವಿನಃ ಅದರ ಉಪಯೋಗ ಜನತೆಗೆ ಆಗುತ್ತಿಲ್ಲ ಎಂಬುದನ್ನು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಹೇಳಬೇಕೆಂದರೆ ನಮ್ಮಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸುಮಾರು ೧೫—೨೦ ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆದಿರುತ್ತದೆ. ಅದು ಸೂಪರ್‌ಸೀಡ್ ಕೂಡ ಆಯಿತು. ಸೂಪರ್‌ಸೀಡ್ ಆದಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೊಸನಗರಕ್ಕೆ ಬಂದಾಗ ರೆಸ್ಪಾನ್ಸಿಬಿಲಿಟೀಸ್ ಫಿಕ್ಸ್ ಮಾಡಿ ಹಿಂದಿನ ಡೈರೆಕ್ಟರ್ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅರ್ಜಿ ಕೊಟ್ಟರು. ಅರ್ಜಿ ಕೊಟ್ಟಮೇಲೆ ಎನ್‌ಕ್ವೈರಿಗೆ ಹಾಕಿದರು. ಡೆಪ್ಯುಟಿ ರಿಜಿಸ್ಟ್ರಾರ್‌ರವರು ಮಾಮೂಲಾಗಿ ಇವತ್ತಿನವರೆಗೂ ಕೂಡ ಅದನ್ನು ಮಾಡಿಲ್ಲ. ಅಲ್ಲಿ ೨೦—೩೦ ಲಕ್ಷ ರೂಪಾಯಿ ಲುಕ್ಸಾನಾಗುತ್ತಿದೆ. ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಯೋಚನೆ ಮಾಡಬೇಕು. ಆದುದರಿಂದ ಇನ್ನು ಮುಂದಾದರೂ ಇಂಥಾದ್ದು ಆಗುವುದಕ್ಕೆ ಅವಕಾಶವನ್ನು ಕೊಡಬಾರದೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸಭಾಪತಿಗಳೆ, ಈ ಪೂರಕ ಬೇಡಿಕೆಯ ಮೇಲೆ ಸಾಕಷ್ಟು ಜನ ಸದಸ್ಯರು ಕೂಲಂಕಷವಾಗಿ ಮಾತನಾಡಿದ್ದಾರೆ. ಯಾವರೀತಿ ಜನರಲ್ ಬಡ್ಜೆಟ್ ಡಿಸ್ಕಷನ್ ನಡೆಯುತ್ತದೆಯೋ ಸ್ವಲ್ಪ ಹೆಚ್ಚೂ ಕಡಿಮೆ ಅದೇರೀತಿಯಲ್ಲಿ ಈ ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಕೂಡ ಸುದೀರ್ಘವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಉತ್ತರದಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವ ಜೊತೆಗೆ ಸಾಧ್ಯವಾದಮಟ್ಟಿಗೂ ಬೇರೆ ವಿಷಯಗಳ ಬಗ್ಗೆ ಕೂಡ ಸರ್ಕಾರದ ಧೋರಣೆಯನ್ನು ಸೂಚಿಸುವ ಪ್ರಯತ್ನವನ್ನು ಮಾಡುತ್ತೇನೆ. ಈ ಸಪ್ಲಿಮೆಂಟರಿ ಡಿಮ್ಯಾಂಡ್ ತಮಗೆ ಗೊತ್ತಿರುವಂತೆ ಇದು ಒಂದು ಹೊಸ ಆಯವ್ಯಯ ಪಟ್ಟಿ ಏನೂ ಅಲ್ಲ. ಹೊಸದಾಗಿ ಸಾಮಾಜಿಕ ಮತ್ತು ಆರ್ಥಿಕ ಧೋರಣೆಯನ್ನು ಗಮನದಲ್ಲಿಟ್ಟುಕೊಂಡು ಹೊಸದಾಗಿ ನಿರೂಪಣೆ ಮಾಡಿದ ತಕ್ಕಂಥಾದ್ದು ಏನೂ ಅಲ್ಲ. ಇದನ್ನು ತಂದಿರುವ ಇದರ ಉದ್ದೇಶವೂ ಕೂಡ ಅದು ಅಲ್ಲ. ಇದರ ಉದ್ದೇಶ ಬಹಳ ಸೀಮಿತವಾಗಿದೆ. ಅದು ಯಾವ ಒಂದು ಖರ್ಚಿನ ಬಾಬುಗಳ ಕೆಲವು ಅಂಶಗಳು ಜನರಲ್ ಬಡ್ಜೆಟ್‌ನಲ್ಲಿ ಸೇರಿಲ್ಲ, ಅಂಥಾದ್ದನ್ನು ಅನಿವಾರ್ಯವಾಗಿ ನಾವು ಏನು ಖರ್ಚು ಮಾಡಬೇಕಾಗಿ ಬರುತ್ತದೆ. ಅಂಥ ಅಂಶಗಳನ್ನು ಈ ಪೂರಕಬೇಡಿಕೆಯಲ್ಲಿ ಸೇರಿಸಿ, ಈ ಸಭೆಯ ಒಪ್ಪಿಗೆ ಪಡೆಯುವ ಉದ್ದೇಶ ಮಾತ್ರ ಇದರಲ್ಲಿ ಅಡಕವಾಗಿದೆ. ಆದ್ದರಿಂದ ಇದು ವ್ಯಾಪಕವಾಗಿ ಇಲ್ಲ, ಸಾಕಷ್ಟು ಇದರಲ್ಲಿ ಅಂಶಗಳು ಸೇರಿಲ್ಲ ಎನ್ನುವ ವಾದ ಸಪ್ಲಿಮೆಂಟರಿ ಡಿಮ್ಯಾಂಡಿಗೆ ಅಷ್ಟೊಂದು ಅನ್ವಯಿಸುವುದಿಲ್ಲ ಎಂದು ಬಹಳ ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ನಾನು ಆಗಲೇ ಇದನ್ನು ಮಂಡಿಸುವಾಗ ಹೇಳಿದ ಪ್ರಕಾರ ಇದು ೩೫ ಕೋಟಿ ರೂಪಾಯಿಗಳ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ ಎಂದು ಎದ್ದು ಕಾಣಿಸುತ್ತಾ ಇದ್ದರೂ ಅಡ್ಜಸ್ಟ್‌ಮೆಂಟ್ ಐಟಂಸ್ ಬಹಳ ಇವೆ. ೩೫ ಕೋಟಿ ರೂಪಾಯಿನಲ್ಲಿ ೨.೩೮ ಲಕ್ಷ ರೂಪಾಯಿ ಮಾತ್ರ ಹೊಸದಾಗಿ ಖರ್ಚಾಗುವ ಹಣ ಇದೆ. ಅಡ್ಜಸ್ಟ್‌ಮೆಂಟ್ ಐಟಂ ಕೂಡ ೨೫ ಕೋಟಿ ಇದೆ. ಪವರ್ ಕಾರ್ಪೊರೇಷನ್‌ಗೆ ಸಂಬಂಧಪಟ್ಟಿರತಕ್ಕಂಥದ್ದು. ಈ ಕಾರ್ಪೊರೇಷನ್ ಸ್ಥಾಪನೆ ಆದಮೇಲೆ, ಶರಾವತಿ ವ್ಯಾಲಿ, ಭದ್ರಾ ಕೆಲಸಗಳ ಮೇಲೆ ೧.೫ ಲಕ್ಷ ರೂಪಾಯಿ ಏನೋ ಖರ್ಚಾಗಿತ್ತು. ಆ ಆಸ್ತಿ ಈ ಪವರ್ ಕಾರ್ಪೊರೇಷನ್ ವಹಿಸಿಕೊಳ್ಳುವ ಕಾಲಕ್ಕೆ ಇದ್ದಂತಹ ಇದರ ವ್ಯಾಲುವೇಶನ್ ಪರಿಶೀಲನೆ ಮಾಡಿ, ಆ ವ್ಯಾಲ್ಯುವೇಷನ್ ೧.೭೫ ಲಕ್ಷ ರೂಪಾಯಿಗಳು ಏನಿತ್ತು ಅದರಲ್ಲಿ ೭೦ ಲಕ್ಷ ರೂಪಾಯಿಗಳು ಸಾಲದ ರೂಪವಾಗಿ, ೫೦ ಲಕ್ಷ ರೂಪಾಯಿಗಳು ಷೇರು ಕ್ಯಾಪಿಟಲ್ ರೂಪವಾಗಿ ವಹಿಸಿಕೊಳ್ಳಬೇಕು ಎಂದು ತೀರ್ಮಾನಕ್ಕೆ ಬಂದಿದ್ದೇವೆ. ೫೫ ಲಕ್ಷ ರೂಪಾಯಿ ಷೇರು ಕ್ಯಾಪಿಟಲ್ ಇದೆ. ೨೨ ಕೋಟಿ ರೂಪಾಯಿ ಹಾಗೆ ಉಳಿದಿದೆ. ಅದನ್ನು ಇದರಲ್ಲಿ ತೋರಿಸಿದ್ದೇವೆ. ಇದರಿಂದ ಹೊಸದಾಗಿ ಪವರ್ ಕಾರ್ಪೊರೇಷನ್ ಹಣವನ್ನು ಕೊಡುತ್ತಾ ಇಲ್ಲ. ೧೯೭೨—೭೩ ರಲ್ಲಿ ರೀ ವ್ಯಾಲ್ಯುವೇಷನ್ ನಡೆಯಿತು. ಅದರ ಪರಿಣಾಮವಾಗಿ ಅಡ್ಜಸ್ಟ್‌ಮೆಂಟ್ ಮಾಡಬೇಕಾಯಿತು. ಅದೇ ರೀತಿ ಬೇರೆ ಬೇರೆ ಬಾಬುಗಳ ಮೇಲೆ ಅಂದರೆ ರೋಡ್ಸ್ ಮತ್ತು ಬ್ರಿಡ್ಜಸ್. ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ರಸ್ತೆಗಳಿಗೆ ಸಾಕಷ್ಟು ಹಣ ಇಲ್ಲ ಎಂದು. ರಸ್ತೆಗಳಿಗೆ ಹಣ ಒದಗಿಸುವ ಉದ್ದೇಶದಿಂದಲೇ, ಈ ವರ್ಷ ಬಡ್ಜೆಟ್ಟಿನಲ್ಲಿ, ಮೋಟಾರ್ ವೆಹಿಕಲ್ಸ್‌ಗಳ ಮೇಲೆ ೧೦ ಪರ್ಸೆಂಟ್ ಸರ್

ಚಾರ್ಜು ಹಾಕಿ, ಅದರಿಂದ ಹೊಸದಾಗಿ ಬರುವ ಎರಡು ಕೋಟಿ ರೂಪಾಯಿಗಳನ್ನು, ಅದಕ್ಕಾಗಿಯೇ ಪ್ರತ್ಯೇಕವಾಗಿ ರೋಡ್ಸ್ ಬ್ರಿಡ್ಜಸ್ ಒಂದು ಫಂಡ್ ಮಾಡಿ ಅದಕ್ಕೆ ಕೊಡುವ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದಕ್ಕೆ ಅನುಗುಣವಾಗಿ ಈ ಸಪ್ಲಿಮೆಂಟರಿ ಡಿಮ್ಯಾಂಡ್ ಸೇರಿಸುತ್ತೇವೆ. ಇದರ ವಿಚಾರವಾಗಿ ಇದು ಸಾಲದು, ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುವುದಕ್ಕೋಸ್ಕರ ಇದಕ್ಕೂ ಹೆಚ್ಚಿನ ಹಣ ಬೇಕಾಗುತ್ತದೆಂದೂ, ಕಳೆದ ೨—೩ ವರ್ಷಗಳಿಂದ ಸಾಕಷ್ಟು ಹಣವನ್ನು ಖರ್ಚು ಮಾಡಿಲ್ಲ ಎನ್ನುವ ಕೂಗು ಬಹಳ ಇದೆ. ಹಳ್ಳಿಗಳಿಂದ ಬಂದಿರತಕ್ಕ ನಾವುಗಳು ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡಬೇಕು. ಅದಕ್ಕಾಗಿಯೇ ಒಂದು ಪರಸೆಂಟ್ ಮಾರ್ಕೆಟ್ ಸೆಸ್‌ನಿಂದ ೩—೪ ಕೋಟಿ ರೂಪಾಯಿ ಆದಾಯ ಒಂದು ವರ್ಷಕ್ಕೆ ಬರಬಹುದು ಎಂದು ಲೆಕ್ಕ ಮಾಡಿದ್ದೇವೆ. ಕನಿಷ್ಟ ಎರಡೂವರೆ ಕೋಟಿ ರೂಪಾಯಿ ಬರುತ್ತದೆ. ಎಲ್ಲವನ್ನೂ ಸೇರಿಸಿ ೪.೫೦ ಲಕ್ಷ ರೂಪಾಯಿಗಳನ್ನು ಡಿಮ್ಯಾಂಡ್ ನಂಬರು ೫೪ಕ್ಕೆ ಸೇರಿಸಿ, ರೋಡ್ ಫಂಡಿನ ಮುಖೇನ ಖರ್ಚು ಮಾಡಬೇಕು ಎಂದು ಇದ್ದೇವೆ. ಅದನ್ನು ಮಾಡಿದ ಮೇಲೆ ಮಾನ್ಯ ಚನ್ನಬಸಪ್ಪನವರಿಗೆ ಸಾಕಷ್ಟು ರಸ್ತೆಗಳನ್ನು ಮಾಡಲಿಕ್ಕೆ ಅವಕಾಶವಾಗುತ್ತದೆ. ಅಲ್ಲದೇ ಅವರ ಮನಸ್ಸಿಗೂ ತೃಪ್ತಿ ಆಗುತ್ತದೆ. ಎಲ್ಲರ ಮನಸ್ಸಿಗೂ ತೃಪ್ತಿ ಆಗುತ್ತದೆ. ಇನ್ನೂ ಮುಂದೆ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುವುದಕ್ಕೆ ಹಣ ಇಲ್ಲ ಎನ್ನುವ ಮಾತು ಬರಬಾರದು, ಅದು ಬರಲಿಕ್ಕೂ ಇಲ್ಲ ಎಂದು ನಾನು ನಂಬಿದ್ದೇನೆ. ಆದರ ಪ್ರಕಾರ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಒಂದು ಕಾರ್ಯಕ್ರಮ ಹಾಕಿದ್ದಾರೆ. ಆ ವಿಚಾರವನ್ನು ಮಾನ್ಯ ಸದಸ್ಯರಿಗೂ ತಿಳಿಸಬೇಕು. ಒಂದೊಂದು ತಾಲ್ಲೂಕಿನಲ್ಲಿ ಇಷ್ಟಿಷ್ಟು ಮೈಲಿ ರೂರಲ್ ಕಮ್ಯುನಿಕೇಷನ್ ಸುಧಾರಿಸಬೇಕು ಎಂದು, ಎಲ್ಲೆಲ್ಲಿ ಮಾಡಬೇಕೆಂಬುದನ್ನು ಅವರು ಕನ್‌ಸಲ್ಟ್ ಮಾಡಿ ಒಂದು ಕಾರ್ಯಕ್ರಮವನ್ನು ಹಾಕುತ್ತಾರೆ. ಹಣಕಾಸಿನ ಧೈರ್ಯದ ಮೇಲೆ ಅವರು ಈ ಕಾರ್ಯಕ್ರಮವನ್ನು ಹಾಕುತ್ತಾರೆ.

ಈಗ ನಮ್ಮ ವೀರಪ್ಪಗೌಡರು ತುಟ್ಟಿಭತ್ಯದ ಬಗ್ಗೆ ಪ್ರಸ್ತಾಪ ಮಾಡಿದರು, ಸರ್ಕಾರಿ ನೌಕರರಿಗೆ ಬಹಳ ಧಾರಾಳವಾಗಿ ತುಟ್ಟಿಭತ್ಯ ಕೊಡುವ ಧೋರಣೆಯನ್ನು ಅವರು ಟೀಕಿಸಿದರು. ಇದರ ಬಗ್ಗೆ ಪರ್ಯಾಲೋಚನೆ ನಡೆಯಿಸಿ ಎಂದು ಹೇಳಿದ್ದಾರೆ. ಆದರೆ, ನಾವು ನಮ್ಮ ಶಕ್ತಿ ಮೀರಿ ತುಟ್ಟಿಭತ್ಯ ಹಾಗೂ ಸಂಬಳ ಕೊಡುವ ಪ್ರಯತ್ನ ಮಾಡಿದ್ದೇವೆ. ನಾನು ಪದೇ ಪದೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಆರ್ಥಿಕ ವ್ಯವಸ್ಥೆ ಹಾಗೂ ಯೋಜನಾ ಕಾರ್ಯಕ್ರಮ ಏನು ಇದೆ, ಅದಕ್ಕೆ ಧಕ್ಕೆ ಬಾರದಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಧಕ್ಕೆ ಬರುವ ರೀತಿಯಲ್ಲಿ ತುಟ್ಟಿಭತ್ಯ ಕೊಡುವ ಕೆಲಸಕ್ಕೆ ಹೋಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇತ್ತೀಚೆಗೆ ನಾನು ದೆಹಲಿಗೆ ಹೋದಾಗ ಕೇಂದ್ರ ನಾಯಕರುಗಳಿಗೆ ಎಲ್ಲರಿಗೂ ಒತ್ತಾಯ ಪೂರ್ವಕವಾಗಿ ಸ್ಪಷ್ಟವಾಗಿ ಹೇಳಿದ್ದೇನೆ. ನೀವೇನಾದರೂ ಏಕಪಕ್ಷೀಯ ನಿರ್ಣಯಕ್ಕೆ ಬರುವುದಾದರೆ, ಕೇಂದ್ರಸರ್ಕಾರ ನೌಕರರ ಬಗ್ಗೆ ತೀರ್ಮಾನ ಮಾಡುವುದಾದರೆ, ಅದರಿಂದ ರಾಜ್ಯಮಟ್ಟದಲ್ಲಿರತಕ್ಕ ಆರ್ಥಿಕ ವ್ಯವಸ್ಥೆ ಏನು ಇದೆ ಅದಕ್ಕೆ ಬಹಳ ದೊಡ್ಡ ಪೆಟ್ಟು ಉಂಟಾಗುತ್ತದೆ. ಅದ್ದರಿಂದ ಇದರ ಕಡೆ ನೀವು ಗಮನ ಕೊಡಬೇಕಾಗುತ್ತದೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಆದುದರಿಂದ ಇದರ ಬಗ್ಗೆ ನೀವು ಏನಾದರೂ ತೀರ್ಮಾನ ಮಾಡುವುದಾದರೆ, ರಾಜ್ಯ ಸರ್ಕಾರಗಳ ಎಲ್ಲಾ ಮುಖ್ಯಮಂತ್ರಿಗಳನ್ನೂ ಹಾಗೂ ಹಣಕಾಸಿನ ಮಂತ್ರಿಗಳನ್ನೂ ಕರೆಸಿ, ಇದರ ಬಗ್ಗೆ ವ್ಯಾಪಕವಾದ ಚರ್ಚೆ ನಡೆಸಿ ಸೂಕ್ತವಾದ ರಾಷ್ಟ್ರೀಯ ನಿರ್ಣಯಕ್ಕೆ ಬಂದರೆ ಒಳ್ಳೆಯದು. ಇವೊತ್ತಿನ ತುರ್ತುಪರಿಸ್ಥಿತಿಯ ಒಂದು ಶಿಸ್ತಿನ ವಾತಾವರಣದಲ್ಲಿ ಇದನ್ನು ಮಾಡಲಿಕ್ಕೆ ಅನುಕೂಲ ಇದೆ. ಈಗ ಮಾಡದೇ ಹೋದರೆ ಇನ್ನೂ ಯಾವಾಗ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಆದುದರಿಂದ ಮಾನ್ಯ ವೀರಪ್ಪಗೌಡರ ಟೀಕೆ ಏನು ಇದೆ, ಅವರು ಜವಾಬ್ದಾರಿಯುತವಾಗಿ ಹೇಳದೇ ಹೋದರೂ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಡಿ.ಎ. ಕೊಡುವ ವಿಚಾರದಲ್ಲಿ ಖಂಡಿತವಾಗಿಯೂ ಕರ್ನಾಟಕ ಸರ್ಕಾರದವರು ಬೇಜವಾಬ್ದಾರಿಯಾಗಿ ಮಾಡಿಲ್ಲ. ಕೇಂದ್ರ ಸರ್ಕಾರದವರು ಆ ರೀತಿ ಮಾಡಬಾರದು. ರಾಜ್ಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿ ಇಂಥ ಒಂದು ತೀರ್ಮಾನಕ್ಕೆ ಬರುವುದು ಬಹಳ ಒಳ್ಳೆಯದೆಂದು ಬಹಳ ಸ್ಪಷ್ಟವಾಗಿ, ಸಾರಿ ಸಾರಿ ಹೇಳಿದ್ದೇನೆ. ಈ ತುರ್ತುಪರಿಸ್ಥಿತಿಯಲ್ಲಿ ಧೈರ್ಯವಾಗಿ ಆ ಮಾತನ್ನು ಹೇಳಿದ್ದೇನೆ. ರಾಜ್ಯ ಮಟ್ಟದಲ್ಲಿ ಇರತಕ್ಕ ಕರ್ತವ್ಯವನು ಹೇಳಿದ್ದೇನೆ. ಭಯಪಡದೇ ನಿವಾರಿಸಿದ್ದೇವೆಂದರೆ ಅತಿಶಯೋಕ್ತಿ ಆಗಲಾರದು.

ಆಮೇಲೆ, ಮೈನರ್ ಇರಿಗೇಷನ್ ಬಗ್ಗೆ ಸಾಕಷ್ಟು ವಿಷಯಗಳು ಚರ್ಚೆಯಲ್ಲಿ ಬಂದವು. ಮೈನರ್ ಇರಿಗೇಷನ್ ಬಗ್ಗೆ ಈಗಿನ ರಾಜ್ಯ ಸರ್ಕಾರ ಸಾಕಷ್ಟು ಆದ್ಯತೆ ಕೊಟ್ಟಿಲ್ಲ ಎನ್ನುವ ಮಾತನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ಯಾವ ಕಾಲದಲ್ಲಿಯೂ ಇಷ್ಟೊಂದು ಆದ್ಯತೆಯನ್ನು ಸಣ್ಣನೀರಾವರಿ ಯೋಜನೆಗೆ ಕೊಟ್ಟಿದ್ದೇವೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ೭—೮ ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್‌ಗೆ ಕೊಟ್ಟಿದ್ದೇವೆ.

11-30 A M.

ಮತ್ತೆ ಕಳೆದ ಮೂರು ವರ್ಷದಲ್ಲಿ ೨೦ ಕೋಟಿ ರೂಪಾಯಿ ಮೈನರ್ ಇರಿಗೇಷನ್ ಮೇಲೆ ನಾವು ಖರ್ಚು ಮಾಡಿದ್ದೇವೆ. ಅದೂ ಅಲ್ಲದೆ ನೀರಾವರೀ ಭಾವಿಗಳಿಗೆ ಗೋಸ್ಕರ ಸಾಲದ ರೂಪವಾಗಿ ೩ ವರ್ಷದಲ್ಲಿ ೨೭ ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಅಂದರೆ ಈ ೨೭ ಕೋಟಿ ರೂಪಾಯಿಗಳು ಈ ಭಾವಿಗಳಿಗೋಸ್ಕರ ಮತ್ತು ಸಣ್ಣ ನೀರಾವರಿಗೋಸ್ಕರ ೨೦ ಕೋಟಿ ರೂಪಾಯಿ ಕಳೆದ ಮೂರು ವರ್ಷದ ಕಾಲದಲ್ಲಿ ಕೊಟ್ಟಿದ್ದೇವೆ. ಇಷ್ಟೊಂದು ಯಾವ ಕಾಲಕ್ಕೂ ಕೊಟ್ಟಿಲ್ಲ. ಈ ವರ್ಷದ ಬಜೆಟ್‌ನಲ್ಲಿ ೬-೮ ಕೋಟಿ ರೂಪಾಯಿ ಇದೆ. ಆದರೆ ಇಷ್ಟು ಕೊಟ್ಟರೂ ಕೂಡ ಸ್ವಲ್ಪ ಮಟ್ಟಿಗೆ ಅಸಮಾಧಾನ ಇರುವುದಕ್ಕೆ ಕಾರಣ ಇದೆ. ಕಾರಣ ಏನೆಂದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು ೧೨೦೦೦ ಸಣ್ಣ ನೀರಾವರಿ ಕಾಮಗಾರಿಗಳನ್ನು ನಾವು ಕೈಗೊಂಡಿದ್ದೇವೆ. ಅವು ಈಗ ನಡೆಯುತ್ತಾ ಇವೆ. ೬-೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವರ್ಷಕ್ಕೆ ೪೦೦೦ ಕಾಮಗಾರಿಗಳನ್ನು ಮಾತ್ರ ಪೂರೈಸುವುದಕ್ಕೆ ಸಾಧ್ಯ. ೧೨೦೦೦ ಕಾಮಗಾರಿಗಳಲ್ಲಿ ಮೂರರಲ್ಲಿ ಒಂದು ಭಾಗವನ್ನು ವರ್ಷಕ್ಕೆ ಪೂರೈಸಿದರೆ ೩ರಲ್ಲಿ ೨ ಭಾಗ ಹಾಗೆಯೇ ಉಳಿಯುತ್ತವೆ. ಮುಂದಿನ ವರ್ಷ ಸಾಕಾದಷ್ಟು ಶಕ್ತಿ ಮೀರಿ ಎಲ್ಲಾ ಕಾಮಗಾರಿಗಳನ್ನು ಪೂರೈಸುವುದು ಇದೆ. ಎಲ್ಲಾ ಕಡೆ ಅದನ್ನು ನಾವು ಕೈಗೊಂಡಿರುವುದರಿಂದ ಈ ಭಾವನೆ ಇದೆ ನಮ್ಮ ಕೆಲಸ ಮುಗಿಯುತ್ತಿಲ್ಲವೆಂದು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಬರಹ ಮೂಲಕ ಸಲಹೆ ಕೊಟ್ಟಿದ್ದೇನೆ. ಈ ವರ್ಷ ೬-೮ ಕೋಟಿ ರೂಪಾಯಿಗಳನ್ನು ಯಾವ ಯಾವ ಐಟಮ್ಸ್‌ಗಳ ಮೇಲೆ, ಕಾಮಗಾರಿಗಳ ಮೇಲೆ, ಖರ್ಚು ಮಾಡಿದರೆ ತಕ್ಷಣ ಪ್ರಯೋಜನವಾಗುತ್ತದೆ ಅನ್ನುವಂತಾದ್ದನ್ನು ಪ್ರಯಾರಿಟಿ ಮೇಲೆ ಪಟ್ಟಿ ಮಾಡಿ ಈ ವರ್ಷ ಇಂತಿಂಥ ಕೆಲಸಗಳನ್ನು ಪೂರೈಸಿದ್ದೇವೆ, ಇಂತಿಂಥ ಕೆಲಸಗಳನ್ನು ಮುಂದಿನ ವರ್ಷ ಮಾಡುತ್ತೇವೆ ಎಂಬ ಸಮಗ್ರವಾದ ವಿಚಾರವನ್ನು ಪಟ್ಟಿ ತಯಾರಿಸಿ ಸದಸ್ಯರಿಗೆ ತಿಳಿಸಿದರೆ ಹಣಕಾಸಿನ ಅಭಾವದಿಂದ ಈ ರೀತಿ ಆಗುತ್ತದೆ ಎನ್ನುವುದು ಸರಿಯಾದ ಅಭಿಪ್ರಾಯ ಅಲ್ಲವೆಂದು ಸ್ಪಷ್ಟವಾಗಿ ಅವರು ಅರ್ಥ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ಈ ರೀತಿ ಒಂದು ಸಮಗ್ರವಾದಂತ, ಸ್ಪಷ್ಟವಾದಂತ ಕಾರ್ಯಕ್ರಮವನ್ನು ಮಾಡಿ ಎಲ್ಲರಿಗೂ ತಿಳಿಸುತ್ತಾರೆಂದು ನಾನು ನಂಬಿದ್ದೇನೆ ಅನಂತರ ಮಾನ್ಯ ಅಮ್ಮಣ್ಣನವರು ಲಿಫ್ಟ್ ಇರಿಗೇಷನ್ ಬಗ್ಗೆ ಪ್ರಸ್ತಾಪ ಮಾಡಿದರು. ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ ಎಲ್ಲೆಲ್ಲಿ ಈ ವಯಬಲ್ ಸ್ಕೀಮ್ಸ್ ಇದೆ ಅಲ್ಲಿ ಅದನ್ನು ಪೂರೈಸಬೇಕು. ಅದು ಕೋ ಆಪರೇಟಿವ್ ಸೊಸೈಟಿ ಮಾಡಿ ಪೂರೈಸಬೇಕೆನ್ನುವ ಧೋರಣೆ ಕೈಬಿಡಬೇಕು, ಇದರ ಬಗ್ಗೆ ಕ್ಯಾಬಿನೆಟ ನಲ್ಲಿ ಚರ್ಚೆ ನಡೆಯಿತು. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅತ್ಯವಶ್ಯವಾಗಿ ಇರತಕ್ಕ ಕೆಲಸ ಮೈನರ್ ಇರಿಗೇಷನ್ ಕಾರ್ಯಕ್ರಮದಲ್ಲಿ ಸೇರಿಸಿ ಮಾಡಬೇಕು ಕೋ ಆಪರೇಟಿವ್ ಸೊಸೈಟಿಯನ್ನು ಮಾಡುವುದಕ್ಕೋಸ್ಕರ ನಾವು ಕಾಯಬೇಕಾದುದು ಇಲ್ಲ ಎಂದು ಹೇಳಿದ್ದಾರೆ. ಈಗ ವಾಟರ್‌ರೇಟ್ ಕಲೆಕ್ಷನ್ ಇದರ ಬಗ್ಗೆಯೂ ಸಹ ಸ್ವಲ್ಪಮಟ್ಟಿಗೆ ಚರ್ಚೆ ನಡೆಯಿತು. ಅಧಿಕಾರಸ್ಥರು ಸಾಧ್ಯವಾದಷ್ಟು ಆಸಕ್ತಿಯಿಂದ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳಿದರು ವಾಟರ್‌ರೇಟ್ ಕಲೆಕ್ಷನ್ ಬಗ್ಗೆ ಸ್ವಲ್ಪ ಮಟ್ಟಿಗೆ ತೊಂದರೆ ಇರುವುದು ನಿಜ. ಆದರೆ ನಮ್ಮ ಅಧಿಕಾರಸ್ಥರು ಈ ವರ್ಷ ೩ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಹೋದ ವರ್ಷ ಕೋಟಿ ೫೦ ಲಕ್ಷ ಆಯಿತು ಈ ವರ್ಷ ೩ ಕೋಟಿ ರೂ. ವಸೂಲು ಮಾಡಿದ್ದಾರೆ ಇದಕ್ಕೂ ಹೆಚ್ಚು ಪ್ರಮಾಣದಲ್ಲಿ ವಾಟರ್‌ರೇಟ್ ಕಲೆಕ್ಟ್ ಮಾಡುವ ಆವಶ್ಯಕತೆ ಇದೆ. ಇದೇ ರೀತಿ ಲ್ಯಾಂಡ್ ರೆವೆನ್ಯೂ ಈ ವರ್ಷ ೧೯೭೪-೭೫ರಲ್ಲಿ ೭ ಕೋಟಿ ರೂಪಾಯಿಯನ್ನು ವಸೂಲು ಮಾಡಿದ್ದಾರೆ. ೧೯೭೩-೭೪ ರಲ್ಲಿ ೫ ಕೋಟಿ ೨೫ ಲಕ್ಷ ಆಗಿದೆ. ೧೯೭೪-೭೫ ರಲ್ಲಿ ವಾಟರ್‌ರೇಟ್ ೩ ಕೋಟಿ ರೂಪಾಯಿ ಆಯಿತು. ೧೯೭೩ ೭೪ ರಲ್ಲಿ ಒಂದೂವರೆ ಕೋಟಿ ಆಯಿತು. ಆದೇ ರೀತಿ ಲ್ಯಾಂಡ್ ರೆವನ್ಯೂ ೧೯೭೩ ೭೪ ರಲ್ಲಿ ೫ ಕೋಟಿ ೬೦ ಲಕ್ಷ ವಸೂಲು ಆದರೂ ಕೂಡ ೧೯೭೪-೭೫ ರಲ್ಲಿ ೭ ಕೋಟಿ ವಸೂಲಿ ಆಯಿತು. ಇದರಿಂದ ಆರಿಯರ್ಸ್ ಮತ್ತು ತೆರಿಗೆಗಳನ್ನು ದಕ್ಷತೆಯಿಂದ ವಸೂಲಿ ಮಾಡುವ ಕೆಲಸ ನಡೆದಿದೆ. ಇದು ಇನ್ನೂ ಹೆಚ್ಚಿನ ದಕ್ಷತೆಯಿಂದ ಮಾಡಲಿಕ್ಕೆ ಸಾಧ್ಯವಾದರೆ ಅದನ್ನು ಮಾಡುವ ಮನಸ್ಸು ಸರ್ಕಾರಕ್ಕೆ ಇದೆ ಈ ಕೆಲಸದಲ್ಲಿ ಮಾನ್ಯ ಸದಸ್ಯರೆಲ್ಲರೂ ಸಂಪೂರ್ಣವಾದ ಸಹಕಾರಗಳನ್ನು ಕೊಡುತ್ತಾರೆಂದು ನನಗೆ ನಂಬಿಕೆ ಇದೆ

ಈಗ ಕೋಆಪರೇಟಿವ್ ಶುಗರ್ ಫ್ಯಾಕ್ಟರಿ ಬಗ್ಗೆ ಮಾನ್ಯ ಅಮ್ಮಣ್ಣನವರು ಹೇಳಿದರು. ಸರ್ಕಾರದ ಧೋರಣೆ ಇದರ ಬಗ್ಗೆ ಸ್ಪಷ್ಟವಾಗಿದೆ ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯುತ್ತಾರೆ. ಅದನ್ನು ಸಾಕಷ್ಟು ಪ್ರಮಾಣದಲ್ಲಿ ಈ ಕಾರ್ಖಾನೆಗಳಲ್ಲಿ ಉಪಯೋಗ ಮಾಡಿ ಕಬ್ಬಿನ ಬೆಳೆಯನ್ನು ಅಭಿವೃದ್ಧಿ ಮಾಡಬೇಕೆಂದು ನಮ್ಮ ಧೋರಣೆ ಇದೆ ಕಾರ್ಖಾನೆಗಳ ಇನ್‌ವೆಸ್ಟ್‌ಮೆಂಟ್ ಏರಿದೆ, ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಕೆಲವು ವರ್ಷಗಳ ಹಿಂದೆ ೩-೫ ಕೋಟಿ ರೂಪಾಯಿ ಮಾತ್ರ ಬೇಕಾಗಿತ್ತು. ಈಗ

೭-೮ ಕೋಟಿ ರೂಪಾಯಿ ಬೇಕಾಗುತ್ತದೆ. ಆದರೂ ಕಬ್ಬಿನ ಬೆಳೆಯನ್ನು ಅಭಿವೃದ್ಧಿ ಮಾಡಬೇಕೆಂದು ಸರ್ಕಾರದ ಧೋರಣೆ ಇದೆ. ಈ ಕಾರ್ಖಾನೆಗಳನ್ನು ಒದಗಿಸಿಕೊಡುವುದರಲ್ಲಿ ರಾಜಕೀಯ ಮಾಡುವ ವಿಚಾರ ಸರ್ಕಾರಕ್ಕೆ ಎಳ್ಳಷ್ಟೂ ಇಲ್ಲ. ಅಂತಹವೇನಾದರೂ ನಡೆದಿದ್ದರೆ, ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದರೆ ಅವರು ಸೂಕ್ತವಾಗಿ ವಿಚಾರ ಮಾಡುತ್ತಾರೆ.

ಮಾನ್ಯ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಕಕ್ಕಿಲಾಯ ಅವರು ಮಣಿಪಾಲ್ ಮೆಡಿಕಲ್ ಕಾಲೇಜಿನ ಬಗ್ಗೆ ಪ್ರಸ್ತಾಪ ಮಾಡಿದರು. ಮತ್ತೆ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಮಾತನಾಡಿದರು. ಅದಕ್ಕೆ ಈ ಚರ್ಚೆಯಲ್ಲಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕ ಕಾನೂನು ಪ್ರಗತಿಪರವಾಗಿದೆ. ಬಹುಶಃ ಎಲ್ಲಾ ರಾಜ್ಯಗಳಿಗಿಂತಲೂ ಪ್ರಗತಿಪರವಾದ ಕಾನೂನನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾಡಿದ್ದಾರೆ. ಇದರ ಬಗ್ಗೆ ಹೆಮ್ಮೆ ಪಡಬೇಕು. ಅದರಲ್ಲಿ ಅನುಮಾನ ಇಲ್ಲ. ಅದನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ತರುವುದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಟ್ರಿಬ್ಯುನಲ್ಸ್ ಏರ್ಪಾಡು ಮಾಡಿ ಅದರಲ್ಲಿ ಜನರ ಪ್ರತಿನಿಧಿಗಳಿಗೆ ಅವಕಾಶ ಕೊಟ್ಟಿದ್ದಾರೆ. ನಮ್ಮ ಲೆಕ್ಕದ ಪ್ರಕಾರ ಸರ್‌ಪ್ಲಸ್ ಲ್ಯಾಂಡ್ ನಮ್ಮ ರಾಜ್ಯದಲ್ಲಿ ೪ ಲಕ್ಷ ಎಕರೆ ಸಿಕ್ಕಬಹುದು. ಈ ೪ ಲಕ್ಷ ಎಕರೆ ಸರ್‌ಪ್ಲಸ್ ಲ್ಯಾಂಡನ್ನು ಅದಷ್ಟು ಹಂಚಿಕೆ ಮಾಡುವ ಪ್ರಯತ್ನ ರಾಜ್ಯದಲ್ಲೇ ನಡೆದಿದೆ. ಈ ಸರ್‌ಪ್ಲಸ್ ಲ್ಯಾಂಡ್‌ನ ೫೦ ಪರ್ಸೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಹೋಗತಕ್ಕದ್ದು. ಅದೂ ಅಲ್ಲದೆ ೨೫ ಲಕ್ಷ ಎಕರೆಗಳಷ್ಟು ಟೆನೆಂಟ್ಸ್ ಏನಿದ್ದಾರೆ ಅವರಿಗೆ ಸಂಪೂರ್ಣವಾಗಿ ಅಧಿಕಾರ ಕೊಡುವ ಕಾರ್ಯಕ್ರಮ ಇದೆ. ಇದರಿಂದ ಲ್ಯಾಂಡ್‌ರಿಫಾರ್ಮ್ಸ್ ಕಾನೂನು ಸರಿಯಾಗಿದೆ ಮತ್ತು ಅದನ್ನು ಕಾರ್ಯಗತ ಮಾಡುವುದಕ್ಕೋಸ್ಕರ ಮಾಡಿರತಕ್ಕಂಥ ವ್ಯವಸ್ಥೆ ಕೂಡ ಸರಿಯಾಗಿದೆ ಎಂದು ಹೇಳುತ್ತೇನೆ. ಅದರಲ್ಲಿ ಏನಾದರೂ ಮಾರ್ಪಾಡುಗಳನ್ನು ಮಾಡಲು ಸಲಹೆಗಳೇನಾದರೂ ಇದ್ದರೆ ರೆವಿನ್ಯೂ ಮಂತ್ರಿಗಳು ಅದರ ಬಗ್ಗೆ ಆಸಕ್ತಿ ವಹಿಸಿ ಗಮನವನ್ನು ಕೊಡುತ್ತಾರೆ. ಇದು ನಾವು ನೀವು ಎಲ್ಲರೂ ಸೇರಿ ಮಾಡಬೇಕಾದ್ದು ಇದೆ. ಇದರ ಬಗ್ಗೆ ಕಾನೂನು ಮಾಡಿದ ತಕ್ಷಣ ಅದು ಆಗುವುದಿಲ್ಲ. ಸರ್ಕಾರದ ಎಲ್ಲಾ ಪಕ್ಷದ ಸದಸ್ಯರೂ ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಅವರ ಜಿಲ್ಲೆಗೆ ಸಂಬಂಧಪಟ್ಟ ವಿಚಾರವನ್ನು ಹೇಳಿದರು. ಹೋದವರ್ಷ ಅಲ್ಲಿಗೆ ಹೋದಾಗ ಈ ಮಾತು ಬಂದಿತ್ತು. ನಾವು ಅಲ್ಲಿ ಮನೆಗಳಿಗೋಸ್ಕರ ಹಣದ ಸಹಾಯವನ್ನು ಕೊಟ್ಟು ಅದರಿಂದ ವ್ಯವಸಾಯದ ಭೂಮಿಗೆ ಸಹಾಯವನ್ನು ನೇರವಾಗಿ ಕೊಡಲಿಕ್ಕೆ ಆಗಲಿಲ್ಲ. ಸರ್ಕಾರದ ಹಣದಿಂದ ಇಂತಹ ಸಹಾಯ ಕೊಡುವುದು ಬಹಳ ಕಷ್ಟ. ಏಕೆಂದರೆ ಅಗ್ರಿಕಲ್ಚರಲ್ ಲ್ಯಾಂಡ್ ಒಬ್ಬರಿಗೇ ಸೇರಿದ್ದಲ್ಲ. ಕೆಲವು ಕಡೆ ಡ್ಯಾಮೇಜ್ ಆಗಿರಬಹುದು. ಮುಂದಕ್ಕೆ ಈ ರೀತಿ ಆಗಬಾರದು ಎಂಬುದಕ್ಕೆ ಕಾರ್ಯಕ್ರಮವನ್ನು ಹಾಕುವುದಾದರೆ ಅದರ ಬಗ್ಗೆ ಬೇರೆ ರೀತಿಯಿಂದ ಯೋಚನೆ ಮಾಡುವುದಕ್ಕೆ ಸಾಧ್ಯ ಇದೆ. ಇಂತಹ ಕಾರ್ಯಕ್ರಮಗಳಿಗೆ ಇನ್‌ಸ್ಟಿಟ್ಯೂಷನಲ್ ಫೈನಾನ್ಸ್ ಬ್ಯಾಂಕುಗಳು ಏನಿವೆ ಅದರಿಂದ ಸಾಕಾದಷ್ಟು ಪ್ರಯತ್ನ ಮಾಡಬೇಕು. ನೇರವಾಗಿ ಸರ್ಕಾರಿ ಬೊಕ್ಕಸದಿಂದ ಇಂತಹ ಎಲ್ಲಾ ಕೆಲಸಗಳಿಗೆ ಹಣವನ್ನು ಕೊಟ್ಟರೆ ಆಗ ಇದಕ್ಕಿಂತ ಮುಖ್ಯವಾಗಿ ಇರತಕ್ಕ ಕೆಲಸಗಳಿಗೆ ಹಣ ಸಾಲದೆ ಬರಬಹುದು ಎಂಬ ಭಯದಿಂದ ಮಾತ್ರ ಆ ಕೆಲಸಕ್ಕೆ ಅವರು ಕೇಳಿದ ರೀತಿಯಲ್ಲಿ ಹಣವನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗಲಿಲ್ಲ.

ಮಾನ್ಯ ಬೈರಪ್ಪಾಜಿಯವರು ಹಲವಾರು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದರು. ಅಪಾಯಿಂಟ್‌ಮೆಂಟ್ ಆಫ್ ಟೀಚರ್ಸ್ ಬಗ್ಗೆ ಹೇಳಿದರು. ಇದು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಬಗ್ಗೆ ಸಂಬಂದಪಟ್ಟದ್ದು ಅಲ್ಲ. ಆದರೂ ಕೂಡ ನಾನು ಅದರ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಎಕನಾಮಿ ಆರ್ಡರ್ ಏನಿದೆ ಅದನ್ನು ಜಾರಿಮಾಡಿ ಈಗಾಗಲೇ ಸಾಕಾದಷ್ಟು ಪ್ರಮಾಣದಲ್ಲಿ ಎಕಾನಮಿ ಆಗಿದ್ದು ಇದೆ. ಆದರ ಉದ್ದೇಶ ಏನೆಂದರೆ ಈ ಎಜುಕೇಷನ್ ವಿಷಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇದರಿಂದ ತೊಂದರೆ ಆಗಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಇದು ಟೀಚರ್ಸ್‌ನ್ನು ಅಪಾಯಿಂಟ್ ಮಾಡುವಾಗ ನೋಡಿ ಅಪಾಯಿಂಟ್ ಮಾಡಬೇಕು. ಎಲ್ಲಿ ಎಕ್ಸೆಸ್ ಆಗಿ ಇದ್ದಾರೆ, ಅಂತಹ ಕಡೆ ಕಡಿಮೆ ಮಾಡಿ, ಎಲ್ಲಿ ಕಡಿಮೆ ಇದ್ದಾರೆ ಅಂತಹ ಕಡೆ ಉಪಾಧ್ಯಾಯರನ್ನು ನೇಮಕ ಮಾಡಬೇಕು. ಟೀಚರ್ಸ್ ಸಂಖ್ಯೆ ಹೆಚ್ಚಿಸುತ್ತಾ ಇದ್ದಾರೆ. ಎಷ್ಟೋ ಕಡೆ ಟೀಚರ್ಸ್‌ಗಳಿಗೆ ಸಾಕಷ್ಟು ಕೆಲಸ ಇಲ್ಲದೆ ಸರ್ಕಾರದ ಸಂಬಳವನ್ನು ತೆಗೆದುಕೊಳ್ಳುತ್ತಿರುವ ಉದಾಹರಣೆಗಳು ಬೇಕಾದಷ್ಟನ್ನು ನಾವು ನೋಡಿದ್ದೇವೆ. ಇದನ್ನು ಸ್ವಲ್ಪ ಕೂಲಂಕಶವಾಗಿ ನೋಡಿ ಇದನ್ನು ಸರಿಪಡಿಸಬೇಕೆಂಬುದೇ ಇದರ ಉದ್ದೇಶ. ಅದರಿಂದಲೆ ಎಕಾನಮಿ ಆರ್ಡರ್ಸ್‌ನ ಅವಶ್ಯಕತೆ ಎಲ್ಲಿ ಇದೆ ಅಂಥ ಕಡೆ ಉಪಾಧ್ಯಾಯರನ್ನು ನೇಮಕ ಮಾಡಬಾರದು. ಅಂಥ ತೊಂದರೆ ಏನಾದರೂ ಉಂಟಾಗಿದ್ದರೆ ಅವರು ನಮ್ಮ ವಿದ್ಯಾಮಂತ್ರಿಗಳಿಗೆ ಹಾಗೂ ನನಗೆ ತಿಳಿಸಿದರೆ ಅದನ್ನು ತಕ್ಷಣ ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆಂದೂ ಈ ಮಾತನ್ನು ನಾನು ಹೇಳಬಯಸುತ್ತೇನೆ.

ಇನ್ನು ನ್ಯಾಷನಲೈಸ್ಡ್ ಬ್ಯಾಂಕುಗಳ ಬಗ್ಗೆ ಮಾನ್ಯ ಮಿತ್ರರು ಬಹಳ ಕಟುವಾಗಿ ಟೀಕೆ ಮಾಡಿದರು. ಆ ಟೀಕೆಯಲ್ಲಿ ಸ್ವಲ್ಪಮಟ್ಟಿಗೆ ಅರ್ಥ ಇದೆ ಎಂದು ನಾನು ಒಪ್ಪಲು ತಯಾರಿದ್ದೇನೆ ಈ ನ್ಯಾಷನಲೈಸ್ಡ್ ಬ್ಯಾಂಕ್‌ಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕ ಜನರಿಗೆ ಎಷ್ಟರ ಮಟ್ಟಿಗೆ ಸಹಾಯ ಸಿಕ್ಕಬೇಕಾಗಿತ್ತೋ ಅಷ್ಟರಮಟ್ಟಿಗೆ ಸಿಕ್ಕಲಿಲ್ಲ ಎಂಬುದು ಎಲ್ಲರು ಒಪ್ಪುವಂತಹ ಮಾತಾಗಿದೆ. ಇದರ ಬಗ್ಗೆ ನಮ್ಮ ಪ್ರಧಾನ ಮಂತ್ರಿಗಳು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಸರಿಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಈಗ ರೂರಲ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಿ ಅಲ್ಲಿಯೇ ಇರತಕ್ಕ ಜನರಿಗೆ ಸಂಪೂರ್ಣವಾಗಿ ರೂರಲ್ ಡೆವಲಪ್‌ಮೆಂಟ್ ಕಡೆಗೆ ಯಾರಿಗೆ ಸಂಪೂರ್ಣವಾದ ಮನೋಭಾವ ಇದೆಯೋ, ಅಂತಹ ಜನರಿಗೆ ಉತ್ತೇಜನ ಕೊಡುವ ಸಲುವಾಗಿ ಹಳ್ಳಿಗಳಲ್ಲಿ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕೆಂದು ವಿಚಾರ ನಡೆಸಿದ್ದಾರೆ. ಅದು ಕೆಲವೇ ತಿಂಗಳಲ್ಲಿ ಇಡೀ ದೇಶದಲ್ಲಿಯೇ ಕಾರ್ಯಗತ ಮಾಡುತ್ತಾರೆಂದು ಎಲ್ಲರೂ ನಂಬಿದ್ದಾರೆ.

ಇನ್ನು ಲ್ಯಾಂಡ್ ಆರ್ಮಿಯ ಬಗ್ಗೆ ಡಿಮ್ಯಾಂಡ್ ನಂ. ೪೮ ರ ಬಗ್ಗೆ ಕೆಲವು ಮಿತ್ರರು ಮಾತನಾಡಿದರು. ಡಿಮ್ಯಾಂಡ್ ನಂಬರ್ ೪೮ ರಲ್ಲಿ ಲ್ಯಾಂಡ್ ಆರ್ಮಿ ಸ್ಥಾಪನೆ ಮಾಡಬೇಕೆಂದು ೨೫ ಲಕ್ಷ ರೂಪಾಯಿಗಳನ್ನು ಷೇರ್ ಕ್ಯಾಪಿಟಲ್ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಈಗಾಗಲೇ ೬ ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್ ಕೊಟ್ಟಿದ್ದೇವೆ. ಅದು ಡಿಮ್ಯಾಂಡ್ಸ್‌ನಲ್ಲಿ ಒಂದು ಡಿಮ್ಯಾಂಡ್ ಆಗಿದೆ. ಲ್ಯಾಂಡ್ ಆರ್ಮಿಯನ್ನು ತೆಗೆಯಬೇಕೆಂದು ಕೆಲವು ಮಿತ್ರರು ಹೇಳಿದುದು ಸರಿಯಾದುದಲ್ಲವೆಂದು ನಾನು ಹೇಳಬೇಕಾಗಿದೆ ಲ್ಯಾಂಡ್ ಆರ್ಮಿ ವಿಚಾರ ಏನು ಇದೆ ಅದು ಸರಿಯಾಗಿ ಇದೆ. ಈವತ್ತಿಲ್ಲ ನಾಳೆ ನಮ್ಮ ದೇಶದಲ್ಲಿ ಲ್ಯಾಂಡ್ ಆರ್ಮಿಯಿಂದ ನಾವು ಉಪಯೋಗವನ್ನು ಪಡೆದುಕೊಳ್ಳಲು ಹಲವಾರು ಕೆಲಸಗಳನ್ನು ಮಾಡಬೇಕಾಗುತ್ತದೆ ಕೆಲಸ ಮಾಡುವಾಗ ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಕರಿಗೆ ಸರಿಯಾದಂತ ತರಬೇತಿ ಕೊಡಬೇಕಾಗುತ್ತದೆ. ಆದ್ದರಿಂದ ಲ್ಯಾಂಡ್ ಆರ್ಮಿ ವಿಚಾರದಲ್ಲಿ ಅದನ್ನು ಕೈಬಿಡಲು ಒಪ್ಪಲಿಕ್ಕೆ ಸಾಧ್ಯವಾಗುವುದಿಲ್ಲ. ಅದರ ಕಾರ್ಯಚಟುವಟಿಕೆಗಳಲ್ಲಿ ಸ್ವಲ್ಪ ತಪ್ಪುಗಳು ಇರಬಹುದು, ಅದನ್ನು ಇನ್ನಷ್ಟು ಸುಧಾರಿಸಲಿಕ್ಕೆ ಅವಕಾಶ ಕೊಡಬೇಕಾಗಿದೆ. ಅದು ಬೇರೆ ವಿಷಯ ಅದರ ಬಗ್ಗೆ ಚರ್ಚೆ ಮಾಡೋಣ, ಅದು ಸಾಕಷ್ಟು ತೃಪ್ತಿಕರವಾಗಿ ಕೆಲಸ ಮಾಡಿಲ್ಲ ಎನ್ನುವುದಕ್ಕಿಂತ ಅದರಿಂದ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ನಡೆಯಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡೋಣ. ಲ್ಯಾಂಡ್ ಆರ್ಮಿ ಸಾಕಷ್ಟು ಶಕ್ತಿಯುತವಾಗಿ ಬೆಳೆದಿಲ್ಲವೆಂದು ಅದನ್ನು ಕೈಬಿಡಲು ಸಾಧ್ಯವಿಲ್ಲ.

ಇನ್ನು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಪ್ರತಿ ವರ್ಷ ೨೦ ಬಾವಿಗಳಿಗೆ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡಬೇಕೆಂದು ಸರ್ವ ಪ್ರಯತ್ನಗಳು ಈ ರಾಜ್ಯದಲ್ಲಿ ನಡೆದಿದೆ. ಇದು ಹಣಕಾಸಿನ ಪ್ರಶ್ನೆಯಲ್ಲ ಇದರಲ್ಲಿ ಬೇರೆ ಡಿಫಿಕಲ್ಟೀಸ್ ಇದೆ. ಅವರೇ ಹೇಳಿದ ಪ್ರಕಾರ ಅಲ್ಯೂಮಿನಿಯಮ್ ಕಂಡಕ್ಟರ್ಸ್ ಸಿಗುತ್ತಾ ಇಲ್ಲ ಅದರ ಅಭಾವ ಜಾಸ್ತಿಯಿದೆ, ಅಷ್ಟೇ ಅಲ್ಲದೆ ಬೇರೆ ಬೇರೆ ರೀತಿಯ ಅಭಾವಗಳನ್ನೆಲ್ಲ ಸರಿಪಡಿಸಿ ನಮ್ಮ ಹಳ್ಳಿಗಳ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ನೀರಾವರಿ ಪಂಪ್‌ಸೆಟ್ಟುಗಳಿಗೆ ಕರೆಂಟ್ ಕೊಡುವ ಕಾರ್ಯಕ್ರಮ ಏನು ಇದೆ ಅದನ್ನು ಬಹಳ ದಕ್ಷತೆಯಿಂದ ಮಾಡಬೇಕೆಂದು ಸರ್ಕಾರದ ಧೋರಣೆ ಇದೆ. ಈ ಕಾರ್ಯಕ್ರಮದ ಬಗ್ಗೆ ತಾತ್ಸಾರ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರಕ್ಕೆ ಇದೆ ಎಂದು ಹೇಳುತ್ತಾ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಅನುಮಾನ ಇರಬೇಕಾದುದಿಲ್ಲವೆಂದು ಹೇಳುತ್ತೇನೆ. ಬೇರೆ ಬೇರೆ ವಿಷಯಗಳಲ್ಲಿ ಅಭಾವ ಸ್ವಲ್ಪಮಟ್ಟಿಗೆ ಉಂಟಾಗಿ ತೊಂದರೆಯಾಗಿರಬಹುದು. ಫರ್ಟಿಲೈಸರ್ಸ್ ಪ್ರೈಸಸ್ ಜಾಸ್ತಿಯಾಗಿದೆ ಎನ್ನುವ ವಾದ ಇದೆ, ಅದು ಕೂಡ ಇನ್ನುಮುಂದೆ ಸ್ವಲ್ಪಮಟ್ಟಿಗೆ ಕಡಿಮೆಯಾಗುವ ಸಂಭವ ಇದೆ. ವ್ಯವಸಾಯ ಕ್ಷೇತ್ರದಲ್ಲಿ ಬೆಲೆಗಳು ಜಾಸ್ತಿಯಾದರೆ ಅದರಿಂದ ಯಾರು ವ್ಯವಸಾಯ ಮಾಡುವುದಕ್ಕೆ ಹೋಗುವುದಿಲ್ಲ, ಯಾರು ಕೂಲಿ ಮಾಡಿ ಜೀವನ ಮಾಡುತ್ತಾರೆ ಅವರಿಗೆ ದೊಡ್ಡ ಅಪಾಯ ಅದರಿಂದ ಉಂಟಾಗುತ್ತವೆ ಇನ್ನೊಂದು ಕಡೆ ಬೆಲೆಗಳು ಏನಾದರೂ ಕಡಿಮೆಯಾದರೆ ಅದರಿಂದ ಅಗ್ರಿಕಲ್ಚರ್ ಇಂಡಸ್ಟ್ರೀಸ್ ಏನು ಇದೆ ಅದನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ ಉತ್ಪಾದನೆಗೆ ಪೆಟ್ಟು ಬೀಳುತ್ತದೆ ಎನ್ನುವ ಭಯ ಕೂಡ ಉಂಟಾಗಿದೆ. ಆದುದರಿಂದ ವ್ಯವಸಾಯ ಕ್ಷೇತ್ರದಲ್ಲಿ ಬ್ಯಾಲೆನ್ಸ್‌ನ್ನು ನಾವು ಮೆಂಟೇನ್ ಮಾಡಿಕೊಂಡು ಹೋಗಬೇಕಾಗುತ್ತದೆ. ಬೆಲೆಗಳು ಕಡಿಮೆಯಾದರೂ ತೊಂದರೆಯಾಗುತ್ತದೆ, ಬೆಲೆಗಳು ಜಾಸ್ತಿಯಾದರೂ ತೊಂದರೆಯಾಗುತ್ತದೆ, ಈ ದೃಷ್ಟಿಯಿಂದ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಬೆಲೆಗಳು ಕಡಿಮೆಯಾಗಬೇಕು ಆದರೆ ಬಹಳ ಕಡಿಮೆಯಾಗುವುದರಿಂದ ಬೇರೆ ರೀತಿಯ ತೊಂದರೆಗಳಿಗೆ ಕಾರಣವಾಗುವುದರಿಂದ ಅತ್ತ ಕಡೆ ಗಮನ ಕೊಡಬೇಕೆಂದು ಹೇಳಿದ್ದಾರೆ

ಇನ್ನು ಪ್ಲೋರ್ ಪ್ರೈಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು, ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಬತ್ತದ ಬೆಳೆಯಾಗಿದ್ದರೂ ಅದನ್ನು ಕೊಂಡುಕೊಳ್ಳುವವರು ಯಾರು ಇಲ್ಲವೆಂದು ಹೇಳಿದರು. ಇದನ್ನು ಅಷ್ಟು ಸುಲಭವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ನಾವು ಲೆವಿ ಪ್ರೈಸನ್ನು ಪ್ಲೋರ್ ಪ್ರೈಸ್ ಎಂದು ತಿಳಿದು

ಕೊಂಡರೆ ತಪ್ಪೇನು ಇಲ್ಲ. ಲೆವಿಪ್ರೈಸ್‌ಗೆ ಬತ್ತವನ್ನು ಮಾರುವುದಕ್ಕೆ ಜನ ಇದ್ದಾರೆ. ಲೆವಿಪ್ರೈಸನ್ನೆ ಫ್ಲೋರ್ ಪ್ರೈಸ್ ಎಂದು ತಿಳಿದುಕೊಳ್ಳಬೇಕು. ಅದಕ್ಕಿಂತ ಕಡಿಮೆ ಬೆಲೆ ಆಗಲಿಕ್ಕೆ ಸಾಧ್ಯವಿಲ್ಲ ಎನ್ನುವ ದೆ ಯರ್ಸ ನಮಗಿದೆ.

ಇನ್ನು ಮಾನ್ಯ ಪುಟ್ಟಸ್ವಾಮಿಯವರು ಮೈನರ್ ಇರಿಗೇಷನ್ ಬಗ್ಗೆ ಹೇಳಿದರು. ಅವರ ಜಿಲ್ಲೆಗೆ ಸಂಬಂಧಪಟ್ಟಂತೆ ತಿಳಿಸಿದ್ದಾರೆ. ಹಿಂದಿನಿಂದಲೂ ಈ ಮಾತನ್ನು ಹೇಳುತ್ತಲೇ ಇದ್ದೇನೆ. ಸ್ಕೇರ್‌ಸಿಟಿ ಕಂಡಿಶನ್ ಜಿಲ್ಲೆಯ ಹಲವು ಭಾಗಗಳಲ್ಲಿ ಉಂಟಾಗಿದೆ ಎಂದು ಹೇಳಿದ್ದಾರೆ ಯಾವ ಯಾವ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ತೊಂದರೆಯುಂಟಾಗಿದೆ ಎಲೆಲ್ಲಿ ಕೆಲಸದ ಅಭಾವವಿದೆ ಅಂಥ ಕಡೆ ಕೆಲಸ ಕೊಡುವು ದರಲ್ಲಿ ಯಾವ ತೊಂದರೆಯೂ ಇಲ್ಲ, ಅದಕ್ಕೋಸ್ಕರವಾಗಿ ಸಾಕಷ್ಟು ಹಣವನ್ನು ಬಜೆಟ್‌ನಲ್ಲಿ ಇಟ್ಟಿದೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ನಮ್ಮ ರೆವಿನ್ಯೂ ಮಂತ್ರಿಗಳು ಇದ್ದಾರೆ, ಕೆಲವು ಹಳ್ಳಿಗಳಲ್ಲಿ ತಾತ್ಕಾಲಿಕವಾಗಿ ಅಭಾವ ಪರಿಸ್ಥಿತಿ ಉಂಟಾಗುವ ಭಯವಿದ್ದರೆ ಅದನ್ನು ನಿವಾರಣೆ ಮಾಡುವುದು ಕಷ್ಟಕರವಾದ ಕೆಲಸವಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ ಎಲೆಕ್ಟ್ರಿಸಿಟಿ ಪಂಪ್ ಸೆಟ್ ಇದರ ಬಗ್ಗೆ ಎಲ್ಲೆಲ್ಲಿ ಬಾವಿಗಳಿವೆ ಅದಕ್ಕೆಲ್ಲ ಪಂಪ್ ಸೆಟ್ಟುಗಳನ್ನು ಹಾಕುವ ಕೆಲ ವನ್ನು ವಿದ್ಯುಚ್ಛಕ್ತಿ ಇಲಾಖೆಯವರು ಮಾಡುತ್ತಾ ಇದ್ದಾರೆ. ಪ್ರಯಾರಿಟಿ ಬೇಸಿಸ್ ಮೇಲೆ ವಿದ್ಯುಚ್ಛಕ್ತಿಯನ್ನು ಕೊಡಬೇ ಕೆನ್ನುವುದು ಸ್ಪಷ್ಟವಾಗಿದೆ. ನಾನು ಕೂಡ ಸಂಬಂಧಪಟ್ಟ ಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ತಿಳಿಸಿದ್ದೇನೆ.

ಇನ್ನು ಶ್ರೀ ಹೆಚ್. ಜಿ. ಚನ್ನಪ್ಪನವರು ಬೆಲೆಗಳ ಬಗ್ಗೆ ಹೇಳಿದರು. ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ, ಶ್ರೀ ಕೃಷ್ಣರಾವ್‌ರವರು ಕೂಡ ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ರಸ್ತೆಯ ಬಗ್ಗೆ ಹೇಳಿದರು. ಈ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಮೂಗಾವಿ ರಸ್ತೆಯನ್ನು ಮಾಡುವುದ ಕ್ಕೋಸ್ಕರವಾಗಿ ಈ ವರ್ಷ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಮೂಗಾವಿ ರಸ್ತೆಯನ್ನು ಮಾಡುವ ಮುಂಚೆ ಈ ಮಾತನ್ನು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಮೂಗಾವಿ ರಸ್ತೆಗೆ ಲಕ್ಷ ಕೊಡುತ್ತಿಲ್ಲ, ದುಡ್ಡು ಒದಗಿಸಿಲ್ಲ ಎಂದು ಹೇಳಿದ್ದಾರೆ ಈ ಮಾತನ್ನು ನಾನು ಒಪ್ಪುವುದಿಲ್ಲ. ಅವರು ಏನಾದರೂ ಪಿ. ಡಬ್ಲ್ಯು. ಡಿ. ಮಿನಿಸ್ಟರ್‌ರವರ ಹತ್ತಿರ ಚರ್ಚೆಮಾಡಿ ಆ ರಸ್ತೆಗಳು ಬಹಳ ಮುಖ್ಯವಾದುವು ಎಂದು ಹೇಳಿದರೆ, ಅವುಗಳನ್ನು ಮಾಡುವುದರಲ್ಲಿ ಎಳ್ಳಷ್ಟೂ ತೊಂದರೆಯಿಲ್ಲ ಎಂದು ನಾನು ಹೇಳುತ್ತೇನೆ, ಹಣಕಾಸಿನ ತೊಂದರೆಯಂತೂ ಮೊದಲೇ ಇಲ್ಲ. ಶ್ರೀಮತಿ ಸುಮತಿ ಮಡಿಮಾನ್ ಅವರು ಉಮನ್ಸ್ ಎಜುಕೇಷನ್ ಬಗ್ಗೆ ಬಹಳ ಆಸಕ್ತಿಯಿಂದ ಭಾಷಣ ಮಾಡಿದರು. ಇದರ ಬಗ್ಗೆ ಭಿನ್ನಾಭಿ ಪ್ರಾಯವಿಲ್ಲ, ಸರ್ಕಾರಕ್ಕೂ ಕೂಡ ಅಷ್ಟೇ ಕಳವಳ ಇದೆ ಉಮನ್ಸ್ ಎಜುಕೇಷನ್ ಬಗ್ಗೆ ಏನು ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಲಿಕ್ಕೆ ಸಾಧ್ಯ ಎಂದು ಆಗಲೇ ಹೇಳಿದ್ದೇನೆ. ಅವರಲ್ಲೂ ಸ್ಪೀಕರ್‌ರವರು ಇರು ವಾಗ ಬೇರೆ ಮಾತು ಹೇಳುವುದಕ್ಕೆ ಸಾಧ್ಯವಿಲ್ಲ. She is the best gurdian of women's intere t not only in the House but also in the whole State and we will fully co-operate in any constructive programmes for the women's education.

MADAM SPEAKER.—Thank you very much.

ಶ್ರೀ ಎಂ ವೈ. ಘೋರ್ಪಡೆ.—ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಡಿಮ್ಯಾಂಡ್ ನಂಬರ್ ೮೮ರ ಬಗ್ಗೆ ಪ್ರಸ್ತಾಪ ಮಾಡಿದರು. ನಾವು ಬರೀ ಮೋಟಾರ್ ವೆಹಿಕಲ್ಸ್ ಬಗ್ಗೆ ೧೦ ಪರ್ಸೆಂಟ್ ಸರ್‌ಚಾರ್ಜ್ ಹಾಕಿದ್ದೇವೆ. ಅದಕ್ಕೆ ಮಾತ್ರ ಇದು ಅನ್ವಯಿಸುತ್ತದೆ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ಗೆ ಅನ್ವಯಿಸುವು ದಿಲ್ಲ. ಟ್ಯಾಕ್ಸ್ ಹಾಕಿ ರಸ್ತೆಗಳನ್ನು ಮಾಡಬೇಕು ಎಂದು ಈಗಾಗಲೇ ಆದರಿಂದ ಬರುವ ೨ ಕೋಟಿ ರೂಪಾಯಿಗಳನ್ನು ಫಂಡ್‌ಗೆ ಸೇರಿಸುವ ಕಾರ್ಯಕ್ರಮ ಮಾಡುವಾಗ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ತೋರಿಸಬೇಕಾಗುತ್ತದೆ. ಅದೇ ಇದರ ಉದ್ದೇಶ. ಮತ್ತೆ ಶ್ರೀಮಾನ್ ರಾಮಸ್ವಾಮಿಯವರು ಫಾರೆಸ್ಟ್ ಲ್ಯಾಂಡ್ ಬಗ್ಗೆ ಹೇಳಿದರು. ನಾನು ಫಾರೆಸ್ಟ್ ಮಂತ್ರಿಗಳ ಪರವಾಗಿ ಅದಕ್ಕೆ ಉತ್ತರ ಹೇಳುವ ಪ್ರಯತ್ನ ಮಾಡುವುದಿಲ್ಲ. ಇಷ್ಟು ಹೇಳುತ್ತೇನೆ, ಹರಿಜನ-ಗಿರಿಜನರು, ಹಿಂದುಳಿದಿರತಕ್ಕ ಜನ ಹಲವಾರು ವರ್ಷ ಗಳಿಂದ ಈ ಫಾರೆಸ್ಟ್ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಬಿಡಿಸಿ, ಅಲ್ಲಿ ಗಿಡಗಳನ್ನು ನೆಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಫಾರೆಸ್ಟನ್ನು ಕಾಪಾಡಬೇಕು ಫಾರೆಸ್ಟನ್ನು ಕಾಪಾಡದೇ ಹೋದರೆ ಮಳೆ ಬರುವುದಿಲ್ಲ, ಆದರ ಬಗ್ಗೆ ಕಟ್ಟುನಿಟ್ಟಾಗಿ ಇರಬೇಕು ಶ್ರೀಮಾನ್ ಪಾಟೀಲರು ಮಂತ್ರಿ ಗಳಾಗಿದ್ದಾಗ ಯಾವ ಧೋರಣೆಯನ್ನು ಹಾಕಿದ್ದರೋ ಆ ಧೋರಣೆ ಇವತ್ತಿಗೂ ಇದೆ. ೧೦-೧೫ ವರ್ಷ ಗಳಿಂದ ಫಾರೆಸ್ಟ್‌ನಲ್ಲಿ ಕೆಲವರು ಬೆಳೆ ಮಾಡುತ್ತಿದ್ದಾರೆ. ಅಂಥಾ ಹಾರ್ಡ್ ಕೇಸಸ್ ಏನಿವೆ ಅವುಗಳನ್ನು ಸರ್ಕಾರ ಸಿಂಪತೆಟಿಕ್ಕಾಗಿ ನೋಡುತ್ತದೆ. ೧೨-೧೫ ವರ್ಷಗಳಿಂದ ಸತತವಾಗಿ ಫಾರೆಸ್ಟ್ ಲ್ಯಾಂಡ್‌ನಲ್ಲಿ

ಸಾಗುವಳಿ ಮಾಡಿಕೊಂಡಿರತಕ್ಕವರನ್ನು ಈಗ ಓಡಿಸಿ, ಹೊಸದಾಗಿ ಗಿಡ ಹಚ್ಚಬೇಕು ಎನ್ನುವ ಧೋರಣೆ ಸರ್ಕಾರಕ್ಕೆ ಇಲ್ಲ. ಫಾರೆಸ್ಟ್ ಲ್ಯಾಂಡನ್ನು ಎನ್‌ಕ್ರೋಚ್‌ಮೆಂಟ್ ಮಾಡದಂತೆ ನೋಡಿಕೊಳ್ಳಬೇಕು. ೧೦-೧೫ ವರ್ಷಗಳಿಂದ ಭೂಮಿ ಮಾಡಿಕೊಂಡು ಬಂದಿರತಕ್ಕಂಥ ಹಾರ್ಡ್‌ಕೇಸಸ್‌ನ್ನು ಸಿಂಪತೆಟಿಕ್ಕಾಗಿ ನೋಡುತ್ತದೆ.

ಶ್ರೀ ಎಸ್. ಎಂ. ಶಿರಸ್ಟಾಳಿ ಚಂದ್ರಶೇಖರ್.—೧೦-೧೫ ವರ್ಷಗಳಿಂದ ಫಾರೆಸ್ಟ್ ಲ್ಯಾಂಡಿನಲ್ಲಿ ಸಾಗುವಳಿ ಮಾಡಿಕೊಂಡಿರತಕ್ಕಂಥ ಕೇಸಸ್‌ನ್ನು ಹುಮ್ಯಾನಿಟಿಯಿಂದ ಕನ್‌ಸಿಡರೇಷನ್ ಮಾಡುತ್ತೇವೆ ಎಂದು ತಾವು ಹೇಳಿದಿರಿ, ಹಾಗೆ ತಾವು ಒಂದು ಸರ್ಕ್ಯುಲರ್ ಕಳುಹಿಸಿಕೊಡುತ್ತೀರಾ ?

SRI M. Y. GORPADE.—I am only saying that if you bring it to the notice of the concerned Minister I am sure he will take sympathetic view of such hard casses. But it cannot be a policy of the Government to abandon all such forest areas. Certainly some poor people who have continuously cultivated for 10 to 15 years, for them, the Government is not going to chase them away in order to plant trees.

ಶ್ರೀ ಎಂ ಬಿ. ರಾಮಸ್ವಾಮಿ.—೧೦-೧೫ ವರ್ಷಗಳಿಂದ ಸಾಗುವಳಿ ಚೀಟಿ ಇಲ್ಲದೆ ಫಾರೆಸ್ಟ್ ಲ್ಯಾಂಡ್‌ನಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಸಹಾನುಭೂತಿಯಿಂದ ವರ್ತನೆ ಮಾಡುತ್ತೀರಾ. ಅವರ ಮೇಲೆ ಈಗ ಕೇಸಸ್ ಹಾಕಿದ್ದಾರೆ.

SRI M. Y. GHORPADE.—I am only making a general statement. We want to be sympathetic in such cases. I cannot go into individual cases. It would be sufficient for me to say that we are sympathetic in such cases.

ಮತ್ತೆ ಮನೆಗಳನ್ನು ಕಟ್ಟುವ ವಿಷಯದಲ್ಲೂ ಕೂಡ ನಾವು ಪ್ರತಿವರ್ಷ ೫೦,೦೦೦ ಮನೆಗಳನ್ನು ಪ್ರಾರಂಭಿಸಬೇಕು ಎಂದು ಇದ್ದೇವೆ. ಪೀಪಲ್ಸ್ ಹೌಸಿಂಗ್ ಪ್ರೋಗ್ರಾಂ ಪ್ರಕಾರ ಈಗಾಗಲೇ ೩೫—೩೭ ಸಾವಿರ ಮನೆಗಳನ್ನು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಈಗಾಗಲೇ ೧೨ ಅಥವಾ ೧೪ ಸಾವಿರ ಮನೆಗಳು ಪೂರ್ತಿಯಾಗಿರಬೇಕು ಈ ೩೭ ಸಾವಿರ ಮನೆಗಳಲ್ಲದೆ ಅಕ್ಟೋಬರ್ ೨ನೇ ತಾರೀಖು ಗಾಂಧಿ ಜಯಂತಿಯ ದಿನ ಪ್ರತಿಯೊಂದು ತಾಲ್ಲೂಕಿಗೆ ಸೇರಿಕೊಂಡಂತೆ ೧೦೦ ಮನೆಗಳನ್ನು ಹೊಸದಾಗಿ ಪ್ರಾರಂಭ ಮಾಡಬೇಕು ಎಂದು ಇದ್ದೇವೆ. ಅಂದರೆ ಇಡೀ ಕರ್ನಾಟಕದಲ್ಲಿ ೧೭,೫೦೦ ಹೊಸ ಮನೆಗಳನ್ನು ಪ್ರಾರಂಭ ಮಾಡಿದ ಹಾಗಾಯಿತು. ಇದನ್ನೂ ಸೇರಿಸಿದರೆ ಈ ಕಾರ್ಯಕ್ರಮದಲ್ಲಿ ೫೦,೦೦೦ ಮನೆಗಳನ್ನು ಪ್ರಾರಂಭ ಮಾಡಿದಂತೆ ಆಗುತ್ತದೆ. ಇದಕ್ಕೋಸ್ಕರ ಬಜೆಟ್‌ನಲ್ಲಿ ೪ ಕೋಟಿ ರೂಪಾಯಿಗಳನ್ನು ಸೇರಿಸಿದ್ದೇವೆ. ಹಿಂದೆ ಯಾವ ಕಾಲಕ್ಕೂ ೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಿಲ್ಲ. ಇದಲ್ಲದೆ ಸೈಟುಗಳನ್ನು ಹಂಚುವುದಕ್ಕೋಸ್ಕರ ಎರಡು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಸೇರಿಸಿದ್ದೇವೆ. ಈಗಾಗಲೇ ೩ ಲಕ್ಷ ೩೭,೦೦೦ ಸೈಟುಗಳನ್ನು ಹಂಚಿದ್ದೇವೆ. ಈ ೩ ಲಕ್ಷ ೩೭,೦೦೦ ಸೈಟುಗಳನ್ನು ೫ ಲಕ್ಷಕ್ಕೆ ಏರಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಈ ಸೈಟುಗಳನ್ನು ಹಂಚುವ ಕೆಲಸ ಪ್ರಾರಂಭದಲ್ಲಿ ಸುಲಭವಾಗಿತ್ತು. ಈಗ ಲ್ಯಾಂಡ್‌ನ್ನು ಅಕ್ವೈರ್ ಮಾಡಿ ಹಂಚಬೇಕಾಗಿದೆ, ಈ ೩ ಲಕ್ಷ ೩೭ಸಾವಿರ ಸೈಟುಗಳಲ್ಲದೆ ೧ಲಕ್ಷ, ೬೭ಸಾವಿರ ಸೈಟುಗಳನ್ನು ಕೊಡಬೇಕಾದರೆ ೮—೧೦ ಸಾವಿರ ಎಕರೆ ಭೂಮಿಯನ್ನು ಅಕ್ವೈರ್‌ಮಾಡಿ ಕೊಡಬೇಕಾಗುತ್ತದೆ, ಇದು ಎಷ್ಟು ಕಷ್ಟ ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—೨೫೦೦ ರೂಪಾಯಿ ಮಂಜೂರು ಮಾಡಿದ್ದೀರಿ, ಅದನ್ನು ಜಾಸ್ತಿ ಮಾಡುವ ಯೋಚನೆಯನ್ನು ತಾವು ಮಾಡಬೇಕು

ಶ್ರೀ ಎಂ. ವೈ. ಘೋರ್ಪಡೆ.—ಒಂದು ಸಾವಿರ ರೂಪಾಯಿ ಸಾಲ ಕೊಡುತ್ತೇವೆ, ಒಂದು ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೇವೆ. ಅಷ್ಟರಲ್ಲೇ ಅವರು ೩೦೦೦, ೩೫೦೦ ಮನೆಗಳನ್ನು ಕಟ್ಟಿದ್ದಾರೆ. ವಿಶೇಷವಾಗಿ ಮಲೆನಾಡ ಪ್ರದೇಶದಲ್ಲಿ ಕೆಲವುಕಡೆ ಮಳೆ ಜಾಸ್ತಿಯಾಗಿ ಒಂದೆರಡು ಮನೆಗಳು ಬಿದ್ದಿರಬಹುದು. ಒಂದು ೧೦ ಮನೆಗಳು ಬಿದ್ದ ತಕ್ಷಣ ಈ ಕಾರ್ಯಕ್ರಮದಲ್ಲಿ ಕಟ್ಟಿರತಕ್ಕ ಎಲ್ಲಾ ಮನೆಗಳೂ ಬೀಳುತ್ತವೆ ಎಂದಲ್ಲ. ಜನರಿಗೆ ನಂಬಿಕೆ ಬಾರದೇ ಇರುವ ರೀತಿಯಲ್ಲಿ ಮಾತನಾಡಬಾರದು. ಮಲೆನಾಡು ಪ್ರದೇಶದಲ್ಲಿ ಏನು ಕಟ್ಟಿದರೂ ಬೀಳುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಮಲೆನಾಡಿನಲ್ಲಿ ಬಿದ್ದ ಮನೆಗಳ ವಿಷಯ ಹೇಳುತ್ತಾ ಇಲ್ಲ. ತಾವು ಒಂದು ಸಾವಿರ ರೂಪಾಯಿ ಲೋನ್. ಒಂದು ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೀರಿ. ಈ ಸಾಲದ ಅಂಶವನ್ನು ಜಾಸ್ತಿಮಾಡಿದರೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ.—ಸದ್ಯಕ್ಕಂತೂ ಆ ವಿಚಾರವನ್ನು ಸರ್ಕಾರ ಕೈಗೊಂಡಿಲ್ಲ. ಒಟ್ಟಿನಲ್ಲಿ ಈ ಒಂದು ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಈ ಹೊಸ ತುರ್ತುಪರಿಸ್ಥಿತಿ ವಾತಾವರಣದಲ್ಲಿ ಅಧಿಕಾರಸ್ಥರು ಹೆಚ್ಚಿನ ಆಸಕ್ತಿ ವಹಿಸಿ, ಇದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ಇನ್ನು ೫-೬ ತಿಂಗಳಲ್ಲಿ ೮—೧೦ ಸಾವಿರ ಎಕರೆ ಭೂಮಿಯನ್ನು ಅಕ್ವೈರ್ ಮಾಡಬೇಕು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಡೆಪ್ಯುಟಿ ಕಮಿಷನರ್‌ರವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ ಈ ಕೆಲಸ ಯಾವ ಕಾಲಕ್ಕೂ ಆಗಿದ್ದಿಲ್ಲ ಇಷ್ಟೊಂದು ಅಂದರೆ ೧ಲಕ್ಷ ೬೦ ಸಾವಿರ ಸೈಟುಗಳನ್ನು ಮುಂದೆ ಬರುವ ಐದಾರು ತಿಂಗಳಲ್ಲಿ ಹಂಚಿಕೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ನಂಬಿಕೆ ಇದೆ. ಇದನ್ನು ಮಾಡುವಾಗ ಎಲ್ಲರ ಸಹಕಾರ ಬೇಕಾಗುತ್ತದೆ, ಎಲ್ಲರ ವಿಶ್ವಾಸ ಕೂಡ ಬೇಕಾಗುತ್ತದೆ, ಇದರ ಬಗ್ಗೆ ಟೀಕೆ ಮಾಡುವಾಗ ಜವಾಬ್ದಾರಿ ಸ್ಥಾನದಲ್ಲಿರುವವರು ದಯವಿಟ್ಟು ಈ ಜನತಾ ಕಾರ್ಯಕ್ರಮದ ಬಗ್ಗೆ ವಿಶ್ವಾಸ ಕಡಿಮೆಯಾಗುವ ರೀತಿಯಲ್ಲಿ ಮಾತನಾಡಬಾರದು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ವಿಷಯದಲ್ಲಿ ಎಂ. ಎಲ್. ಎ.ಗಳು ಆಯಾಯ ತಾಲ್ಲೂಕಿನಲ್ಲಿ ನಿವೇಶನಗಳನ್ನು ಹಂಚುವುದಕ್ಕಾಗಲೀ, ಕಟ್ಟಡಗಳನ್ನು ಮಾಡುವುದಕ್ಕಾಗಲಿ—ಅವರ ಕಡೆ ಗಮನ ಕೊಡುತ್ತಿಲ್ಲ, ತಾಲ್ಲೂಕು ಬೋರ್ಡಿನ ಅಧಿಕಾರಿಗಳು, ಟಿಡಿಬಿ ಪ್ರೆಸಿಡೆಂಟ್, ಚುನಾಯಿತರಾದವರು ಏನಿದ್ದಾರೆ ಅವರೂ ಲಕ್ಷ್ಯ ಕೊಡುತ್ತಿಲ್ಲ. ಆದುದರಿಂದ ಸರ್ಕಾರ ಸಹಕಾರ ಈ ಕಾರ್ಯಕ್ರಮದಲ್ಲಿ ತಮಗೆ ಯಾವರೀತಿ ಬೇಕು ಎನ್ನುವುದನ್ನು ಹೇಳಬೇಕು.

12-00 Noon.

ಶ್ರೀ ಎಂ ವೈ. ಘೋರ್ಪಡೆ.—ಸ್ವಾಮಿ ನಾವು ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೇವೆ, ಆಯಾ ತಾಲ್ಲೂಕು ಬೋರ್ಡುಗಳಿಗೆ ಸಂಬಂಧಪಟ್ಟ ವಿಧಾನಸಭಾ ಸದಸ್ಯರು ಯಾರು ಇದ್ದಾರೆ ಅವರ ಸಲಹೆಗಳನ್ನು ತೆಗೆದುಕೊಂಡು ಕೆಲಸಗಳನ್ನು ಮಾಡಬೇಕೆಂದು ತಿಳಿಸಿದ್ದೇವೆ. ಇಂಥಿಂಥ ಕಡೆ ಮನೆಗಳನ್ನು ಕಟ್ಟಬೇಕು ಎಂದು ಎಷ್ಟೋ ಜನ ಎಂ.ಎಲ್.ಎ ಗಳು ನನಗೆ ಕಾಗದ ಬರೆಯುತ್ತಾರೆ. ನಾವು ಆಗ ಅಧಿಕಾರಿಗಳಿಗೆ ತಿಳಿಸಿದಾಗ ಅದಕ್ಕೆ ಅವರು ಸಾಕಷ್ಟು ಬೆಲೆ ಕೊಡಬೇಕು, ಕೊಟ್ಟೇ ಕೊಡುತ್ತಾರೆ. ಅದೇ ರೀತಿಯಲ್ಲಿ ನಮ್ಮ ಸದಸ್ಯರೆಲ್ಲರೂ ದಯಮಾಡಿ ಹಳ್ಳಿಹಳ್ಳಿಗೆ ಹೋಗಿ ಆಯಾ ಗ್ರಾಮಗಳಲ್ಲಿ ಯಾವ ಯಾವ ಸರ್ವೇ ನಂಬರ್ ಅನ್ನು ಅಕ್ವಯರ್ ಮಾಡಿಕೊಂಡರೆ ಗ್ರಾಮದ ಜನಗಳಿಗೆ ಒಳ್ಳೆಯದಾಗುತ್ತದೆ ಜನರಿಗೆ ತೃಪ್ತಿಯಾಗುತ್ತದೆ ಎನ್ನುವ ಪಟ್ಟಿಯನ್ನು ನಮಗೆ ನೇರವಾಗಿ ಕೊಟ್ಟರೆ ಅದರಿಂದ ಖಂಡಿತವಾಗಿಯೂ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ.

ಶ್ರೀ ಕೆ. ಎಫ್. ಪಾಟೀಲ್.—ಚರ್ಚೆಗೋಸ್ಕರ ಹೇಳಿದಂಥ ಮಾತಾಗಬಾರದು.

ಶ್ರೀ ಎಂ ವೈ. ಘೋರ್ಪಡೆ.—ಇದರಿಂದ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಅಂಥ ಸದಸ್ಯರಿಗೆ ನಾವು ಕೃತಜ್ಞತೆಯನ್ನು ಕೊಡಬೇಕಾಗುತ್ತದೆ. ಇದಕ್ಕೆ ನಾವು ಸಾಕಷ್ಟು ಬೆಲೆ ಕೊಡಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಎಲ್ಲಿಯೋ ಒಂದು ಕಡೆ ವಿರುದ್ಧವಾಗಿ ನಡೆದರೆ ಅದನ್ನು ನಮ್ಮ ಸದಸ್ಯರು ನಮ್ಮ ಗಮನಕ್ಕೆ ತಂದರೆ ಸರಿಯಾದಂಥ ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ, ನಿಮ್ಮಗಳ ಸಲಹೆಯನ್ನು ತೆಗೆದುಕೊಳ್ಳಬಾರದು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ.

ಶ್ರೀ ಬಿ ಬೈರಪ್ಪಾಜಿ.—ಮಾನ್ಯ ಸಚಿವರು ಹೇಳಿದರು, ಭತ್ತ ಸಂಗ್ರಹಣೆಯ ಬಗ್ಗೆ ಮತ್ತು ಲೆವಿ ಬಗ್ಗೆ ಮುಖ್ಯಮಂತ್ರಿಗಳು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡಿದ್ದರು ಇದರಿಂದ ಸ್ಟೇಟ್‌ಗೆ ಬಹಳ ಅನುಕೂಲವಾಯಿತು. ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಅನ್ನು ರೆಸ್ಟ್ರಿಕ್ಟ್ ಮಾಡಿದ್ದುದು. ಈಗ ಆ ಬಗ್ಗೆ ಪುನರ್ ಆಲೋಚನೆ ಮಾಡಿದರೆ ಬಡ ರೈತರಿಗೆ ಅನುಕೂಲವಾಗುತ್ತದೆ ಭತ್ತವನ್ನು ಕೊಳ್ಳುವವರು ಇಲ್ಲ. ಮುಖ್ಯಮಂತ್ರಿಗಳು ಈ ಬಗ್ಗೆ ಪರಿಶೀಲನೆ ಮಾಡಿ ಮಾಡಬೇಕು. ಈಗಿನ ಸಂದರ್ಭದಲ್ಲಿ ಈ ಬಗ್ಗೆ ಪುನರ್‌ವಿಮರ್ಶೆ ಮಾಡುವುದು ಸೂಕ್ತ ಎಂದು ನಾನು ಸರ್ಕಾರಕ್ಕೆ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇದಕ್ಕೆ ಕಾರಣ ಅನೇಕ ಕಡೆ ಭತ್ತವನ್ನು ಕೊಳ್ಳುವವರಿಲ್ಲ ೧೦—೧೫ ರೂಪಾಯಿಗಳ ಮೇಲೆ ಲೆವಿ ರೇಟು

ಬರುವುದಿಲ್ಲ. ಗೊಬ್ಬರದ ರೇಟು ಜಾಸ್ತಿಯಾಗಿದೆ, ಕೂಲಿ ರೇಟು ಜಾಸ್ತಿಯಾಗಿದೆ, ಈಗಿರುವ ಭತ್ತದ ರೇಟಿನಿಂದ ರೈತನು ತನ್ನ ಖರ್ಚನ್ನು ಹುಟ್ಟಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಸ್ವಲ್ಪ ಕಾಲ ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ರೆಸ್ಟ್ರಿಕ್ಷನ್ ಅನ್ನು ತೆಗೆದು ಬಾರ್ಡರ್ಸ್‌ನಲ್ಲಿ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಭತ್ತದ ರೇಟು ಬಹಳ ಬಿದ್ದು ಹೋಗಿದೆ.

ಶ್ರೀ ಡಿ. ದೇವರಾಜ ಅರಸ್. (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಭತ್ತದ ಬಗ್ಗೆ ನಾನು ಎರಡು ವಿಷಯಗಳನ್ನು ಸಭೆಯಲ್ಲಿ ತಿಳಿಸಬೇಕು ಎಂದು ಇದ್ದೇನೆ. ಈಗತಾನೆ ಮಾನ್ಯ ಬೈರಪ್ಪಾಜಿಯವರು ಪ್ರಸ್ತಾಪಮಾಡಿದಂಥ ವಿಚಾರದಲ್ಲಿ ಅವರು ಭತ್ತವನ್ನು ಕೊಂಡುಕೊಳ್ಳುವವರಿಲ್ಲ ಎಂದು ಹೇಳಿದರು, ಭತ್ತವನ್ನು ಸರ್ಕಾರದವರೇ ಕೊಂಡುಕೊಳ್ಳುತ್ತಾರೆಂದು ನಾನು ಆಗಲೇ ಹೇಳಿದ್ದೇನೆ. ಅವರು ರೈತರು ಬೆಳೆದ ಹಸಿ ಭತ್ತವನ್ನು ಕೊಂಡುಕೊಳ್ಳಿ ಎಂದು ಹೇಳುತ್ತಾರೆ, ಅದು ಸ್ವಲ್ಪ ಕಷ್ಟ. ಅವರು ಸ್ವಲ್ಪ ಭತ್ತವನ್ನು ಒಣಗಿಸಿ ಇಟ್ಟುಕೊಳ್ಳಲಿ, ಆಗಲೂ ಅವರಿಗೆ ನಷ್ಟವಾಗುವುದು ಕಂಡರೆ ಭತ್ತವನ್ನು ಫುಡ್ ಕಾರ್ಪೊರೇಷನ್‌ನವರು ತೆಗೆದುಕೊಳ್ಳಬೇಕು ಎಂದು ತೀರ್ಮಾನವಾಗಿದೆ, ಅದರಂತೆ ಆದೇಶ ಕೊಟ್ಟಿದೆ. ಅದಕ್ಕೆ ಏನೂ ಯೋಚನೆ ಮಾಡಬೇಕಾಗಿಲ್ಲ, ಕೆಲವು ದಿವಸ ಬಿಸಿಲು ಬಂದು ಭತ್ತ ಒಣಗಲಿ. ಭತ್ತಕ್ಕೂ ದುಡ್ಡು ಬೇಕು ನೀರಿಗೂ ದುಡ್ಡು ಬೇಕು ಎಂದು ರೈತರು ಕೇಳುತ್ತಾರೆ. ಹಸಿ ಭತ್ತವನ್ನು ತೂಗಿದರೆ ೧೦೦ ಕ್ವಿಂಟಾಲ್‌ಗೆ ೧೫ ಕ್ವಿಂಟಾಲ್ ಹೆಚ್ಚು ತೂಕ ಬರುತ್ತದೆ ಹಸಿ ಭತ್ತ ಕೊಟ್ಟರೆ ಹೆಚ್ಚು ದುಡ್ಡು ಬರುತ್ತದೆನ್ನುವ ಭಾವನೆ ರೈತರಿಗೆ ಇದೆ, ಈ ಕಾರಣದಿಂದ ನಾವು ಭತ್ತ ಕೊಂಡುಕೊಳ್ಳುವುದನ್ನು ನಿಧಾನಿಸುತ್ತಿದ್ದೇವೆ. ಹೊರಗಡೆಯವರು ಕೊಂಡು ಕೊಂಡರೆ ಹಸಿ ಭತ್ತಕ್ಕೆ ಸ್ವಲ್ಪ ವಜಾ ಮಾಡಿ ಕೊಂಡು ಕೊಳ್ಳುತ್ತಾರೆ ರೈತರು ಹೆಚ್ಚು ಬೆಲೆ ಸಿಕ್ಕಿದಾಗ ಹಸಿದೋ ಬಿಸಿದೋ ದುಡ್ಡು ಬರುತ್ತದೆ ಎಂದು ಮಾರುತ್ತಾರೆ. ಈಗ ಬೆಲೆ ಕಡಿಮೆ ಇದೆ. ಭತ್ತವನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಇವರಿಗೂ ನಾವು ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಹೆಚ್ಚು ದುಡ್ಡು ಸಿಕ್ಕಿದಾಗ ನಮ್ಮ ಹತ್ತಿರ ಯಾರೂ ಬರುವುದಿಲ್ಲ. ಈಗ ಬೆಲೆ ಬಿದ್ದು ಹೋಗಿದೆ ಆದ್ದರಿಂದ ರೈತರು ನಮ್ಮ ಹತ್ತಿರ ಬರುತ್ತಿದ್ದಾರೆ.

ಮಾನ್ಯ ಕೆ. ಎಫ್. ಪಾಟೀಲರು ಒಂದು ವಿಚಾರವನ್ನು ಪ್ರಸ್ತಾಪಮಾಡಿದರು. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದರು. ನಾವೂ ಸಹ ಅಧಿಕಾರಿಗೆ ವಿಧಾನಸಭಾ ಸದಸ್ಯರು ಕೊಟ್ಟಂಥ ಸಲಹೆಗಳಿಗೆ ಮನ್ನಣೆ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ ಹೀಗೆ ಕೆಲವು ಕಡೆ ಅವರ ಅನುಭವ ಆರೀತಿ ಆಗಿದ್ದರೆ ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಕೆಲವು ಜನರು ಗೊತ್ತಿದ್ದೋ, ಗೊತ್ತಿಲ್ಲದೆಯೋ ಅಥವಾ ಬೇರೆ ಕಾರಣಗಳಿಂದ ಸಂಬಂಧಪಟ್ಟ ಸದಸ್ಯರು ಕೊಟ್ಟಂಥ ಸಲಹೆಗಳನ್ನು ತೆಗೆದುಕೊಳ್ಳದೆ ಕೆಲಸ ಮಾಡಿದ್ದರೂ ಮಾಡಿರಬಹುದು, ಈಗ ವಿಶೇಷ ಪರಿಸ್ಥಿತಿಯನ್ನು ನಾವು ಏನು ಸಾಂದ್ದೇವೆ ಅದರಲ್ಲಿ ಕೆಲವು ಕಾರ್ಯಕ್ರಮಗಳನ್ನು ಇಟ್ಟುಕೊಂಡು, ಈ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎನ್ನತಕ್ಕದ್ದು ಎಲ್ಲರ ಅಭಿಪ್ರಾಯ. ಇದೇ ಸಂದರ್ಭದಲ್ಲಿ ಚುನಾಯಿತ ಸದಸ್ಯರು ಈ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವಲ್ಲಿ ಅವರೂ ಭಾಗಿಯಾಗಬೇಕು ಎನ್ನತಕ್ಕದ್ದರಲ್ಲಿ ಯಾವ ವಿವಾದ ಇರುವುದಕ್ಕೆ ಕಾರಣ ಇಲ್ಲ. ಸರ್ಕಾರದವರು ಹಾಕಿರತಕ್ಕ ೨೦ ಅಂಶಗಳ ಕಾರ್ಯಕ್ರಮ ಜನಸಾಮಾನ್ಯರಿಗೆ ಮುಟ್ಟುವ ರೀತಿಯಲ್ಲಿ ಕಾರ್ಯಗತವಾಗಬೇಕಾದರೆ ಖಾಸಗಿ ಜನರ ಬೆಂಬಲ ಪೂರ್ಣವಾಗಿ ಬೇಕು. ಅದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಪ್ರತಿಯೊಬ್ಬ ಪ್ರಜಾಪ್ರತಿನಿಧಿಗಳು ಅಸೆಂಬ್ಲಿ ಸದಸ್ಯರಾಗಲೀ ಕೌನ್ಸಿಲ್ ಸದಸ್ಯರಾಗಲೀ ಅವರನ್ನು ಒಳಗೊಂಡ ಒಂದು ಕೋಆರ್ಡಿನೇಷನ್ ಬಾಡಿ ಎಂದು ಮಾಡಿ ಆಗಿಂದಾಗ್ಗೆ ಅವರ ಮತ್ತು ಸ್ಥಳೀಯ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸೇರಿಸಿ, ಎಲ್ಲಾ ವಿಷಯಗಳು ಎಷ್ಟು ಮಟ್ಟಿಗೆ ಕಾರ್ಯಗತವಾಗುತ್ತವೆ, ಎಷ್ಟು ಪ್ರಮಾಣದಲ್ಲಿ ಆಗುತ್ತಿವೆ, ಆಗದೆ ಇರುವುದಕ್ಕೆ ಕಾರಣ ಯಾರು, ಸ್ಥಳೀಯ ಅಧಿಕಾರಿಗಳ ಲೋಪವೇ ಅಥವಾ ಅವರ ಅನಾಸಕ್ತಿ ಕಾರಣವೇ ಎಂದು ನಮ್ಮ ಶಾಸಕರು ನೋಡುವಂಥ ಒಂದು ಏರ್ಪಾಡನ್ನು ತಕ್ಷಣದಲ್ಲಿ ಮಾಡುವವರಿದ್ದೇವೆ, ಮಾನ್ಯ ಸದಸ್ಯರು ಹೇಳಿದಂಥ ಲೋಪ ಇದ್ದರೆ ಅದಕ್ಕೆ ಪರಿಹಾರ ಕಂಡು ಹಿಡಿಯಬೇಕಾಗುತ್ತದೆ.

ಶ್ರೀ ಕೆ. ಎಫ್. ಪಾಟೀಲ್.—ಲ್ಯಾಂಡ್ ಆರ್ಮಿ ಕಡೆಗೆ ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ಒಂದು ನಿಗದಿಯಾದಂಥ ಸಂಬಂಧಪಟ್ಟ ವಿಚಾರ ಇದ್ದರೆ ಅದನ್ನು ನಮಗೆ ಬರೆದರೆ ಅದರ ಬಗ್ಗೆ ನಾವು ಲಕ್ಷ್ಯ ಕೊಡುತ್ತೇವೆ. ಇದುವರೆಗೂ ನನಗೆ ತಿಳಿದ ಹಾಗೆ ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಬೇರೆ, ಸರ್ಕಾರದವರು ಡೈರೆಕ್ಟ್ ಮಾಡಿದರೆ ಅವರೂ ಬರಬೇಕಾಗುತ್ತದೆ. ಅಧಿಕಾರಿಗಳು ಮತ್ತು ಶಾಸಕರು ಕೂಡಿ ಕೆಲಸಮಾಡಬೇಕಾಗುತ್ತದೆ. ಮತ್ತು ನಮ್ಮ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾಗುತ್ತದೆ. ಈ ಕಾರ್ಯಕ್ರಮ

ಗಳಲ್ಲಿ ತಾವು ಹೇಳಿದ ಎಲ್ಲಾ ಕಾರ್ಯಕ್ರಮಗಳು ಬರುತ್ತವೆ, ಮನೆ ಕೊಡುವ ವಿಷಯ, ನಿವೇಶನ ಹಂಚುವ ವಿಷಯ, ಆಹಾರ ಸಾಮಗ್ರಿಗಳನ್ನು ಹಂಚತಕ್ಕ ವಿಷಯ, ಮತ್ತು ಸರ್ಕಾರದಿಂದ ಕಂಟ್ರೋಲ್ಡ್ ಕ್ಲಾತ್ ತಯಾರುಮಾಡಿ ಅದನ್ನು ಬಡ ಜನರಿಗೆ ಕಡಿಮೆ ಬೆಲೆಯಲ್ಲಿ ಮಾರುವುದು ಸೀಮೆ ಎಣ್ಣೆ ಹಂಚ ತಕ್ಕದ್ದು ಹೀಗೆ ನಾನಾ ಕೆಲಸಕಾರ್ಯಗಳಲ್ಲಿ ನಮ್ಮ ಶಾಸಕರನ್ನು ಭಾಗಿಯಾಗುವ ರೀತಿಯಲ್ಲಿ ಮಾಡಬೇಕು

ಇದರಲ್ಲಿ ಒಂದು ಮಾತು ತಿಳಿಸುವುದು ಏನು ಇದೆ ಎಂದರೆ, ಶಾಸಕರು ಒಂದು ರೀತಿ ಕಾನೂನು ಬದ್ಧವಾಗಿ, ಶಾಸನ ಬದ್ಧವಾಗಿ ಅಧಿಕಾರಿಗಳಲ್ಲಿ ಏನು ಲೋಪ ಇದೆ ಎನ್ನುವುದನ್ನು ಯಾರು ಹೇಳುವುದ ಕ್ಕಾಗುವುದಿಲ್ಲ. ಒಂದೊಂದು ಕಡೆ ಏನಾಗುತ್ತದೆ ಎಂದರೆ ನಮ್ಮ ಅಧಿಕಾರಿಗಳು ಕೂಡ ಈ ಪ್ರಜಾಸತ್ತೆ ಯಲ್ಲಿ ಶಾಸಕರ ಪಾತ್ರ ಏನು ಎಂಬುದನ್ನು ತಿಳಿದುಕೊಂಡ ಹಾಗೆ ಇಲ್ಲ ; ಅಥವಾ ನಾವು ಅವರಿಗೆ ತಿಳಿಯಪಡಿಸಿಲ್ಲವೋ ಏನೋ ಎರಡೂ ಇರಬಹುದು. ಆದ್ದರಿಂದ ನಾವು ಅವರಿಗೆ ತಿಳಿಯಪಡಿಸುವಂತೆ ಮಾಡಬೇಕು. ಏಕೆಂದರೆ ಇಷ್ಟುವರ್ಷ ಯಾವುದೋ ಒಂದು ರೀತಿಯಲ್ಲಿ ಕೆಲಸಕಾರ್ಯಗಳು ನಡೆದು ಕೊಂಡು ಬಂದಿವೆ, ಇದಕ್ಕೆ ಯಾರೂ ಜವಾಬ್ದಾರರಲ್ಲ ಎನ್ನುವ ಒಂದು ವಾತಾವರಣ ಏನಾ ಇತ್ತು, ಆ ವಾತಾವರಣವನ್ನು ಈಗ ಸಂಪೂರ್ಣವಾಗಿ ಬದಲಾವಣೆ ಮಾಡಬೇಕು ಎನ್ನುವುದೇ ನಮ್ಮ ಮುಖ್ಯ ಉದ್ದೇಶ. ಈಗ ದೇಶದಲ್ಲಿ ಎಮರ್‌ಜೆನ್ಸಿ ಪ್ರಮೊಲ್ಗೇಟ್ ಮಾಡಿರತಕ್ಕದ್ದು ಇದರ ಉದ್ದೇಶ. ನಮ್ಮ ದೇಶದಲ್ಲಿ ಇಂಟರ್‌ನಲ್ ಸೆಕ್ಯುರಿಟಿ ಉಳಿಯಬೇಕಾದರೆ ಜನಸಾಮಾನ್ಯರಲ್ಲಿ ಕೆಲಸಕಾರ್ಯಗಳು ತ್ವರಿತವಾಗಿ ಆಗಬೇಕು, ದೇಶದ ಆರ್ಥಿಕ ಸ್ಥಿತಿಗತಿಗಳು ಸುಧಾರಣೆಯಾಗಬೇಕು. ಯಾವ ಜನರಿಗೆ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲ ಎಂದು ಹೇಳಿದ್ದೇವೆ ಅವರಿಗೆ ಆ ಸ್ವಾತಂತ್ರ್ಯವನ್ನು ತಂದುಕೊಡಬೇಕಾದ್ದು ಇದೆ. ಅಲ್ಲದೇ ಸರ್ಕಾರಿ ಕೆಲಸಗಳಲ್ಲಿ ಅಧಿಕಾರಿಗಳ ಲೋಪ ಎಲ್ಲೆಲ್ಲಿ ಇದೆ, ಯಾರು ಆ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಉದಾಸೀನದಿಂದ ಇದ್ದಾರೆ ಅಂತಹವರ ಮೇಲೆ ಹತೋಟಿ ಮಾಡಲು ಕೆಲವು ಹೊಸ ಮಾರ್ಪಾಡುಗಳನ್ನು ಏನು ಮಾಡಬೇಕು ಈ ವಿಷಯಗಳಲ್ಲಿ ಸರ್ಕಾರ ತೀವ್ರವಾಗಿ ಕಾರ್ಯಕ್ರಮತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಶಾಸಕರನ್ನೊಳಗೊಂಡಂತೆ ಪ್ರತಿ ತಾಲೋಕು ಮಟ್ಟದಲ್ಲೂ ಒಂದು ಸಮನ್ವಯ ಸಮಿತಿ ಮಾಡಿ ಹದಿನೈದು ದಿವಸಗಳಿಗೆ ಒಂದು ಸಾರಿ ಸೇರಿ ಅಲ್ಲಿಯ ಕೆಲಸಕಾರ್ಯಗಳ ಬಗ್ಗೆ ಗಮನಕ್ಕೆ ತೆಗೆದುಕೊಳ್ಳುವಂತೆ ಆಗಬೇಕು ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಶಾಸಕರನ್ನು ಕೂಡ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ತಾವು ಇನ್ನು ಹೆಚ್ಚು ಹೆಚ್ಚು ತಮ್ಮ ಲಕ್ಷ್ಯವನ್ನು ಆಯಾಯ ಕ್ಷೇತ್ರದ ಕೆಲಸ ಕಾರ್ಯಗಳಿಗೆ ಕೊಡಬೇಕು, ಈಗ ಯಾವ ಒಂದು ಲಕ್ಷ್ಯವನ್ನು ಕೊಟ್ಟಿದ್ದೇವೋ ಅದಕ್ಕಿಂಥ ಹೆಚ್ಚಾಗಿ ಲಕ್ಷ್ಯವನ್ನು ಕೊಡಬೇಕು, ಮತ್ತೆ ಈ ಒಂದು ಕಾಲದಲ್ಲಿ ನಾವು ಬೇಗ ಕೆಲಸ ಮಾಡಬೇಕು ಎಂದು ಏನು ಧ್ಯೇಯ ಇಟ್ಟುಕೊಂಡಿದ್ದೇವೋ, ಆ ಧ್ಯೇಯದ ಗುರಿ ಸಾಧನೆ ಮಾಡುವುದಕ್ಕೆ ನಾವು ಕೆಲಸ ಮಾಡೋಣ

MADAM SPEAKER.—I will now put the demands to the vote of the House.

The question is :

"That further sums not exceeding the amounts asshown in respect of demand numbers 1, 23, 24, 26, 37, 38, 45, 47. 43, 49, 52 and 54 be granted to Government to defray the charges which will come in course of payment during the year ending with 31stday of March, 1976"

The motion was adopted and the Demands were granted.

As ordered by the Chair the motion for demand of grants adopted by the House are reproduced below.

DEMAND NO. 1

(1) That a further sum not exceeding Rs. 45,00,000 be granted to Government to defray the charges which will come in course of payment during the year ending the 31st day of March, 1976, in respect of State Legislature and Elections'.

DEMAND No. 23

(2) That a further sum not exceeding Rs. 1,000 be granted to Government to defray the charges which which will come in course of payment during the year ending the 31st day of March 1976 in repect of 'Education (excluding Youth Services) Scientific Research, Art and Culture.'

DEMAND No. 24

(3) That a further sum not exceeding Rs. 15,00,000 be granted to Government to defray the charges which will come in course of payment during the year ending the 31st day of March, 1976, in respect of Youth Services and Flying School'.

DEMAND No. 26

(4) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1976, in respect of 'Public Health and Sanitation',

DEMAND No. 37

(5) That a further sum not exceeding Rs. 69,10,000 be granted to Government to defray the charges which will come in course of payment during the year ending the 31st day of March, 1976, in respect of 'Co-operation, etc'.

DEMAND No. 38

(6) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1976, in respect of 'Agriculture (excluding Horticulture)'.

DEMAND No. 45

(7) That a further sum not exceeding Rs. 10,01,000 be granted to Government to defray the charges which will come in course of payment during the year ending the 31st day of March, 1976, in respect of 'Dairy Development'.

DEMAND No. 47

(8) That a further sum not exceeding Rs. 1,000 be granted to Government to defray the charges which will come in course of payment during the year ending the 31st day of March, 1976, in espect of 'Forest'.

DEMAND No. 48

(9) That a further sum not exceeding Rs. 6,69,000 be granted to Government to defray the charges which will come in course of payment during the year ending the 31st day of March, 1976, in respect of 'Community Development'.

DEMAND No. 49

(10) That a further sum not exceeding Rs. 4,69,06,000 be granted to Government to defray the charges which will come in course of payment during the year ending the 31st day of March, 1976, in respect of 'Industries, Mines and Geology excluding Sericulture'.

DEMAND No. 52

(11) That a further sum not exceeding Rs. 22,54,10,000 be granted to Government to defray the charges which will come in course of payment during the year ending the 31st day of March, 1976, in respect of 'Power Projects'.

DEMAND No. 54

(12) That a further sum not exceeding Rs. 4,50,00,000 be granted to Government to defray the charges which will come in course of payment during the year ending the 31st day of March, 1976, in respect of 'Roads and Bridges'.

The Karnataka Appropriation (No. 4) Bill 1975.

Introduction

MADAM SPEAKER.—I have received the recommendation of the Governor of Karnataka for introduction and consideration of Karnataka Appropriation (No. 4) Bill. 1975 as required under clauses (1) and (3) of Article 207 of the Constitution of India.

SRI M. Y. GHORPADE.—(Minister for Finance) I move :

"That leave be granted to introduce the Karnataka Appropriation (No. 4) Bill, 1975".

MADAM SPEAKER.—Motion moved :

The question is :

"That leave be granted to introduce the Karnataka Appropriation (No. 4) Bill, 1975.

The motion was adopted and the leave was granted.